ಕಲ್ಯಾಣ ಕಿರಣ

ಸೆಪ್ಟಂಬರ್-2008

ಬೆಲೆ-10.00



ಲಿಂಗಗಣಾಚಾರಿ ಮಡಿವಾಳ ಮಾಚಿದೇವರು

Digitalized by e-Sahithya Documentation Forum
Sponsored by Sarayu Foundation Trust



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಶಾಸಕ ಚಂದ್ರಕಾಂತ್ ಬೆಲ್ಲದ, ಶಾಸಕಿ ಸೀಮಾ ಮಸೂತಿ, ಉದ್ಯಮಿ ಜಿ.ಜಿ.ದೊಡವಾಡ ಅವರನ್ನು ಸನ್ಮಾನಿಸಯಿತು..









ಧಾರವಾಡದಲ್ಲಿ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಜಯಂತಿ ಉತ್ಸವವನ್ನು ದಿ.3-9-2008ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲಿ ಪೊ. ಜಿ.ವಿ.ಗುಂಜೆಟ್ಟಿ ಉದ್ಘಾಟಿಸಿದರು.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-8 ಸೆಪ್ಟಂಬರ್ 2008 ವಾರ್ಷಿಕ ಚಂದಾ 100/- ರೂ.

ಬಸವ ಭಾನುವಿನ ಕ್ರಾಂತಿ ಉಷೆ

ಓ ಕ್ರಾಂತಿ ವೀರ, ನಿಮ್ಮಯ ವಾಣಿ
ಕನ್ನಡ ನೆಲವನೇ ಕುಣಿದಾಡಿಸಿತು
ಬಸವ ತತ್ವವನ್ನೇ ಮೆರೆದಾಡಿಸಿತು
ವಿಶ್ವ ಧರ್ಮವ ಹಬ್ಬಿ ಹಸರಿಸಿತು
ಸಮತೆಯ ಧ್ವಜವ ಹಾರಿಸಿತು || 1 ||

ನಿಮ್ಮಯ ಬೋಧೆ ಬುದ್ಧಿಯನರಳಿಸಿ
ಸುಪ್ತ ಚೇತನಗಳ ಎಚ್ಚರಗೊಳಿಸಿತು
ನಿರಭಿಮಾನಿಗಳ ನರನಾಡಿಯ ಮಿಡಿಸಿ
ಧರ್ಮದ ದುಂದುಭಿ ಮೊಳಗಿಸಿತು .
ಕರ್ಮದ ಜಂಜಡ ಹರಿದೊಗೆಯಿಸಿತು || 2 ||

ಸ್ತ್ರೀ ಜಗದ್ಗುರು ಪೀಠವ ಸ್ಥಾಪಿಸಿತು
ದೀನದಲಿತರ ಮೇಲೆ ಧರ್ಮದ ಹೊನಲನು
ಹರಿಸುತ ಹೊಸ ಚೇತನವ ತುಂಬುತ ಬಂದಿತು
ವಿಶ್ವ ಧರ್ಮದ ವೇದಿಕೆ ರಚಿಸಿ
ಸಮತೆಯ ಘೋಷಣೆ ಮೊಳಗಿಸಿತು || 3 ||

ಸುಯಿಧಾನ ಸುಗ್ರಂಥ ಮಾಲೆಯ ಸೃಷ್ಟಿಸಿ
ಗ್ರಂಥ ಕುಸುಮಗಳನು ಅರಳಿಸಿತು
ಕ್ರಾಂತಿಯೋಗಿ ಬಸವಣ್ಣನ ಚಿತ್ರಿಸಿತು
ಕಲ್ಯಾಣ ಕಿರಣದ ಕಾಲುವೆ ಮೂಲಕ
ಜ್ಞಾನದ ಸುಜಲವ ಹರಿಯಿಸಿತು || 4 ||

ಧರ್ಮಕ್ರಾಂತಿಯ ಧೀರಯೋಗಿಯೇ
ಬಸವ ಧರ್ಮದ ಜ್ಞಾನಮದಕರಿಯೇ
ಗುರು ಬಸವೇಶನ ಕರುಣೆಯ ಕುಂಚವು
ಸ್ವಾಮಿ ಲಿಂಗಾನಂದರೆಂಬ ಧೀಮಂತ ಗುರುವ
ಜಗಕೆ ನೀಡಿತು, ಬಸವ ಪಥಿಕರ ಬಾಳ ಬೆಳಗಿಸಿತು. || 5 ||

- ಮಾತಾಜಿ

Digitalized by e-Sahithya Documentation Forum
Sponsored by Sarayu Foundation Trust

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮುಂಬರುವ ಬರುವ ಹಬ್ಬ - ಹುಣ್ಣಿಮೆಗಳು

ಕಲ್ಯಾಣ ಕ್ರಾಂತಿ ಸ್ಮರಣೋತ್ಸವ	-	30-09-08ರಿಂದ 9-10-08ರವರೆಗೆ
ಕಲ್ಯಾಣ ಪರ್ವ	-	ಅಕ್ಟೋಬರ್ 12, 13, 14ರಂದು
ಚನ್ನಬಸವಣ್ಣನವರ ಜಯಂತಿ	-	ಅಕ್ಟೋಬರ್ 29 - ದೀಪಾವಳಿ ಪಾಡ್ಯ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 22923736/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಸಂಪಾದಕೀಯ : - ಮಾತಾಜಿ

1. ಬಣ್ಣಿಸಲಾರದಷ್ಟು ಹಿಗ್ಗು

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ, ನಾಗನೂರು ರುದ್ರಾಕ್ಷಿ ಮಠ, ಶಿವ ಬಸವ ನಗರ, ಬೆಳಗಾವಿ - ಇಲ್ಲಿಂದ ಹೊರಬರುವ ಮಾಸಪತ್ರಿಕೆ (ವಾರ್ಷಿಕ ಚಂದಾ 100) "ಲಿಂಗಾಯತ" - ಇದರ ಆಗಸ್ಟ್ 2008ರ ಸಂಚಿಕೆಯಲ್ಲಿ 2 ಅಂಶಗಳು ಗಮನ ಸೆಳೆಯುವಂತಹವಾಗಿವೆ. ನಾಗನೂರು ಮಠಾಧೀಶರು ಪೂಜ್ಯ ಶ್ರೀ ಸಿದ್ಧರಾಮ ಸ್ವಾಮಿಗಳ ಮಾರ್ಗದರ್ಶನ ಮತ್ತು ಆಶ್ರಯದಲ್ಲಿ, ಶರಣ ಡಾ||ಎಸ್.ಜಿ. ಮಹಾದೇವಪ್ಪನವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಲಿಂಗಾಯತ ಮಾಸ ಪತ್ರಿಕೆ ಈಗ ಖಚಿತ ನಿಲುವಿಗೆ ಬದ್ಧವಾಗಿ ಹೊರಬರುತ್ತಿದೆ. ಅನೇಕ ಮಠಗಳಿಂದ ಸಂಘ ಸಂಸ್ಥೆಗಳಿಂದ ಹೊರಬರುವ ಪತ್ರಿಕೆಗಳು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಬರೆಯುತ್ತ ಗೊಂದಲವನ್ನು ಹುಟ್ಟಿಸುತ್ತಿರುವವು. ವಿರಕ್ತ ಮಠಗಳಿಗೆ ಇದು ಹೀಗೆ ಇದೆ ಎಂದು ಹೇಳುವ ಒಂದು ಪತ್ರಿಕೆ ಅಗತ್ಯವಿತ್ತು. ನಾವು ಹೇಳಿದರೆ ಮಠಾಧೀಶರಿಗೆ ನೋವಾಗುತ್ತದೆ. ಅಕ್ಕಸಾಲಿಗ ಕಿವಿ ಚುಚ್ಚಿದರೆ ನೋವಾಗುವುದಿಲ್ಲ ಎಂಬ ಗಾದೆಯಂತೆ ನಾಗನೂರು ಮಠದಿಂದ ಲಿಂಗಾಯತ ಮಾಸ ಪತ್ರಿಕೆ ಹೊರಬರುತ್ತಿರುವುದು ಬಹಳ ಸೂಕ್ತ.

ಸಂಪಾದಕೀಯದಲ್ಲಿ ಬರೆಯಲಾಗಿದೆ, ವಚನಗಳ ಶುದ್ಧೀಕರಣ ಅಗತ್ಯ ಎಂಬುದಾಗಿ ಇದಕ್ಕೆ ಉದಾಹರಣೆ ಕೊಟ್ಟಿದ್ದಾರೆ.

1. ಅರಮನೆ ಕೂಳನಾದರೆಯೂ ತಂದು

"ಇದು ಅರಮನೆ ಅಲ್ಲ, ಆರ ಮನೆಯ ಎಂದಿರಬೇಕು." ಎಂದಿದ್ದಾರೆ.

2. ಸರ್ವಾಂಗಲಿಂಗವಾದ ಶರಣನು ಯಾವ ದೇಶದಲ್ಲಿ ಆಳಿದಡೇನು ?

ಇದು "ಅಳಿದಡೇನು ಎಂದು ಆಗಬೇಕು." ಎಂದಿದ್ದಾರೆ.

ಸಂಪಾದಕರು ವಿಶ್ಲೇಷಿಸಿ ವಚನಗಳಲ್ಲಿ ಭಾಷಿಕ ಮತ್ತು ಸೈದ್ಧಾಂತಿಕ ಎಂಬ ಎರಡು ರೀತಿಯ ದೋಷಗಳಿವೆ. ಭಾಷಿಕ ದೋಷಗಳೆಂದರೆ ಕಾಗುಣಿತ ದೋಷ, ಒತ್ತಕ್ಷರ ಲೋಪ ಇತ್ಯಾದಿ. ಸೈದ್ಧಾಂತಿಕ ದೋಷಕ್ಕೆ ಧರ್ಮಪಿತ ಬಸವಣ್ಣನವರ ವಚನ 1380, 1085 ಕ.ವಿ.ವಿ. ಪ್ರಕಟಣೆ 1986 ಉಲ್ಲೇಖಿಸಿದ್ದಾರೆ. ಈ ವಚನಗಳಲ್ಲಿ ಅಶ್ಲೀಲ ವಿಚಾರ ಬಂದಿವೆ. ಭಕ್ತನು ಜಂಗಮನಿಗೆ ಪತ್ನಿಯನ್ನು ಸಹ ಕೊಡಬೇಕು ಎಂಬ ಅಸಹ್ಯ ವಿಚಾರವಿದೆ.

ನಾನು ಈ ಮಾತನ್ನು ಎಂದಿನಿಂದಲೂ ಹೇಳುತ್ತ ಬಂದಿದ್ದೇನೆ. ಛಲ ಬೇಕು ಶರಣಂಗೆ ಪರಸತಿಯ ನೊಲ್ಲೆ, ಪರವಧುವನು ಮಹಾದೇವಿ ಎಂಬೆ ಎಂದು ಕಲಿಸುವ ಬಸವಣ್ಣನವರು ಜಂಗಮ -ವೈರಾಗ್ಯ ಮೂರ್ತಿಗೆ ಪತ್ನಿಯನ್ನು ಕೊಡಲು ಹೇಳುವರೆ ? ಇಂಥ ವಚನಗಳು ಪ್ರಕ್ಷಿಪ್ತವೆಂದು ಬಸವ ವಚನ ದೀಪ್ತಿಯಿಂದ ನಾನು ತೆಗೆದುಹಾಕಿದ್ದೇನೆ. ಧರ್ಮಪಿತರ ಈ ವಚನ ನೋಡಿ :

ಮರೆಯಲಾಗದು ಹರಿಯ ಮರೆಯಲಾಗದು ಬ್ರಹ್ಮನ
ಮರೆಯಲಾಗದು ತೆತ್ತೀಸಕೋಟಿ ದೇವರ್ಕಳ
ನಮ್ಮ ಕೂಡಲ ಸಂಗಮದೇವರ ಮರೆಯಲಹುದು.

ಇದು ಈ ರೂಪದಲ್ಲಿ ಎಲ್ಲ ಸಂಪಾದಕರ ಕೃತಿಗಳಲ್ಲಿ ಬಂದಿದೆ. ಇದರ ಅರ್ಥ ಎಷ್ಟು ವಿರೋಧಾಭಾಸವಾಗಿದೆ ಗಮನಿಸಿರಿ. ಹರಿ, ಬ್ರಹ್ಮ, 33 ಕೋಟಿ ದೇವತೆಗಳನ್ನು ಮರೆಯಬಾರದು; ಕೂಡಲ ಸಂಗಮ (ಲಿಂಗ)ದೇವರನ್ನು ಮರೆಯಲಹುದು. ಈ ರೀತಿ ಧರ್ಮಗುರು ಬಸವಣ್ಣನವರು ಹೇಳಲು ಸಾಧ್ಯವೆ ? ಈಗ ಎಸ್.ಜಿ.ಮಹಾದೇವಪ್ಪನವರು ಅರಮನೆಯ ಕೂಳನಾದರೆಯೂ ಎಂಬುದನ್ನು ಆರ ಮನೆಯ ಕೂಳನಾದರೆಯೂ ಎಂದು ಮಾಡಿದ್ದು ಬಹಳ ಅರ್ಥಪೂರಿತವಾದಂತೆ ನಾನು ಮಾಡಿರುವ ಚಿಕ್ಕ ಬದಲಾವಣೆ **ಮ** ವನ್ನು **ಮೆ** ಎಂದು ಮಾಡಿದ್ದು ಹೇಗೆ ಅರ್ಥ ಕೊಡುತ್ತದೆ ನೋಡಿರಿ.

ಮೆರೆಯಲಾಗದು ಹರಿಯ, ಮೆರೆಯಲಾಗದು ಬ್ರಹ್ಮನ
ಮೆರೆಯಲಾಗದು ತೆತ್ತೀಸ ಕೋಟಿ ದೇವರ್ಕಳ
ನಮ್ಮ ಲಿಂಗದೇವರ ಮೆರೆಯಲಹುದು (ಬ.ವ.ದೀ 5?0)

ಇಂಥ ಒಂದು ಅದ್ಭುತ, ವಿಧಾಯಕ ಬದಲಾವಣೆಗೆ ನನ್ನನ್ನು ನಿಜವಾಗಿಯೂ ಪುರ... ಬೇಕಿತ್ತು. ಪೂರ್ವಾಗ್ರಹ ಪೀಡಿತ ಮುಖಂಡರು, ಮತ್ಸರಿಸುವ ಮಠಾಧೀಶರು, ಈರ್ಷೆಯಿಂ...

Digitalized by e-Sahithya Documentation Forum
Sponsored by Sarayu Foundation Trust

ಕುದಿಯುವ ಸಾಹಿತಿಗಳು ಪ್ರಾಮಾಣಿಕವಾಗಿ ವರ್ತಿಸಬಲ್ಲರೆ ? ಹರಿ, ಬ್ರಹ್ಮ 33 ಕೋಟಿ ದೇವತೆಗಳನ್ನು ವೈಭವಿಸಬಾರದು, ಸ್ತುತಿಸಬಾರದು, ಸೃಷ್ಟಿಕರ್ತನ ಪ್ರತೀಕವಾದ ನಮ್ಮ ಇಷ್ಟಲಿಂಗ ದೇವರನ್ನು ಮೆರೆಸಬೇಕು ಇದು ನಮ್ಮ ಧರ್ಮಗುರುವಿನ ಆಶಯವನ್ನು ಬಿಂಬಿಸುವುದಷ್ಟೆ.

ಇದೇ ರೀತಿ ಪುರಾತನರು, ಪುರಾತರು ಎಂಬ ಪದ ಬಳಕೆಯಲ್ಲಿಯೂ ಲಿಪಿಕಾರರು ತಪ್ಪು ಮಾಡಿದ್ದಾರೆ. ಪುರಾತನರು ಎಂದರೆ ಧರ್ಮಪಿತ ಬಸವಣ್ಣನವರಿಗೆ ಪೂರ್ವದಲ್ಲಿ ತಮಿಳುನಾಡಿನಲ್ಲಿದ್ದ 63 ಪುರಾತನರು, ಪುರಾತರುಗಳು ಧರ್ಮಪಿತ ಬಸವಣ್ಣನವರೇ ಆದಿಯಾಗಿ ಬಂದ ಶರಣರು. ಈ ಪದಗಳ ವ್ಯತ್ಯಾಸವನ್ನರಿತು ನಾವು ವಚನಗಳನ್ನು ಅಧ್ಯಯನ ಮಾಡುವುದು ಅಗತ್ಯವಿದೆ.

ಡಾ॥ ಎನ್.ಜಿ. ಮಹಾದೇವಪ್ಪನವರು ತಮ್ಮ ಲೇಖನದಲ್ಲಿ ಲಿಂಗಾಯತರಿಗೆ ಧರ್ಮಗ್ರಂಥ ಒಂದರ ಅವಶ್ಯಕತೆ ಇದೆ ಎಂಬುದನ್ನು ಬಹಳ ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಬೇಡ ಎನ್ನುವವರಿಗೆ ಚೆನ್ನಾಗಿ ಉತ್ತರಿಸಿದ್ದಾರೆ. ಅಜ್ಞಾನದಿಂದ, ಕೈತಪ್ಪಿನಿಂದ, ದುರುದ್ದೇಶದಿಂದ ಹೀಗೆ ನಾನಾ ಕಾರಣಗಳಿಗಾಗಿ ವಚನಗಳು ಕಲುಷಿತಗೊಂಡಿವೆ. ಇವುಗಳ ಶುದ್ಧೀಕರಣಕ್ಕೆ ಲಿಂಗಾಯತ ಪತ್ರಿಕೆಯೂ ಮನಸ್ಸು ಮಾಡಲಿ ಎಂದೇ ನಮ್ಮ ಆಶಯ.

ಸಂಪಾದಕೀಯ - 2

ಲಿಂಗಾಯತ ಮಠಾಧೀಶರ ಕಾಶಿ ಅಧ್ಯಯನ

ಕೆಲವು ಸಾಂಪ್ರದಾಯಿಕ ಮಠಗಳ ಮರಿಸ್ವಾಮಿಗಳು, ಸಾಧಕರು ಆಗಾಗ ಭೇಟಿಗೆ ಬರುತ್ತಿರುತ್ತಾರೆ, ದೂರವಾಣಿಯಲ್ಲಿ ಮಾತನಾಡುತ್ತಿರುತ್ತಾರೆ. ಒಮ್ಮೆ ಅಂಥ ಒಬ್ಬರು ಹೇಳಿದರು, ನಮ್ಮ ಸಹಪಾಠಿ ಸ್ವಾಮಿಯೊಬ್ಬರು ಕಾಶಿಗೆ ವೇದಾಂತ ಅಧ್ಯಯನಕ್ಕೆ ಹೋಗುತ್ತಿದ್ದಾರೆ. ಅವರನ್ನು ಕಳಿಸಿ ಬರಲು ನಾವು ಹೋಗುತ್ತಿದ್ದೇವೆ. ಕೇಳಿ ಮನಸ್ಸಿಗೆ ಬಹಳ ವಿಷಾದವೆನಿಸಿತು. ಇವರು ಲಿಂಗಾಯತ ಮಠಾಧೀಶರು ಅದೂ ವಿರಕ್ತ ಸಂಪ್ರದಾಯದವರು. ಇವರಿಗೆ ತಮ್ಮ ಧರ್ಮದ ಬಗ್ಗೆ ಎಷ್ಟು ಕಳಕಳಿ ಇದೆ ನೋಡಿರಿ. ಪ್ರತಿಭೆ-ಪಾಂಡಿತ್ಯ ಇರುವವರು ಜಗತ್ತಿನ ಎಲ್ಲ ಧರ್ಮಗಳ, ಮತ ಪಂಥಗಳ ಅಧ್ಯಯನ ಮಾಡಬಲ್ಲರು. ಆ ಸಾಮರ್ಥ್ಯ ಇಲ್ಲದವರು ತನ್ನ ಧರ್ಮವನ್ನಾದರೂ ಸರಿಯಾಗಿ ತಿಳಿಯಬಾರದೆ? ಮುಸಲೀಮರು ಮದರಸಾಗಳಲ್ಲಿ ಅರಬ್ಬಿ ಭಾಷೆಯನ್ನು, ಕುರಾನನ್ನು, ಇಸ್ಲಾಂ ಅನ್ನು ಕರಗತ ಮಾಡಿಕೊಳ್ಳುವರು. ಕ್ರೈಸ್ತರು ಬೈಬಲನ್ನು, ಕ್ರೈಸ್ತ ಧರ್ಮವನ್ನು ಚೆನ್ನಾಗಿ ಅಭ್ಯಸಿಸುವುದೇ ಅಲ್ಲದೆ, ಇನ್ನಿತರ ಧರ್ಮಗಳ ಬಗ್ಗೆ ಸಹಿತ ತಮ್ಮ ಥಿಯಾಲಾಜಿಕಲ್ ಕಾಲೇಜುಗಳಲ್ಲಿ ಕಲಿಯುವರು. ಲಿಂಗಾಯತ ಮಠಾಧೀಶರು ಇತರ ಧರ್ಮಗಳ ಬಗ್ಗೆ ಅಧ್ಯಯನ ಮಾಡುವಷ್ಟು ಬುದ್ಧಿವಂತರಿರಲಿಕ್ಕಿಲ್ಲ. ಆದರೆ ತನ್ನ ಧರ್ಮದ ಬಗ್ಗೆಯಾದರೂ ತಿಳಿದುಕೊಳ್ಳುವ ಕಳಕಳಿಯನ್ನು ಹೊಂದಿರಬಾರದೆ? ಇವರ ಧರ್ಮ -ಸಾಹಿತ್ಯವು ಅಚ್ಚ ಕನ್ನಡದಲ್ಲಿ, ವಚನ ಸಾಹಿತ್ಯದಲ್ಲಿ ಹುದುಗಿರುವಾಗ ಮತ್ತು ಜನರಿಗೆ ಅದೇ ಬೇಕಿರುವಾಗ ಇದನ್ನು ಅಧ್ಯಯನ ಮಾಡುವುದು ಬಿಟ್ಟು ಕಾಶಿಗೆ ವೇದಾಂತ ಕಲಿಯಲು ಹೋಗಬೇಕೆ?

ಇನ್ನೊಂದು ಅಂಶ ನಾವು ಗಮನಿಸಬೇಕು. ಇವರಿಗೆ ತಮ್ಮ ಧರ್ಮವು ಕಳಾಹೀನವಾಗುತ್ತಿರುವುದು, ಸಮಾಜ ದುರ್ಬಲವಾಗುತ್ತಿರುವುದು, ತನ್ನ ಸಮಾಜದ ಜನ ಧರ್ಮಾಚರಣೆಯಿಂದ ದೂರ ಸರಿಯುತ್ತಿರುವುದು ಎಷ್ಟೂ ಕಳವಳ ಉಂಟು ಮಾಡುತ್ತಿಲ್ಲ. ಈ ದಿಶೆಯಲ್ಲಿ ತನ್ನ ಧರ್ಮವನ್ನು ಪುನರುತ್ಥಾನ ಮಾಡಬೇಕು. ಇದರಲ್ಲಿ ತಾನು ಸಕ್ರಿಯ ಪಾತ್ರ ವಹಿಸಬೇಕು ಎಂಬ ಕಳಕಳಿಯೇ ಇಲ್ಲ. ಪೂಜ್ಯ ಅಪ್ಪಾಜಿಯವರು ಸ್ವಯಂ ಪ್ರೇರಣೆಯ ಸನ್ಯಾಸ ತೆಗೆದುಕೊಂಡು ಕಾವಿ ಧರಿಸಿದವರೇ ಟ್ರೇನ್ ಹತ್ತಿ ಧರ್ಮಪ್ರಚಾರಕ್ಕೇ ಹೊರಟರು. ಅವರ ಕಳಕಳಿ ಮೆಚ್ಚುವಂಥದು. ತನ್ನ ಧರ್ಮವನ್ನು ಅಧ್ಯಯನ ಮಾಡಿ ತಿಳಿಯದ ಕಾಶಿ ಪ್ರೇಮಿಗಳು ಎಷ್ಟರ ಮಟ್ಟಿಗೆ ತಮ್ಮ ಗುರುವಿನ ಕರ್ತವ್ಯ ನಿಭಾಯಿಸಬಲ್ಲರು?

ಮತ್ತೊಬ್ಬರು ಸಾಧಕರು; ಅವರೂ ಸಂಪ್ರದಾಯ ಮಠದ ವಟುಗಳೆ. ಒಂದು ದಿನ ಫೋನ್ ಮಾಡಿದರು, "ನಾನು ಋಷಿಕೇಶಕ್ಕೆ ಹೋಗುತ್ತಿದ್ದೇನೆ. ಅಲ್ಲಿ......... ಇಂಥವರದೊಂದು ಆಶ್ರಮವಿದೆ. ಅಲ್ಲಿ 3 ವರ್ಷ ಯೋಗಾಭ್ಯಾಸ ಮಾಡಲು ಬಯಸಿದ್ದೇನೆ." ಈ ಅಮೂಲ್ಯವಾದ 3 ವರ್ಷ ಕಳೆಯುವುದರೊಳಗೆ ಸಾಮಾಜಿಕ ಪ್ರಜ್ಞೆ, ತನ್ನ ಧರ್ಮಾಭಿಮಾನ ಎಲ್ಲ ಕುಂದಿಹೋಗಿರುತ್ತದೆ. ಅಲ್ಲಿಂದ ಬಂದು ಮಾಡುವುದು ಅಷ್ಟರಲ್ಲೇ ಇರುತ್ತದೆ. ಅಮೂಲ್ಯವಾದ ಸಮಯ ವ್ಯರ್ಥವಾಗುವುದಲ್ಲದೆ ಆದರ್ಶಗಳಲ್ಲೇ ಬಹಳ ಬದಲಾವಣೆ ಆಗಿ ಬಿಟ್ಟಿರುತ್ತದೆ. ಸಿದ್ಧಿಗಳ ಬೆನ್ನು ಹತ್ತಿ ಬಹಳಷ್ಟು ಸಾಧಕರು ದಾರಿ ತಪ್ಪುತ್ತಾರೆ. ಅಲ್ಲಮ ಪ್ರಭುದೇವರು ಮತ್ತು ಸಿದ್ಧರಾಮೇಶ್ವರರು ಎಲ್ಲ ಯೋಗಗಳನ್ನು ಅಭ್ಯಾಸ ಮಾಡಿ ಸಂತಸ ಕಾಣದೆ ಹುಡುಕಾಡಿ ಅಂತಿಮವಾಗಿ ಬಸವ ಪಥದಲ್ಲಿ ಪರಿಪೂರ್ಣತೆ ಕಂಡುಕೊಂಡಿದ್ದಾರೆ.

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ
ಬ್ರಹ್ಮವ ನುಡಿದು ಭ್ರಮಿಷ್ಟನಾದೆನಯ್ಯ
ಶೂನ್ಯವ ನುಡಿದು ಸುಖ - ದುಃಖಕ್ಕೆ ಒಳಗಾದೆನಯ್ಯಾ
ಗುಹೇಶ್ವರಾ, ನಿಮ್ಮ ಸಂಗನ ಬಸವಣ್ಣನ ಸಾನಿಧ್ಯದಿಂದ
ಆನು ಸದ್ಭಕ್ತನಾದೆನಯ್ಯಾ

ವಚನ ಸಾಹಿತ್ಯದ ಕೈಪಿಡಿಯನ್ನು ಇರಿಸಿಕೊಂಡು, ವೈಯಕ್ತಿಕವಾಗಿ ಸಾಧನೆ ಮಾಡಲು ವಿಪುಲ ಅವಕಾಶ ಇರುವಾಗ, ಇದನ್ನು ಬಿಟ್ಟು ಬಹುಪಾಲು ಸಾಧಕರು ಎಲ್ಲೆಲ್ಲಿಯೋ ತಿರುಗುವರು ಎಂದು ವ್ಯಥೆ ಎನಿಸುತ್ತದೆ. ಈ ಲೇಖನದಲ್ಲಿ 2 ಬಗೆಯ ವಟುಗಳನ್ನು ಕುರಿತು ಪ್ರಸ್ತಾಪಿಸಿದ್ದೇನೆ. 1. ಸಂಸ್ಕೃತ ವ್ಯಾಮೋಹಿಗಳಾಗಿ ವೇದಾಂತದ ಬೆನ್ನು ಹತ್ತಿದವರು 2. ಸಿದ್ಧಿಯನ್ನು ಬಯಸಿ ವಿವಿಧ ಯೋಗ ಮಾರ್ಗಕ್ಕೆ ಹಾತೊರೆಯುವರು. ಕಾಶಿಗೆ ಹೋಗಿ ಓದಿ ಬಂದಿರುವ ಬಹುಪಾಲು ಮಠಾಧೀಶರು ಮತ್ತು ಸಿದ್ಧಿಗಳ ಬೆನ್ನು ಹತ್ತಿ ಓಡಾಡಿ ಬಂದಿರುವ ಅನೇಕರು - ಇವರು ಯಾರೂ ಜನ ಸಮುದಾಯದ ಮೇಲೆ ಪರಿಣಾಮ ಬೀರಿಲ್ಲ. ವಚನ ವಾಙ್ಮಯವನ್ನು ಅಧ್ಯಯನ ಮಾಡಿರುವ ಜೀವನ ಮುಖಿ ಸಿದ್ಧಾಂತ ಬೋಧಕರಷ್ಟೆ ಹೆಚ್ಚಿನ ಪ್ರಭಾವವನ್ನು ಮಾಡಬಲ್ಲವರಾಗಿದ್ದಾರೆ ಎಂಬುದು ಅರಿತುಕೊಳ್ಳಬೇಕಾದ ಸತ್ಯ.

ಎಂಜಿನಿಯರಿಂಗ್ ಓದಿ ವೈದ್ಯಕೀಯ ಚಿಕಿತ್ಸೆ ಕೊಡಲು ಹೊರಟ ಬುದ್ಧಿವಂತನಂತೆ ಕಾಶಿಗೆ ಹೋಗಿ ವೇದಾಧ್ಯಯನ ಮಾಡಿ ಲಿಂಗಾಯತ ಸಮಾಜಕ್ಕೆ ಧರ್ಮಬೋಧಕರಾಗುವರು. ಇದು ಎಂಥ ವಿಪರ್ಯಾಸ!

ಕರುಣಾಳು ಬಾ ಬೆಳಕೆ

ಕಾಣದ ಕರೆ

-ಡಾ॥ ಗುರುರಾಜ ಕರ್ಜಗಿ

ಒಂದು ಬಾರಿ ಟೆಲಿಗ್ರಾಫ್ ಆಪರೇಟರ್ ಹುದ್ದೆಗೆ ಜಾಹಿರಾತು ನೀಡಲಾಗಿತ್ತು. ನೂರಾರು ಜನ ಯುವಕ - ಯುವತಿಯರು ಆ ಹುದ್ದೆಯನ್ನು ಬಯಸಿ ಸಂದರ್ಶನಕ್ಕೆ ಬಂದಿದ್ದರು. ಅವರನ್ನೆಲ್ಲ ಒಂದು ದೊಡ್ಡ ಕೊಠಡಿಯಲ್ಲಿ ಕೂಡಿಸಲಾಗಿತ್ತು. ಅದರ ಪಕ್ಕದ ಕೊಠಡಿಯಲ್ಲಿ ಸಂದರ್ಶನ ನಡೆಸುವ ಅಧಿಕಾರಿಗಳು ಕುಳಿತಿದ್ದರು. ಎಲ್ಲರೂ ತಮ್ಮ ತಮ್ಮ ಸರದಿಗಾಗಿ ಕಾಯುತ್ತಿದ್ದರು. ಅದು ಏತಕ್ಕೋ ಯಾರನ್ನೂ ಒಳಗೆ ಕರೆದಿರಲಿಲ್ಲ. ಗುಂಪು ಗುಂಪಾಗಿ ಕುಳಿತ ಅಭ್ಯರ್ಥಿಗಳು ತಮ್ಮ ತಮ್ಮೊಳಗೇ ಮಾತನಾಡಿಕೊಳ್ಳುತ್ತಾ ತಮ್ಮ ಅನುಭವ, ಮನೆಯ ಪರಿಸ್ಥಿತಿ, ತಮ್ಮ ಸಾಧನೆಗಳನ್ನು ಹಂಚಿಕೊಳ್ಳುತ್ತಿದ್ದರು. ಇನ್ನೂ ಏತಕ್ಕೆ ಯಾರನ್ನೂ ಸಂದರ್ಶನಕ್ಕೆ ಕರೆಯಲಿಲ್ಲ ಎಂದು ಚಡಪಡಿಸುತ್ತಿದ್ದರು. ಈ ದೊಡ್ಡ ಕೊಠಡಿಯ ಒಂದು ಮೂಲೆಯಲ್ಲಿ ಒಂದು ಟೆಲಿಗ್ರಾಫ್ ಯಂತ್ರವಿತ್ತು. ಅದು ಏನೋ ಸಪ್ಪಳವನ್ನು ಮಾಡುತ್ತಲೇ ಇತ್ತು. ಒಂದೇ ಸಮ ಕಿರಿಕಿರಿ ಮಾಡುವ ಸದ್ದು. ಹತ್ತಿರ ಕುಳಿತವರ ಮಾತಿಗೂ ತೊಂದರೆ ಮಾಡುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಯಾರೂ ಅದರ ಕಡೆಗೆ ಗಮನವನ್ನು ನೀಡಲಿಲ್ಲ.

ಒಬ್ಬ ಯುವಕ ಎದ್ದು ನಿಂತು ಆ ಕಡೆಗೆ ಈ ಕಡೆಗೆ ನೋಡಿ ಸಂದರ್ಶನದ ಕೊಠಡಿಯೊಳಗೆ ಹೋದ. ಉಳಿದವರಿಗೆಲ್ಲ ಆಶ್ಚರ್ಯ. ತಾವು ಅವನಿಗಿಂತ ಮೊದಲಿಗೆ ಬಂದವರು ತಮ್ಮನ್ನೇಕೆ ಕರೆಯಲಿಲ್ಲ ಎಂದು ಕೆಲವರೆಂದರು. ಅಂತೂ ಸಂದರ್ಶನ ಪ್ರಾರಂಭವಾಯಿತಲ್ಲ ತಮ್ಮ ಸರದಿಯೂ ಬರುತ್ತದೆ ಎಂದುಕೊಂಡವರು ಇನ್ನು ಕೆಲವರು. ಸ್ವಲ್ಪ ಹೊತ್ತಿನ ನಂತರ ಒಳಗೆ ಹೋದ ಯುವಕ ನಗುನಗುತ್ತಾ ಹೊರಗೆ ಬಂದ. ಕುಳಿತವರನ್ನೆಲ್ಲ ನೋಡಿ ಹೇಳಿದ. "ಸ್ನೇಹಿತರೇ, ನೀವು ಇಲ್ಲಿ ಕುಳಿತಿರುವುದರಲ್ಲಿ ಏನೂ ಅರ್ಥವಿಲ್ಲ. ಇದ್ದುದು ಒಂದೇ ಹುದ್ದೆ. ಅದನ್ನು ನನಗೆ ಕೊಟ್ಟಾಯಿತು." ಎಲ್ಲ ಅಭ್ಯರ್ಥಿಗಳಿಗೂ ಕೋಪ ಬಂದಿತು. ಕೂಗಾಡತೊಡಗಿದರು. ಆಗ ಒಳಗಿದ್ದ ಅಧಿಕಾರಿ ಬಂದು ವಿವರಣೆ ನೀಡಿದ: "ನೋಡಿ, ನೀವೆಲ್ಲ ಇಲ್ಲಿಗೆ ಬಂದುದು ಟೆಲಿಗ್ರಾಫ್ ಆಪರೇಟರ್ ಹುದ್ದೆಗೆ ಅಲ್ಲವೇ? ಆದರೆ ನಿಮಗಾರಿಗೂ ಅದರಲ್ಲಿ ಆಸಕ್ತಿ ಇಲ್ಲವೆಂದು ತೋರುತ್ತದೆ. ಆ ಮೂಲೆಯಲ್ಲಿದ್ದ ಟೆಲಿಗ್ರಾಫ್ ಯಂತ್ರ ಮಾಡುತ್ತಿದ್ದ ಸದ್ದನ್ನು ಯಾರೂ ಕೇಳಿಸಿಕೊಳ್ಳಲಿಲ್ಲ. ನಾನು ಒಳಗಿನಿಂದ ಸಂದೇಶ ಕಳುಹಿಸಿದೆ. ಯಾರಾದರೂ ಸಂದರ್ಶನಕ್ಕೆ ಸಿದ್ಧರಿದ್ದರೆ ಒಳಗೆ ಬನ್ನಿ ಎಂದು. ಈ ಯುವಕನೊಬ್ಬನೇ ಕೇಳಿಸಿಕೊಂಡ, ಒಳಗೆ ಬಂದ. ಅವನಿಗೆ ಹುದ್ದೆ ದೊರಕಿತು.

Digitalized by e-Sahithya Documentation Forum
Sponsored by Sarayu Foundation Trust

ನಮ್ಮೆಲ್ಲರ ಜೀವನದಲ್ಲೂ ಇಂತಹ ಸೂಚನೆಗಳು, ಸಂದೇಶಗಳು ಬರುತ್ತಲೇ ಇರುತ್ತವೆ. ಗಮನಿಸಿ ಕಾರ್ಯ ಪ್ರವೃತ್ತರಾದವರು ಯಶಸ್ವಿಗಳಾಗುತ್ತಾರೆ. ಉಳಿದವರು ನೋಡುತ್ತಲೇ ಇರುತ್ತಾರೆ.

(ಪ್ರಜಾವಾಣಿ, ದಿ. 19-8-2008) ★ ★ ★

ಸಂದೇಶ ಗ್ರಹಣ

- ಮಾತಾಜಿ

ಡಾ|| ಗುರುರಾಜ ಕರ್ಜಗಿ ಅವರು ಒಂದು ಬರಹ ಅರ್ಥಗರ್ಭಿತವಾಗಿದೆ. ಅದನ್ನು ಕಲ್ಯಾಣ ಕಿರಣದಲ್ಲಿ ಪುನರ್ ಮುದ್ರಿಸಲಾಗಿದೆ. (ಪ್ರಜಾವಾಣಿ. ದಿ. 19-8-2008ರ ಸಂಚಿಕೆಯಲ್ಲಿಂದ ಆಯ್ದು) ಟೆಲಿಗ್ರಾಫ್ ಇಲಾಖೆಗೆ ಸಂದರ್ಶನಕ್ಕೆ ಬಂದವರು ಆ ಮೆಷಿನ್ ಕಟ್ಟಕಡಡ ಎಂದು ಸತತವಾಗಿ ಶಬ್ದ ಮಾಡುತ್ತಿದ್ದರೂ, ಅದರ ಮಧ್ಯೆಯೇ ಆ ಸುದ್ದಿ ಈ ಸುದ್ದಿ ಮಾತನಾಡುತ್ತಿದ್ದರು. ಸಂದರ್ಶನಕ್ಕೆ ಕರೆ ಬರುವುದು ಎಂದು ಕಾಯುತ್ತಿದ್ದರವರು. ಒಬ್ಬ ಎದ್ದು ಒಳಗೆ ಹೋಗಿ ವಿಜಯಿಯಾದ; ಹೊರಗೆ ಬಂದು, "ಇದ್ದುದು ಒಂದೇ ಸೀಟು. ನನಗದು ಸಿಕ್ಕಿತು. ನೀವು ಹೋಗಬಹುದು." ಎಂದಾಗ ಅಲ್ಲಿ ಕಾಯುತ್ತ ಕುಳಿತ ಎಲ್ಲರಿಗೂ ಕೋಪ ಬಂದಿತು. "ನಮ್ಮನ್ನೆಲ್ಲ ಕರೆಯಲೇ ಇಲ್ಲ. ನಿನ್ನನ್ನಷ್ಟೆ ಕರೆಯಲಾಯಿತೊ? ಇದು ಪಕ್ಷಪಾತ." ಎಂದು ಭಾವಿಸಿದರು. ಆಗ ಅವನೆಂದ "ನಾವು ನೀವೆಲ್ಲರೂ ಬಂದುದು ಟೆಲಿಗ್ರಾಫಿಕ್ ಕೆಲಸಗಾರನ ಕೆಲಸ ಕೇಳಲು. ಆ ಯಂತ್ರದ ಮೂಲಕ ಒಳಗಿನ ಅಧಿಕಾರಿಗಳು ಸಂದರ್ಶನಕ್ಕಾಗಿ ಬಂದವರು ಒಳಗೆ ಬನ್ನಿ ಎಂದು ಸೂಚನೆ ನೀಡಿದರು. ನೀವಾರೂ ಅದನ್ನು ಕೇಳಿಸಿ ಕೊಳ್ಳದೆ ನಿಮ್ಮ ನಿಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿದ್ದಿರಿ. ನಾನು ಕೇಳಿಸಿಕೊಂಡು ಸಂದರ್ಶನಕ್ಕೆ ಹಾಜರಾದೆ. ಕೆಲಸ ಸಿಕ್ಕಿತು."

ಈ ಉದಾಹರಣೆ ಸದ್ಯದ ಪರಿಸ್ಥಿತಿಗೆ ಎಷ್ಟು ಚೆನ್ನಾಗಿ ಹೊಂದುತ್ತದೆ ನೋಡಿರಿ. ಡಾ|| ಎಂ. ಚಿದಾನಂದ ಮೂರ್ತಿಯವರು ಸುವರ್ಣ ಟಿ.ವಿ. ಸಂದರ್ಶನದಲ್ಲಿ (18-8-2008) ಮತ್ತು ಪ್ರೊ.ಮರುಳಸಿದ್ದಯ್ಯನವರು ಉದಯ ಟಿ.ವಿ ಸಂದರ್ಶನದಲ್ಲಿ ಕೇಳಿದರು. "800 ವರ್ಷಗಳ ಅವಧಿಯಲ್ಲಿ ಯಾರೂ ಮಾಡದ ಕಾರ್ಯವನ್ನು ನೀವೇಕೆ ಮಾಡಿದಿರಿ? ಒಂದು ವೇಳೆ ಬಸವಣ್ಣನವರಿಗೆ ತಮ್ಮ ಅಂಕಿತವನ್ನು ಕೂಡಲ ಸಂಗಮದೇವನಿಂದ ಲಿಂಗದೇವಕ್ಕೆ ಬದಲಿಸಿಕೊಳ್ಳಬೇಕಾಗಿದ್ದರೆ ಬೇರೆ ಯಾರಿಗೂ ಏಕೆ ಸೂಚನೆ ನೀಡಿರಲಿಲ್ಲ? ನಿಮಗಾಗಿ ಕಾಯಬೇಕಿತ್ತೆ?"

ಗುರು ಬಸವಣ್ಣನವರ ಚೈತನ್ಯದೊಡನೆ ತನ್ನ ಮನಸ್ಸನ್ನು ಸಂಪರ್ಕಿಸಿಕೊಳ್ಳಬೇಕು. ಅಂದರೆ ಅವರ ಆದೇಶ, ಸಂದೇಶ ಪ್ರವಹಿಸುತ್ತವೆ. ಆ ತರಹದ ಭಾವಾತ್ಮಕ ತಾದಾತ್ಮ್ಯವನ್ನೇ ಹೊಂದದಿದ್ದರೆ ಆದೇಶ, ಸಂದೇಶಗಳು ಹೇಗೆ ಅವತೀರ್ಣಗೊಳ್ಳಲು ಸಾಧ್ಯ? ಅದನ್ನೇ ನಾವು ಹೇಳುವುದು; ಸಾಹಿತಿಗಳು ಬೇರೆ, ತತ್ವಜ್ಞಾನಿಗಳು ಬೇರೆ, ಅನುಭಾವಿಗಳು ಬೇರೆ, ದಾರ್ಶನಿಕರು ಬೇರೆ. ಬರೀ ಬೌದ್ಧಿಕ ಕಸರತ್ತು ಮಾಡುವವರಿಗೆ ದೈವೀ ಸಂದೇಶಗಳು ಸ್ಫುರಿಸುವುದಿಲ್ಲ.

ಮಹಿಳಾ ಜಗದ್ಗುರು ಪೀಠ ಆಗಬೇಕು ಎನ್ನುವ ಬಸವ ವಾಣಿ 1968ರಲ್ಲಿ ಬಸವ ಕಲ್ಯಾಣದಲ್ಲೇ ಅವತೀರ್ಣವಾಯಿತು. ಬಸವ ಧರ್ಮ ಪೀಠ ಸ್ಥಾಪನೆ, ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮಗಿರಿಯ ಲಿಂಗಾಯತ ಗಣ ಮೇಳ - ಇಂಥ ಎಲ್ಲ ದೈವಿಕ ಕಾರ್ಯಗಳು ಏಕೆ ಮಹಾ ಸಂಶೋಧಕರಾದ ಡಾ||ಚಿದಾನಂದಮೂರ್ತಿಯವರಿಂದ ಆಗಲಿಲ್ಲ. ದೈವೀಶಕ್ತಿಯು ಕೆಲಸ ಮಾಡಲು ಕೆಲವರು ಮಾಧ್ಯಮವಾಗುತ್ತಾರೆ. ದೈವೀ ಶಕ್ತಿಯೇ ಅಂಥವರನ್ನು ತನ್ನ ಕಾರ್ಯಕ್ಕಾಗಿ ಆರಿಸಿಕೊಳ್ಳುತ್ತದೆ ಎಂಬುದನ್ನು ಕೇವಲ ಸಾಹಿತಿಗಳು ಮನವರಿಕೆ ಮಾಡಿಕೊಳ್ಳಬೇಕೇ ವಿನಾ ಮತ್ಸರಿಸಬಾರದು.

ಯೋಗಾಂಗ ತ್ರಿವಿಧಿ

ಬಲ್ಲವರೆ ಬಲ್ಲರು ಎಲ್ಲರಿಗೆ ತಿಳಿಯದು
ಕಲ್ಲೊಳಗೆ ಅನಲ ಇರುವಂತೆ । ಇದರನುವ
ಬಲ್ಲವರಿಗಲ್ಲದೆ ತಿಳಿಯವುದು ||

- ಅಕ್ಕಮಹಾದೇವಿ

ದಶಹರ ಹಬ್ಬದಲ್ಲಿ ಶರಣರ ಚರಿತ್ರೆ ಪಠಣ

ಶರಣ ಬಂಧುಗಳೇ,

ಸತ್ತವರ ಕಥೆ, ಕೊಂದವರ ಕಥೆಗಳನ್ನು ಓದದೆ ಲೋಕವನ್ನು ಉಳಿಸಿದ ಶರಣರ ಕಥೆ ಓದುವ ಪರಿಪಾಠ ಬೆಳೆಸಿಕೊಂಡು, ನವರಾತ್ರಿಯಲ್ಲಿ 9 ಶರಣರ ಚರಿತ್ರೆ ಓದಬೇಕೆಂದು ತಮ್ಮಲ್ಲಿ ಬಿನ್ನೈಸಲಾಗಿತ್ತು. ಅನೇಕರು ನಮಗೆ ಸಂಕ್ಷಿಪ್ತವಾಗಿ ಕಥೆಗಳನ್ನು ಕೊಡಿರಿ ಎಂದು ಕೋರಿಕೊಂಡಿದ್ದರು. ಅದಕ್ಕಾಗಿ 2008ರ ಸೆಪ್ಟೆಂಬರ್ 30ರಿಂದ ಆರಂಭವಾಗುವ ದಸರಾ (ನವರಾತ್ರಿ) ಕಾರ್ಯಕ್ರಮದಲ್ಲಿ ಕೆಳಕಂಡಂತೆ ಶರಣರ ಚರಿತ್ರೆ ಪಾರಾಯಣ ಮಾಡಬೇಕು.

1.	ದಿ. 30 -09-2008	-	ವಿಶ್ವಗುರು ಬಸವಣ್ಣನವರು (ಪ್ರತಿಪದೆ)
2.	ದಿ. 01-10-2008	-	ಚಿನ್ಮಯಜ್ಞಾನಿ ಚನ್ನಬಸವಣ್ಣ
3.	ದಿ. 02-10-2008	-	ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರು
4.	ದಿ. 03-10-2008	-	ಲಿಂಗಾಂಗಯೋಗಿ ಸಿದ್ಧರಾಮೇಶ್ವರ
5.	ದಿ. 04-10-2008	-	ವೀರ ವಿರಾಗಿಣಿ ಅಕ್ಕಮಹಾದೇವಿ
6.	ದಿ. 05-10-2008	-	ವೀರ ಮಾತೆ ಅಕ್ಕನಾಗಲಾಂಬಿಕೆ
7.	ದಿ. 06-10-2008	-	ವೀರ ಗಣಾಚಾರಿ ಮಡಿವಾಳ ಮಾಚಿದೇವರು
8.	ದಿ. 07-10-2008	-	ಹುತಾತ್ಮರಾದ ಹರಳಯ್ಯ -ಮಧುವಯ್ಯ
9.	ದಿ. 08-10-2008	-	ಕಲ್ಯಾಣ ಕ್ರಾಂತಿ, ಶರಣ ವಂದನೆ
10.	ದಿ. 09-10-2008	-	ಬಸವ ಧರ್ಮ ವಿಜಯೋತ್ಸವ

ದಿ.9-10-2008ರಂದು ವಿಶೇಷ ಕಾರ್ಯಕ್ರಮ, ಗಣ ದಾಸೋಹ ಮಾಡಬೇಕು. ಶರಣರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ -ಕಲ್ಯಾಣ ಕಿರಣಗಳಲ್ಲಿ ಕೊಡಲಾಗಿದೆ. ತನ್ನಿಮಿತ್ತ ಈ ಸಲ ವೀರ ಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ಹುತಾತ್ಮರಾದ ಹರಳಯ್ಯ - ಮಧುವಯ್ಯನವರ ಚರಿತ್ರೆ, ಶರಣ ವಂದನೆ ಕೊಡಲಾಗುವುದು.

7.ವೀರ ಗಣಾಚಾರಿ ಮಡಿವಾಳ ಮಾಚಿದೇವರ ಜೀವನ ಚರಿತ್ರೆ
(ಪಾರಾಯಣಕ್ಕೆ ಮೊದಲು ಪೂಜೆ)

ಗುರು ಮಾಚಿತಂದೆಯ ಅನುದಿನವು ನೆನೆಯುವೆನು
ವೀರ ಗಣಾಚಾರಿ ಧರ್ಮ ರಕ್ಷಕ ಶರಣ ||ಪ||

ಗುರು ಬಸವ ತಂದೆಯ ತ್ರಾಣವಾಗಿ ನಿಂದವನೆ
ವರ ಬಸವ ಗುರುವನ ಪ್ರಾಣವಾಗಿ ತಿಳಿದವನೆ
ವಚನ ವಾಙ್ಮಯವನ್ನು ರಕ್ಷಿಸಿದ ವೀರನೆ
ಲಿಂಗಾಯತ ಧರ್ಮ ಉಳಿಸಿದ ಗಣವರನೆ ||1||

ಹಿಪ್ಪರಗಿ ಪುರದಲ್ಲಿ ಜನಿಸಿದ ಶಿವತನುಜ
ಕಲ್ಯಾಣ ಪುರದಲ್ಲಿ ನೆಲೆಸಿದ ಘನ ಶರಣ
ಬಸವ ಮಹಾಮನೆಯ ಶಿವಸಿರಿಗೆ ಮನಸೋತು
ಮಡಿವಾಳ ಕಾಯಕವ ಕೈಗೊಂಡ ಚೇತನ ||2||

ಕಾದರೊಳ್ಳಿಯ ಮುಂದೆ ಕಾದಿದ ವೀರಭಟ
ಮುರಗೋಡ ಹಾದಿಯೊಳು ವೈರಿಗಳ ಸದೆಬಡಿದೆ
ಗೊಡಚಿಯ ಕ್ಷೇತ್ರದಲ್ಲಿ ಬಯಲಾದ ಶ್ರೀ ಶರಣ
ತೀರಿಸಲಾರೆವಾವು ನಿನ್ನಯ ತ್ಯಾಗ ಋಣ ||3||

ಕಾಯಕವೆ ಕೈಲಾಸ ಎಂಬ ಬಸವ ಮಂತ್ರವ
ಬಲು ನಿಷ್ಠೆಯಿಂದ ಪಾಲಿಸಿದ ಕಲಿವೀರ
ಬಿಚ್ಚುಗತ್ತಿಯ ಮಾಚ ಕೆಚ್ಚೆದೆಯ ಭಂಟ
ಸಚ್ಚಿದಾನಂದನ ಮೆಚ್ಚುಗೆಯ ಪಾತ್ರ ||4||

Digitalized by e-Sahithya Documentation Forum
Sponsored by Sarayu Foundation Trust

7. ವೀರ ಗಣಾಚಾರಿ ಮಡಿವಾಳ ಮಾಚಿದೇವರ ಜೀವನ ಚರಿತ್ರೆ

ಷಡ್‌ಗಣಾಧೀಶರಲ್ಲಿ ಒಬ್ಬರಾದ ವೀರ ಗಣಾಚಾರಿ ಮಡಿವಾಳ ಮಾಚಿದೇವರು ನಿತ್ಯ ಸ್ಮರಣಾರ್ಹರು. ಅವರ ಕೆಚ್ಚೆದೆಯ ಧೈರ್ಯವಂತಿಕೆಯು ವಚನ ಸಾಹಿತ್ಯ ಮತ್ತು ಲಿಂಗಾಯತ ಧರ್ಮವು ಉಳಿಯಲಿಕ್ಕೆ ಕಾರಣವಾಯಿತು. ಅವರ ಜೀವನ ಚರಿತ್ರೆಯನ್ನು ಭಕ್ತಿ-ಶ್ರದ್ಧೆಯಿಂದ ಪಾರಾಯಣ ಮಾಡೋಣ.

ಬಿಜಾಪುರ ಜಿಲ್ಲೆಯ ಹಿಪ್ಪರಗಿ ಶರಣ ಮಡಿವಾಳ ಮಾಚಿದೇವರ ಹುಟ್ಟೂರು. ಈ ಶರಣರಿಂದಾಗಿ ಅದಕ್ಕೆ ದೇವರ ಹಿಪ್ಪರಗಿ ಎಂಬ ಹೆಸರು ಬಂದಿತು. ಅಲ್ಲಿಯ ಮಡಿವಾಳರ ಕುಲದಲ್ಲಿ ತಂದೆ ಪರ್ವತಪ್ಪನವರು ಮತ್ತು ಸುಗ್ಗವ್ವೆಯರ ಮಗನಾಗಿ ಮಾಚಯ್ಯನವರು ಜನಿಸಿದರು. ಬಟ್ಟೆ ತೊಳೆಯುವ ವೃತ್ತಿಯನ್ನು ಮನೆತನದ ಕಾಯಕವನ್ನಾಗಿ ಸ್ವೀಕಾರ ಮಾಡಿದ ಅವರು ಕಾಲಾ ನಂತರದಲ್ಲಿ ಕಲ್ಯಾಣಕ್ಕೆ ಧಾವಿಸುತ್ತಾರೆ. ವೀರಾಗ್ರಣಿಯಾಗಿ ಕಾದಿದ ಮಡಿವಾಳ ಮಾಚಿದೇವರ ಯುದ್ಧ ಚಾತುರ್ಯವನ್ನು ನೋಡಿದರೆ ಅವರಿಗೆ ಶಸ್ತ್ರಾಭ್ಯಾಸವಾಗಿರಲೇ ಬೇಕು ಎಂದು ಊಹಿಸಬಹುದು. ಅವರ ಪತ್ನಿಯ ಹೆಸರು ಮಲ್ಲಿಗಮ್ಮ. ಕಲ್ಯಾಣಕ್ಕೆ ಬಂದ ನಂತರ ಅವರು ರಾಜಸೈನ್ಯದಲ್ಲಿ ಸೇರಿ ಸೇನಾಧಿಕಾರಿಯಾಗಿ ಕೆಲಸ ಮಾಡಿರಲೂ ಸಾಕು. ಕಲ್ಯಾಣ ಪಟ್ಟಣದಲ್ಲಿ ಒಂದು ಹೊಸಗಾಳಿ ಬೀಸತೊಡಗಿತು. ಗುರು ಬಸವಣ್ಣನವರ ಮತ್ತು ಲಿಂಗಾಯತ ಧರ್ಮದ ಖ್ಯಾತಿಯು ಮನೆ ಮಾತಾಗ ತೊಡಗಿತು.

ಬಾಗೋಡಿ ಬಸವಣ್ಣ ಸಾಗುತಲಿ ಕಲ್ಯಾಣ
ಕೂಗಿಡಲು ಭೂಮಿ ಲಿಂಗಗಳ । ವೈಭವದ
ತೂಗುತಲಿ ಧರ್ಮ ತೊಟ್ಟಿಲವು

ಬಸವ ಬೋಧೆಯು ಬೆಳೆದು ವಸುಧೆಯೊಳು ಹಬ್ಬುತಲಿ
ಹಸುಗೂಸು ಕೇಳಿ ಕಿವಿಗೊಟ್ಟು । ಚಣದೊಳಗೆ
ಹೊಸ ಮತವು ಉದಿಸಿ ಭೂಜನಕೆ

ನಾಡ ಜಾಣರು ಬರಲು ಹೂಡುದಕೆ ವಾದಗಳ
ಕೂಡಿ ಕಲ್ಯಾಣ ಮಂಟಪಕೆ । ಮಾಚಯ್ಯ
ನೋಡಿ ಬಂದಲ್ಲಿ ತಲುಪಿದನು

ಅನುಭವ ಮಂಟಪದ ಖ್ಯಾತಿಯನ್ನು ಕೇಳುತ್ತಿದ್ದ ಮಾಚಯ್ಯ ಒಂದು ದಿವಸ ಕುತೂಹಲದಿಂದ ಗುರುಬಸವಣ್ಣನವರ ಮಹಾಮನೆಯ ಸಂದರ್ಶನಕ್ಕೆ ಬಂದರು. ಲೋಹ ಚುಂಬಕದತ್ತ ಆಕರ್ಷಿತವಾಗುವ ಕಬ್ಬಿಣದಂತೆ ಆಕರ್ಷಿಸಲ್ಪಟ್ಟರು. ಅದನ್ನು ಅವರ ಮಾತಿನಲ್ಲೇ ಕೇಳೋಣ.

ಬಾಲನಹನೊಮ್ಮೆ, ಲೋಲನಹನೊಮ್ಮೆ
ವೃದ್ಧನಹನೊಮ್ಮೆ, ಮತ್ತನಹನೊಮ್ಮೆ
ಹೊಳೆದು ತೋರುತ್ತಲೊಮ್ಮೆ,
ತೋರಿ ಅಡಗುತ್ತಲೊಮ್ಮೆ,
ವಿಶ್ವವ ನೋಡಿ ಬೆರಗಾಗುತ್ತಮಿರೆ,
ಇದ್ದ ಠಾವಿನಲ್ಲಿ ಮುಂದು ತೋರುತ್ತಲಿರಲು
ಸಂಪ್ರದಾಯದವರು ಒಡನೊಡನೆ ಹರಿದು ಬಂದು, ಹೇಳುತ್ತಿರಲು,
ಹರಿದು ಬಂದು ಹತ್ತೆ ಸಾರಿದ,
ಬಸವನ ಮಹಾಮನೆಯ ತಲೆಯೆತ್ತಿ ನೋಡಿದ.
ಮುಗಿಲ ಮೂಲೆ ತಪ್ಪದೆ ಕುಸುರಿಗೆಲಸಗಳ
ನಂದಿಯ ಮಂಟಪಗಳ,
ಮೇಲುಪ್ಪರಿಗೆಯ ದಭ್ರಂಗಳ
ನೋಡಿ ತಲೆದೂಗುತ್ತ,
ಕಲಿದೇವರ ದೇವ, ಬಸವನ ಮಹಾಮನೆಯು
ಪ್ರದಕ್ಷಿಣ ಬಂದು, ದ್ವಾರದ ಮುಂದೆ ನಿಂದಿರ್ದನು.

ಮಲೆತು ಮೆಟ್ಟುತ್ತ, ತನುವನೊಲೆವುತ್ತ,
ತಲೆದೂಗಿ ಮನವನಲ್ಲಾಡಿಸಿ, ನೋಡಿದ.
ಭುವನ ಭುವನೇಶ್ವರನ ಹಿಂದು ಮುಂದ ನೋಡಿ ನಗುತ್ತ
ಮುತ್ತಿನ ತೋರಣಕ್ಕೆ ಹಾರೈಸಿ,
ಬಸವನರಮನೆಯ ಹೊಕ್ಕ, ಕಲಿದೇವರದೇವ.

ಮಡಿವಾಳ ಮಾಚಯ್ಯನವರು ನಂತರ ಬಸವ ಮಹಾಮನೆಯ ಅವಿಭಾಜ್ಯ ಅಂಗವಾದರು. ಹೊರಗಿನ ಕಾಯಕವನ್ನು ಬಿಟ್ಟು ಕೇವಲ ಬಟ್ಟೆಗಳನ್ನು ತೊಳೆಯುವ ಕೈಂಕರ್ಯವನ್ನು ವಹಿಸಿಕೊಂಡರು. ಯಾರಿಂದ ದೀಕ್ಷೆಯಾಯಿತು ಎಂಬುದು ತಿಳಿದಿಲ್ಲವಾದರೂ ಅವರು ಲಿಂಗಾಂಗಿಗಳಾದರು, ನಿಷ್ಠಾವಂತ ಶರಣ ಮಾರ್ಗಿಗಳಾದರು, ಏಕದೇವೋಪಾಸಕರಾದರು.

ಅಯ್ಯಾ, ನಾನು ಹುಟ್ಟಿದಂದಿಂದ ಲಿಂಗವನಲ್ಲದೆ ಆರಾಧಿಸೆ
ಜಂಗಮಕ್ಕಲ್ಲದೆ ನೀಡೆ, ಶರಣಸಂಗವಲ್ಲದೆ ಮಾಡೆ,
ಕಲ್ಯಾಣದ ಮಹಾಗಣಂಗಳೊಂದು ಹೊಳೆಯ ಮಾಡಿಕೊಟ್ಟರು
ಆ ಹೊಳೆಯಲ್ಲಿ ಹೆಣ್ಣು ಗಂಡು ಸುಳಿಯಲೀಯೆನು
ಚಿಕ್ಕವರು ಹಿರಿಯರ ಸುಳಿಯಲೀಯೆನು
ಎಲ್ಲಾ ಮಹಾಗಣಂಗಳು ಎನ್ನ ಹೊಳೆಯಲೆ ಹಾಯುವರು
ಲಿಂಗದ ವಸ್ತ್ರವನೊಗೆದು ಕಾಯಕದಲ್ಲಿ ಶುದ್ಧನಾದೆನು
ಎನ್ನ ಕಾಯಕವನವಧರಿಸು ಕಲಿದೇವಯ್ಯಾ (ಸಂ.8,ವ.465)

(ಇಲ್ಲಿ ಹುಟ್ಟಿನಿಂದ ಅಂದರೆ ದೀಕ್ಷೆಯನ್ನು ಪಡೆದು ಪುನರ್ಜಾತನಾದಂದಿನಿಂದ ಎಂದರ್ಥ)

ಕಾಯಕವ ಪಾಲಿಸಿದ ನಾಯಕನು ವೀರನವ
ಮಾಯಿಗೊರೆಗಲ್ಲು ಮಾಚಯ್ಯ। ನಿತ್ಯದಲಿ
ಜೀಯ ವಾಸನೆಗೆ ಶಿವಶರಣ ॥ ಮ.ಮಾ.8.

ತಮ್ಮ ಕಾಯಕದ ನಿಷ್ಠೆಯಿಂದ ಮಾಚಿದೇವರು ಕೀರ್ತಿ ವಿಶೇಷರಾದರು. ಅವರ ತತ್ವನಿಷ್ಠೆ, ಖಂಡಿತವಾದ ಬಹಳ ಬೇಗನೆ ಅವರನ್ನು ಮೇಲೇರಿಸಿದವು.

ಈರಾಡಿ ವೇದಗಳು ಹಾರಾಡಿ ವಾದಗಳ
ಕೂಡಿ ಕಲ್ಯಾಣ ಮಂಟಪಕೆ । ಮಾಚಯ್ಯ
ನೋಡಿ ಬಂದಲ್ಲಿ ತಲುಪಿದನು ॥

ಸುರರು ಕಡೆದಂತೆಲ್ಲ ವರಮಣಿಗಳುದಿಸಿದುವು
ಚಿರಕಾಲ ಉಳಿದು ಭೂಮಿಯೊಳು । ವಚನಗಳು
ಶರಣಗಣ ಕಡೆದ ಮಣಿಯೇನೊ ॥

ವಾದ ಚಕಮಕಿ ಬೆಂಕಿ ದೂದಿ ಕೂಮತ ಸುಡಲು
ವಾದಿಗಳು ಕಾದ ತಲೆಯಾರಿ । ವಚನಗಳ
ನಾದ ತುಂಬುತಲಿ ಭವಿಗಳಿಗೆ ॥

ಕಲ್ಯಾಣ ಮಂಟಪಕೆ ಬಲ್ಲವರು ಬಂದಿರಲು
ಅಲ್ಲಗಳೆಯುದಕೆ ಶರಣರನು । ಮಾಚಯ್ಯ
ಎಲ್ಲರೊಳಗವನು ಮಿಗಿಲಾದ

ನೂರೊಂದು ತಲಗಳಿಗೆ ನೂರೆಂದು ಶರಣರನು
ವೀರ ಮಾಚಣ್ಣ ಕರವಾಳು । ಬಸವನಿಗೆ
ಧೀರ ಕಾಯಕದ ಹುರಿಯಾಳು

ವಚನಾನುಭವ ಗೋಷ್ಠಿಗಳಲ್ಲಿ ಭಾಗಿಯಾಗುತ್ತಲೇ ತಮ್ಮ ಕಾಯಕ ಕ್ಷೇತ್ರದಲ್ಲಿ ಅಪಾರ ಕೀರ್ತಿವಂತರಾದರು.

ಕಾಯಕವೇ ಕತ್ತಾಗಿ ಘಾಯ ಮಾಡುತ ಹೊರಟ
ರಾಯರಾಯರೆಲ್ಲ ನಡುಗಿದರು । ಮಾಚನಿಗೆ

Digitalized by e-Sahithya Documentation Forum
Sponsored by Sarayu Foundation Trust

ನ್ಯಾಯ ಸಹ ನಡುಗಿ ಸಭೆಯೊಳಗೆ

ಎಂಟು ಕಟ್ಟುಗಳರಿತ ಬಂಟ ಮಾಚನೆ ಹೌದು
ನೆಂಟನವ ಹೌದು ವಾದಿಗಳ। ಪರ ಮತಕೆ
ಕಂಟಕವೆ ಹೌದು ಸಭೆಯೊಳಗೆ ॥

ಆರು ತಳಗಳ ಬಿಟ್ಟ ಬೀರಿದನು ಜಗಕೆಲ್ಲ
ಕಾರಗತ್ತಲೆಯು ಬೆಳಗಾಗಿ। ಶಿವಮತಕೆ
ಸಾರು ದೀವಟಿಗೆ ತಾನಾಗಿ

ವೀರ ಮಡಿವಾಳ ಮಾಚಿದೇವರು ಜಂಗ ಕಟ್ಟಿಕೊಂಡು ಕತ್ತಿಯನ್ನು ಒರೆಯಲ್ಲಿಟ್ಟುಕೊಂಡು ಒಂದು ವೀರ ಪ್ರತಿಜ್ಞೆ ಮಾಡಿದರು. ಅದೇನೆಂದರೆ,

ಶಿವಶರಣ ಭಕ್ತರರಿವೆಗಳ ತವಕದಲಿ ತೊಳೆ ತರುವ
ಭವಿ ಜನರ ಬಟ್ಟೆ ಮುಟ್ಟುವನೆ ಮಾಚಯ್ಯ
ಜವನ ದವಡ್ಯಾದ ಕೂ ಮತಕೆ 23

ಮಡಿವಾಳ ಮಾಚಿದೇವರು, "ಭವಿಗಳ ಬಟ್ಟೆ ತೊಳೆಯುವುದಿಲ್ಲ, ಕೇವಲ ಶರಣರ ಬಟ್ಟೆ ಮಾತ್ರ ತೊಳೆಯುತ್ತೇನೆ. ಮತ್ತು ಭವಿಗಳ್ಯಾರೂ ಮಡಿ ಮಾಡಿದ ವಸ್ತುಗಳನ್ನು ಮುಟ್ಟಿ ಮೈಲಿಗೆ ಮಾಡಬಾರದು" ಎಂಬ ಪ್ರತಿಜ್ಞೆ ಸ್ವೀಕರಿಸಿದರು. ಈ ಮಾತುಗಳನ್ನು ಕೇಳಿದಾಗ ಇದು ಒಂದು ಬಗೆಯ ಮತಾಂಧತೆ ಎಂದು ಇಂದಿನ ಸಮಾಜದ ದೃಷ್ಟಿಯಿಂದ ಅನ್ನಿಸಬಹುದು. ಆದರೆ ಇದು ಒಂದು ರೀತಿಯ ಗಣಾಚಾರ. ಲಿಂಗಾಂಗಿಗಳಾದ ಶರಣರು ಪರಸ್ಪರ ಭೇದ ಮಾಡುತ್ತಿರಲಿಲ್ಲ. ಕಾಯಕ ಜೀವಿಗಳನ್ನು ಮೇಲು ಕೀಳೆಂದು ಭಾವಿಸುತ್ತಿರಲಿಲ್ಲ. ಮಡಿವಾಳ ಕಾಯಕ, ಹಡಪದ ಕಾಯಕ ಅವರು ಕೀಳು ಎಂದು ಭಾವಿಸುತ್ತಿರಲಿಲ್ಲ. ಕಾಯಕ ಜೀವಿಗಳ ಬಗ್ಗೆ ಅಪಾರ ಗೌರವ ಇರುತಿತ್ತು.

ಮಡಿವಾಳ ಮಡಿವಾಳನೆಂಬರು, ಮಡಿವಾಳನೆಂಬುದನಾರೂ ಅರಿಯರು
ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ ಮನದ ಮೈಲಿಗೆಯ ತಂದು
ತನ್ನ ಮನೆಗೆ ಕೊಂಡುಹೋಗಿ ಹಾಯ್ಕಿದಡೆ
ಕೈ ಮುಟ್ಟಿದಡೆ ಆಗದೆಂದು ತನ್ನ ಪಾದದೊಳಗೆ ಮೆಟ್ಟಿ, ಅಲುಬಿ ಸೆಳೆದನಯ್ಯಾ
ತನ್ನ ನಿರ್ಮಲವ ಕೊಟ್ಟನೆನಗೆ !
ಆ ಕೊಟ್ಟ ಬೀಳುಡಿಗೆಯ ಹೊದೆದು ಕೊಂಡೆನಾಗಿ,
ಮಡಿವಾಳ ಮಾಚಿತಂದೆಯ ಕೃಪೆಯಿಂದಲಾನು ಬದುಕಿದೆನಯ್ಯಾ
ಲಿಂಗದೇವಾ ಬ.ವ.ದೀ 1267

ಸೂತ್ರಧಾರಿ ಮನದ ಮೈಲಿಗೆಯ ಕಳೆಯಬಂದನಯ್ಯಾ ಮಡಿವಾಳನು
ಎನ್ನ ಕಾಯದ ಮೈಲಿಗೆಯ ತಂದು ತನ್ನ ಮುಂದೆ ಇರಿಸಿದಡೆ
ಸಮತೆಯೆಂಬ ಕೂಪತೋಹಿನಲ್ಲಿ ಅದ್ದಿ ಕಟ್ಟಿ ಹಿಳಿದನಯ್ಯಾ
ಪಂಚೇಂದ್ರಿಯವರ್ಗಂಗಳ ಜ್ಞಾನವೆಂಬ
ನಿರ್ಮಲ ಜಲದಲ್ಲಿ ಅಲುಬಿ ಸೆಳೆದನಯ್ಯಾ
ರವಿ ಶಶಿ ಶಿಖಿಯ ತೇಜದಲ್ಲಿ ಆರಿಸಿದನು
ಚತುರ್ದಶ ಷೋಡಶವೆಂಬ ಘಳಿಗೆಯ ಮಾಡಿದನು
ಸಮಾಧಾನವೆಂಬ ಅಡ್ಡೆಯ ಮೇಲಿರಿಸಿ ಸಮಗುಣವೆಂಬ
ಕೊಡತಿಯಲ್ಲಿ ಘಟ್ಟಿಸಿದನು
ಹರಿಯಿತ್ತಯ್ಯಾ ಸೆರಗು ಮೂರಾಗಿ,
ಆ ಮೂರರುವೆಯ ಕೊಟ್ಟನಯ್ಯಾ, ಎನ್ನ ಕೈಯಲ್ಲಿ
ಆ ಅರುವೆಯ ಗುರುವಿಂಗೊಂದ ಕೊಟ್ಟೆನು.
ಲಿಂಗಕ್ಕೊಂದ ಕೊಟ್ಟೆನು ಜಂಗಮಕ್ಕೊಂದ ಕೊಟ್ಟೆನು.
ಎನಗೆ ಕೊಟ್ಟ ಮೂರರುವೆಯನೂ
ಒಂದು ಮಾಡಿ ಹೊದೆದುಕೊಂಡು ನಿಶ್ಚಿಂತವಾಗಿ

ಮಡಿವಾಳನ ಕೃಪೆಯಿಂದಲಾನು ಬದುಕಿದೆನು
ಕಾಣಾ, ಲಿಂಗದೇವ ಬ.ವ.ದೀ.1268

ಸ್ವತಃ ಧರ್ಮಪಿತ ಬಸವಣ್ಣನವರೇ ಮಡಿವಾಳ ಮಾಚಿದೇವರನ್ನು ಬಾಯಿತುಂಬಿ, ಮನತುಂಬಿ ಕೊಂಡಾಡಿದ್ದಾರೆ. ಆದರೆ ಇನ್ನಿತರ ಕೂಮತದ ಜನರು ಮೈಲಿಗೆ ಬಟ್ಟೆ ತೊಳೆಯುವ ಮಡಿವಾಳರು ಎಂದು ತಿರಸ್ಕಾರವಾಗಿ ನುಡಿಯುತ್ತಿದ್ದರು. ಈ ಅಗೌರವದ ಪ್ರತಿಭಟನಾರ್ಥ ಲಿಂಗಾಂಗಿಗಳಲ್ಲದ ಭವಿಗಳ ಬಟ್ಟೆ ತೊಳೆಯುವುದಿಲ್ಲ ಎಂದು ಪ್ರತಿಜ್ಞೆ ಮಾಡಿದರೆ ತಪ್ಪೇನು? ತಾವು ಮಡಿ ಮಾಡಿದ ಬಟ್ಟೆ ತರುವಾಗ ಯಾರೂ ಮುಟ್ಟಬಾರದೆಂದು ಗಂಟೆಯನ್ನು ಬಾರಿಸುತ್ತ ಮೊಳಕಾಲಲ್ಲಿ ಕಟ್ಟಿದ್ದ ಜಂಗನ್ನು ಗಿಲ್ ಗಿಲ್ ಎಂದು ಶಬ್ದ ಮಾಡುತ್ತ ಮಾಚಿದೇವರು ಬರುತ್ತಿದ್ದರು. ಬಹುಶಃ ಇದೂ ಸಹ ಮೇಲ್ಜಾತಿಯವರು ಇನ್ನಿತರರು ಮುಟ್ಟಿಸಿಕೊಂಡು ಬಿಡಬಾರದೆಂದು ದೂರ ದೂರ ಹೋಗುತಿದ್ದುದಕ್ಕೆ ಪ್ರತೀಕಾರವಾಗಿ ಇರಬಹುದು.

ಒಮ್ಮೆ ಏನಾಯಿತೆಂದರೆ ಸ್ವತಃ ಬಸವಣ್ಣನವರ ಮತ್ತು ಮುಖ್ಯ ಶರಣರ ಬಟ್ಟೆ ತೊಳೆದು ಬಿಸಿಲಲ್ಲಿ ಒಣಗಿಸಿ, ಚೆಂದಾಗಿ ಗಳಿಗೆ ಮಾಡಿ ಹೊತ್ತುಕೊಂಡು ಮಹಾಮನೆಗೆ ಮಾಚಿದೇವರು ಬರುತ್ತಿದ್ದರು.

ಬಸವಾದಿ ಪ್ರಮಥರ ಹಸನಾಗಿ ತೊಳೆದರಿವೆ
ಬಿಸಲಿಗೊಣ ಹಾಕಿ ಗಳಿಗೆಗಳ್। ಹೊತಗೊಂಡು
ಬಸವನರಮನೆಗೆ ಬರುವಾಗ ॥

ಹೆಮ್ಮೆಯಲ್ಲಿ ಕೊಬ್ಬಿರುವ ಹುಮ್ಮ ನರ ಪಾಪಿಗಳು
ತಮ್ಮ ತಮ್ಮೊಳಗೆ ಮಾತಾಡಿ । ಮಾಚನಿಗೆ
ಬಿಮ್ಮದಲಿ ತಡವಿ ಹಾದಿಯಲಿ ॥

ಹೊತ್ತು ಮುಟ್ಟೆಯ ತೂರಿ ಕತ್ತಿಯೊರೆಯಿಂದ್ಹಿರಿದು
ಕತ್ತರಿಸಿ ತೂರಿ ಪಾಪಿಗಳ । ಮುಗಿಲೊಳಗೆ
ಎತ್ತ ನೋಡಿದರು ಕತ್ತಲೆಯು ॥

ಆಗ ಜಾತಿ ಮದದಿಂದ ಸೊಕ್ಕಿದ್ದ ಕೆಲವರು ತಮ್ಮ ತಮ್ಮಲ್ಲೇ ಮಾತಾಡಿಕೊಂಡು ಮಾಚಿದೇವರನ್ನು ತಡವಿ, ನಿಂದನೆ ಮಾಡಲು ಆರಂಭಿಸಿದರು. ಕೋಪಗೊಂಡ ಮಾಚಿದೇವರು ಅವರನ್ನು ಕೊಂದುಬಿಟ್ಟರು. ವಾದದಲ್ಲಿ ಮೈಮರೆತು ಸಮಯ ಮೀರಿತೆಂದು ಪಶ್ಚಾತ್ತಾಪಗೊಂಡು ಮಹಾಮನೆಯತ್ತ ಸಾಗಿದರು. ಆಗ ಪಿಸುಣಗರು ದೂರು ಕೊಡಲು ರಾಜಸಭೆಗೆ ಹೋದರು, ದೂರು ನೀಡಿದರು.

ಅಗಸ ಮಡಿವಾಳಯ್ಯ ಒಗೆಯನರಸನ ಅರಿವೆ
ಮಿಗಿಲೆಂದು ಬಿಚ್ಚುಗತ್ತಿಯಲಿ ।ಜನಕೊಂದು
ಒಗೆದಾಡಿ ಊರನಂಜಿಸುವ

ಮಡಿವಾಳಯ್ಯ ಎಷ್ಟು ಸೊಕ್ಕಿದ್ದಾನೆಂದರೆ, ಅರಸು ಭವಿಯಾದ ಕಾರಣ ಅವನ ಅರಿವೆ ಸಹಿತ ತೊಳೆಯುವುದಿಲ್ಲ ಎಂಬ ಅಹಂಕಾರಿ. ಬಿಚ್ಚುಗತ್ತಿಯೊಡನೆ ಸಂಚರಿಸುತ್ತ ವಿರೋಧಿಸುವ ಜನರ ತಲೆತೆಗೆದು ಊರಿನ ಜನರನ್ನು ಅಂಜಿಸುತ್ತಾನೆ. ಎಂದು ದೂರು ಹೇಳಿದರು. ರಾಜ ಬಿಜ್ಜಳನಿಗೆ ತುಂಬಾ ಕೋಪ ಬಂತು. ಆತ 'ಆ ಮಾಚಯ್ಯನನ್ನು ಕರೆಸಿ, ಕೊಂದು ಚೆಲ್ಲಿರಿ. ಜಟ್ಟಿಗಳನ್ನು ಕರೆಸಿ ಜುಟ್ಟು ಹಿಡಿದು ಎಳೆದು ತರಿಸಿ ಕಟ್ಟಿಹಾಕಿ ಒಣಕೆಯಲ್ಲಿ ಕುಟ್ಟಿರಿ.' ಎಂದು ಆಜ್ಞೆ ಮಾಡಿದ. ಇದನ್ನು ಕೇಳಿ ಬಸವಣ್ಣನವರು ಗಾಬರಿಗೊಂಡರು. 'ಮಹಾರಾಜಾ, ಇದು ಬಹಳ ಕೀಳು ಕೆಲಸ. ಮಾಚಿದೇವರು ಶಿವನ ಅವತಾರಿ' ಎಂದು ಹೇಳಿದರು. ಬಿಜ್ಜಳ ಈ ಮಾತನ್ನು ನಿರ್ಲಕ್ಷಿಸಿ ಮರುದಿನ ನಸುಕಿನಲ್ಲೇ ಜಟ್ಟಿಗಳನ್ನು ಕರೆಸಿದ, ಆನೆಗಳನ್ನು ತರಿಸಿದ; ಮಾಚಯ್ಯನವರನ್ನು ಮರ್ದಿಸಲು ಸೂಚಿಸಿದ.

ನಸುಕ ಹರಿದು ಬೆಳಕಾಯಿತು. ಸೂರ್ಯನುದಿಸಿ ಬಂದ - ಕಾಯಕದ ಕಿರಣ ಮಾಚಿದೇವರ ಕೀರ್ತಿಯನ್ನು ವಿಸ್ತರಿಸಲು ಬಂದನೇನೋ ಎಂಬಂತೆ. ಮಾಚಿದೇವರು ಇನ್ನು ವೀರಘಂಟೆ ಬಾರಿಸುತ್ತ ಸಾಗುವರು. ನಾವು ಕಾಯಕಕ್ಕೆ ಸಾಗಬೇಕು ಎಂದು ದಿನದಂತೆ ಜನರು ಅಣಿಯಾಗುತ್ತ ನಿರೀಕ್ಷಿಸುತ್ತಿದ್ದರು. ಆದರೆ ಆಗ ಜಟ್ಟಿಗಳು ಬಂದರು.

ತಟ್ಟಲಾ ಮಾಚನಿಗೆ ಜಟ್ಟಿಗಳು ಬರಲಾಗ
ಬಟ್ಟ ಬಯಲಲ್ಲಿ ಎದುರಾಗಿ । ಮಾಚಯ್ಯ
ಗುಟ್ಟಿಲುಘೆ ಮಂತ್ರ ಜಪಿಸಿದನು ।

Digitalized by e-Sahithya Documentation Forum
Sponsored by Sarayu Foundation Trust

ಉಘೇ ಗುರು ಪ್ರಭುದೇವ ಉಘೇ ಭಕ್ತನಿಧಿ ಬಸವ
ಉಘೇ ಜ್ಞಾನಿ ಚನ್ನಬಸವನೆ । ಉಘೆ ಲಿಂಗ
ಉಘೇ ಶರಣರೇ ಲಿಂಗವಂತರೆ । ॥ 40 ॥

ಹಿರಿಯರೇ ಸಲುಹಿರೈ ಕಿರಿಯ ಮಾಚನ್ನಿಂದು
ನರ ಭವಿಗಳೆನ್ನ ತಟ್ಟುವರು । ನಾ ಮುಂದೆ
ಕುರಿಗಳಿಗೆ ತಿಳಿಸಿ ಹರಮತವ । ॥ 41 ॥

ಮಾಚಯ್ಯನವರನ್ನು ತಟ್ಟಲು ಜಟ್ಟಿಗಳು ಬರುತಿದ್ದಂತೆಯೇ ಅವರು ಮನಸಿನಲ್ಲಿಯೇ ಉಘೇ ಮಂತ್ರ ಜಪಿಸುತ್ತ ಪ್ರಭುದೇವರು, ಬಸವಣ್ಣನವರು, ಚನ್ನಬಸವಣ್ಣನವರನ್ನು ಲಿಂಗದೇವನನ್ನು ಶರಣರನ್ನು ಸಮಸ್ತ ಲಿಂಗವಂತರನ್ನು ಸ್ಮರಿಸಿಕೊಂಡರು. ಹಿರಿಯರೆನ್ನ ಸಲಹಿರಿ. ನರಭವಿಗಳು ನನ್ನನ್ನು ಒದೆಯುವರು. ಕುರಿಯ ಹಿಂಡಿನಂತಿರುವ ಭವಿ ಜನರಿಗೆ ಹರಮತದ ಮಹಿಮೆಯನ್ನು ಸಾರಿರಿ, ಎಂದು ಮನದಲ್ಲಿ ಪ್ರಾರ್ಥಿಸಿದರು. ಬಯಲಲ್ಲಿ ನಿಲ್ಲಿಸಿದ ಮಾಚಯ್ಯನವರ ಮೇಲೆ ಸಿಡಿಗುಂಡುಗಳನ್ನು ಹಾರಿಸಲಾಯಿತು. ಜಟ್ಟಿಗಳನ್ನು ಆನೆಗಳನ್ನು ಬಿಟ್ಟು ಬಿಜ್ಜಳನು ನಿರಾಳವಾಗಿ ನಿಂತನು.

ಪಟ್ಟದಾ ಮದಗಜವ ಬಿಟ್ಟ ಬಿಜ್ಜಳರಾಯ
ರಟ್ಟೆಯಲಿ ಹಿಚುಕಿ ಎಳೆದೊಗೆದ । ಮಾಚಯ್ಯ
ಹುಟ್ಟಿದೀ ನರಲೋಕ ಕಲಿರುದ್ರ ।

ಮದಿಸಿ ಮೇಲೇರಿ ಬಂದ ಆನೆಯನ್ನು ಅಸೀಮ ಪರಾಕ್ರಮದಿಂದ ತನ್ನ ರಟ್ಟೆಯಲಿ ಹಿಚುಕಿ ಎಳೆದು ಎಸೆದ. ಮಾನವ ಲೋಕದ ಮಹಾನ್ ಕಲಿ ರುದ್ರನಂತೆ ಮಾಚಯ್ಯ ತೋರುತಿದ್ದ. ಇದರಿಂದ ಮುಖಭಂಗಿತನಾದ ಬಿಜ್ಜಳ ಮತ್ತೊಂದು ಆಜ್ಞೆ ಹೊರಡಿಸಿದ. ಈ ಮಾಚಯ್ಯನಿಗೆ ಬಟ್ಟೆ ತೊಳೆಯಲು ನೀರು ಸಿಕ್ಕಬಾರದು ಆ ರೀತಿ ಎಲ್ಲಾ ಭಾವಿ, ಕೆರೆಗಳ ಬಳಿ ಕಾವಲಿಡಿಸಿರಿ ಎಂದು ಕೆರೆಭಾವಿಗಳಿಗೆ ಕಟ್ಟುನಿಟ್ಟಿನ ಕಾವಲು ಇರಿಸಲಾಯಿತು. ಮಾಚಿದೇವರು ತೊಳೆಯುವ ಬಟ್ಟೆಯ ಗಂಟು ಹೊತ್ತು ಹೆಂಡತಿಯನ್ನು ಕರೆದುಕೊಂಡು ಎಲ್ಲಾ ಕೆರೆ ಭಾವಿ ಹುಡುಕಿದರು. ಎಲ್ಲೆಡೆಯಲ್ಲಿ ಕಾವಲಿತ್ತು. ಇಂದು ನನ್ನ ಕಾಯಕಕ್ಕೆ ಚ್ಯುತಿ ಬಂದಿತು. ಕೈಕೊಂಡ ಪ್ರತಿಜ್ಞೆ ಹುಸಿಯಾಯಿತು. ಎಂದು ಮಾಚಯ್ಯನವರು ಪರಿತಪಿಸಲು ಮಡದಿ ಹೇಳಿದಳು ನನ್ನ ಎದೆಯ ರಕ್ತವನ್ನೇ ಹಿಂಡಿ ಅದರಲ್ಲಿ ಬಟ್ಟೆ ತೊಳೆಯಿರಿ. ಮಾಚಿದೇವರು ಅದರಂತೆ ಮಾಡಲು ಮಡದಿಯ ರಕ್ತವು ಹರಿದು ಮಡುಗಟ್ಟಿ ನಿಂತಿತು. ಅದರಲ್ಲಿ ಬಟ್ಟೆ ತೊಳೆದುಕೊಡು ಹೊರಟರು. ಇದರ ಅಂತರಾರ್ಥವೇನಿರ ಬಹುದೆಂದರೆ ಲಭ್ಯವಿದ್ದ ಕೆರೆ, ಕುಂಟೆ, ಭಾವಿಗಳಿಗೆ ರಾಜನು ಕಾವಲಿಡಿಸಿದ್ದರಿಂದ ನೀರು ಸಿಗದೇ ಹೋಯಿತು. ಕಾಯಕಕ್ಕೆ ಭಂಗ ಬರಬಾರದು ಎಂದು ಪರಿತಪಿಸಿದ ಮಾಚಿದೇವರ ತಳಮಳ ಕಂಡು ಹೊಸ ಬಾವಿಯನ್ನು ಏಕೆ ತೋಡಬಾರದು? ಎಂದು ಮಡದಿ ನುಡಿದಳು. ಉಭಯತರೂ ಕೂಡಿ ಬಾವಿ ತೋಡಿದರು. ನೀರೇನೋ ಧಾರಾಕಾರವಾಗಿ ಚಿಮ್ಮಿತು. ಆದರೆ ಪತ್ನಿಯು ಎದೆಯ ರಕ್ತವೇ ಹಿಂಡಲ್ಪಟ್ಟಂತೆ ಪ್ರಾಣಬಿಟ್ಟಳು. ಇಂದಿಗೂ ಬಸವಕಲ್ಯಾಣದಲ್ಲಿ ಮಾಚಿದೇವರು ತೋಡಿದ ಬಾವಿ ಮತ್ತು ಹೊಂಡ ಕಾಣಸಿಗುತ್ತವೆ. ಬಹುಶಃ ದಂಪತಿಗಳು ಯಾರಿಗೂ ಗೊತ್ತಾಗದಂತೆ ರಾತ್ರಿ ವೇಳೆಯಲ್ಲಿ ತೋಡಿರಬಹುದು.

ಈ ವಿಷಯವು ತಿಳಿದು ಬೆರಗಾದ ಶರಣರು ಮಾಚಿದೇವರ ಕಾಯಕ ನಿಷ್ಠೆಯನ್ನು ಮುಕ್ತ ಮನಸ್ಸಿನಿಂದ ಕೊಂಡಾಡಿದರು.

ಮುನ್ನವೇ ಇದನರಿತ ಚನ್ನಬಸವಾದಿಗಳು
ನನ್ನೆಯಲಿ ಅಪ್ಪ ಮಾಚಯ್ಯ । ಬೀರಿದರು
ಉನ್ನತದ ಶರಣ ಮಂಟಪಕೆ । ॥ 56 ॥

ಮಡಿವಾಳ ಮಾಚಯ್ಯ ದೃಢವುಳ್ಳ ಶಿವಭಕ್ತ
ಮಡದಿಯನು ಕೊಂದು ರಗುತದಲಿ । ತಾ ತೊಳೆದ
ಒಡೆಯನೊಸ್ತ್ರವ ಬಕುತಿಯಲಿ । ॥ 58 ॥

ಪತಿಯ ಕಾಯಕ ಸೇರಿ ಮತಿವಂತಿ ಎದೆಗೊಟ್ಟು
ಗತಿಯ ಹೊಂದಿದಳು ಸಗ್ಗದಲ್ಲಿ । ಶಿವಗಣವು
ಅತಿ ನುತಿಸಿ ಮಾನ ಸಲ್ಲಿಸಿತು । ॥ 59 ॥

ಮುತ್ತೈದಿ ನಿನ ಮರಣ ಎತ್ತ ಹೋದರು ಪೂಜೆ
ಕತ್ತೂರಿನಾತವಿದ್ದಂತೆ । ಜಗದೊಳಗೆ
ಉತ್ತಮರ ಮನಕೆ ಕಾಯಕವು । ॥ 60 ॥

ಪತಿಯ ಜೊತೆ ಸೇರಿ ಕಾಯಕ ಮಾಡಿ ಸಾವನ್ನಪ್ಪಿದ ಶರಣೆಗೆ ಶರಣರೆಲ್ಲರೂ ಕೂಡಿ ಗೌರವ ಸಲ್ಲಿಸಿದರು. ಕಸ್ತೂರಿಯ ಸುವಾಸನೆಯಂತೆ ಆಕೆಯ ಮರಣ ಎಂದು ಕೊಂಡಾಡಿದರು. ಬಿಜ್ಜಳನಿಗೂ ಕಣ್ತೆರೆಯಿತು, ಪಶ್ಚಾತ್ತಾಪವಾಗಿ ಕ್ಷಮೆ ಕೇಳಿಕೊಂಡನು. ವೀರ ಶರಣ ಮಡಿವಾಳ ಮಾಚಿದೇವರ ಹೆಸರು ಅಮರವಾಗಿ ನಿಂತಿರುವುದು ವಚನ ಸಾಹಿತ್ಯ ಸಂರಕ್ಷಣೆಯ ವಿಷಯದಲ್ಲಿ.

ಒಂದು ದಿನ ಧರ್ಮಗುರು ಬಸವಣ್ಣನವರು ಅರಮನೆಯ ಕಾರ್ಯಕಲಾಪ ಮುಗಿಸಿ ಮಹಾಮನೆಗೆ ಪೂಜೆ-ಪ್ರಸಾದಕ್ಕೆ ಅಶ್ವಾರೂಢರಾಗಿ ಬರುವಾಗ ಶರಣ ಹರಳಯ್ಯನವರು "ಶರಣು ಬಸವಣ್ಣ" ಎಂದರು. ಅದಕ್ಕೆ ಪ್ರತಿಯಾಗಿ ಧರ್ಮಗುರು ಬಸವಣ್ಣನವರು "ಶರಣು ಶರಣಾರ್ಥಿ" ಶರಣ ಹರಳಯ್ಯ ಎಂದು ಕೈಮುಗಿದು ಕುದುರೆಯ ಮೇಲೆ ಮುಂದೆ ಸಾಗಿದರು. ತಾವು ಒಂದು ಶರಣು ಹೇಳಿದಾಗ ಪ್ರತಿಯಾಗಿ ಎರಡು ಶರಣುಗಳನ್ನು ಬಸವಣ್ಣನವರು ಸಲ್ಲಿಸಲು ಹರಳಯ್ಯ ಶರಣರಿಗೆ ಆಘಾತವಾಯಿತು. ಅವರು ಚಿಂತಾಕ್ರಾಂತರಾಗಿರುವಾಗ ಮಡದಿ ಕಲ್ಯಾಣಮ್ಮ ತೊಡಕು ಬಿಡಿಸುವಂತೆ ಹೇಳಿದಳು, "ನನ್ನ ಮತ್ತು ನಿಮ್ಮ ತೊಡೆಯ ಚರ್ಮದಿಂದ ಒಂದು ಜೊತೆ ಜೋಡುಗಳನ್ನು ಮಾಡಿ ಧರ್ಮಗುರುವಿಗೆ ಸಲ್ಲಿಸೋಣ. ತನ್ಮೂಲಕ ಗುರು ಋಣ ತೀರಿಸೋಣ" ಸಹರ್ಷದಿಂದ ಜೋಡುಗಳನ್ನು ಮಾಡಿ ದಂಪತಿಗಳು ಮಹಾಮನೆಗೆ ನಡೆದರು. ಗೌರವದಿಂದ ಶರಣರನ್ನು ಬರಮಾಡಿಕೊಂಡ ಧರ್ಮಪಿತ ಬಸವಣ್ಣನವರು ನಿಜ ಸಂಗತಿ ತಿಳಿದು ಹರಳಯ್ಯ - ಕಲ್ಯಾಣಮ್ಮ ಅರ್ಪಿಸಿದ ಚಮ್ಮಾವುಗೆಗಳನ್ನು ಮೆಟ್ಟದೆ,

"ಅಯ್ಯಾ, ನಿಮ್ಮ ಶರಣರ ಚಮ್ಮಾವುಗೆಗೆ ಪೃಥ್ವಿ ಸಮಬಾರದು.

ಇವು ಅಪೂರ್ವವಾದುವು." ಎಂದು ಉದ್ಗರಿಸಿ ತಲೆಯ ಮೇಲೆ ಇಟ್ಟುಕೊಂಡರು. "ನಿಮ್ಮ ತ್ಯಾಗಕ್ಕೆ ಸಾಕ್ಷಿಯಾಗಿರಲಿ." ಎಂದು ಮರಳಿಕೊಟ್ಟ ಆ ಚಮ್ಮಾವುಗೆಗಳನ್ನು ಹರಳಯ್ಯನವರು ವಾಪಸ್ಸು ಒಯ್ಯುವಾಗ ಅವನ್ನು ನೋಡಿ ಮಂತ್ರಿ ಮಧುವರಸ ತನಗೆ ಮಾರಬೇಕೆಂದು ಕೇಳಿದ. ಹರಳಯ್ಯನವರು ಒಪ್ಪದಿದಾಗ ಬಲವಂತವಾಗಿ ಕಸಿದುಕೊಂಡು ಮೆಟ್ಟಿದ. ಮೆಟ್ಟಿದ ನಂತರ ಉರಿತಾಪವೆದ್ದು ನರಳತೊಡಗಿದ. ಈ ಬಾಧೆಗೆ ಪರಿಹಾರವೆಂದರೆ ಹರಳಯ್ಯನವರ ಕರಿಬಾನೆಯ ನೀರನ್ನು ತಂದು ಮಧುವರಸನಿಗೆ ಸ್ನಾನ ಮಾಡಿಸುವುದು ಎಂಬ ಮಂತ್ರಪುರುಷ ಬಸವಣ್ಣನವರ ಆದೇಶದಂತೆ ಮಗಳು ಲಾವಣ್ಯವತಿ ಹರಳಯ್ಯನವರನ್ನು ಬೇಡಿಕೊಂಡು ಕರಿಯ ಬಾನೆಯ ನೀರು ತಂದು ತಂದೆಗೆ ಸ್ನಾನ ಮಾಡಿಸಿದಳು. ಪವಾಡ ಸದೃಶವಾಗಿ ಉರಿತಾಪವಾರಿದಾಗ ಹರಳಯ್ಯನವರ ಮಹಿಮೆ ಏನೆಂದು ಮನವರಿಕೆಯಾಯಿತು. ಆಗ ತನ್ನ ಉದ್ಧಟತನಕ್ಕಾಗಿ ಪಶ್ಚಾತ್ತಾಪ ಪಟ್ಟು ಕ್ಷಮೆ ಕೇಳಿದ್ದಲ್ಲದೆ ಹರಳಯ್ಯನವರ ಮಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವ ಅಪೇಕ್ಷೆ ವ್ಯಕ್ತಪಡಿಸಿದನು. ಈ ಪ್ರಸ್ತಾಪದಿಂದ ಹರಳಯ್ಯನವರು ಗಾಬರಿಯಾದರು. ಸಂಪ್ರದಾಯವು ಒಪ್ಪಿಕೊಳ್ಳುವದಿಲ್ಲ ಎಂಬ ಅಭಿಪ್ರಾಯ ಅವರದು. ಅನುಭವ ಮಂಟಪದ ಮುಂದೆ ವಿಷಯವನ್ನು ಪ್ರಸ್ತಾಪಿಸಿದಾಗ ಇದು ಒಂದು ದುಃಸಾಹಸದ ಕೆಲಸ ಎಂದು ಗೊತ್ತಿದ್ದರೂ ಗುರು ಬಸವಣ್ಣನವರ ಆದಿಯಾಗಿ ಎಲ್ಲ ಶರಣರೂ ಒಪ್ಪಿದರು. ವಿವಾಹವು ನೆರವೇರಿತು. ಸಂಪ್ರದಾಯದಾಸರಾದ ಜಾತಿವಾದಿಗಳಿಗೆ ಸಂಕಟವಾಯಿತು. ವರ್ಣ ಸಂಕರವಿದೆಂದು ಶಾಸ್ತ್ರವಿರೋಧಿ ಕೃತ್ಯವೆಂದು ಬಿಜ್ಜಳನ ಬಳಿಗೆ ದೂರನ್ನೊಯ್ದರು. ಬಿಜ್ಜಳನು ಶರಣರನ್ನು ವಿಚಾರಣೆಗೆ ಒಳಪಡಿಸಿದ. "ಈ ವಿವಾಹ ವರ್ಣಸಂಕರವಲ್ಲ, ಸಮಾನ ಧರ್ಮೀಯರ ನಡುವೆ ನಡೆದಿದ್ದು, ಶರಣ ಹರಳಯ್ಯನವರು ಪೂರ್ವಾಶ್ರಮ ತೊರೆದು ಶರಣರಾಗಿದ್ದಾರೆ. ಮಧುವರಸರೂ ಅಷ್ಟೆ ತಮ್ಮ ಪೂರ್ವಾಶ್ರಮ ತೊರೆದಿದ್ದಾರೆ" ಎಂದು ಕ್ರಾಂತಿಪುರುಷ ಬಸವಣ್ಣನವರು ಮನವರಿಕೆ ಮಾಡಿದರು. ಸಂಪ್ರದಾಯಕ್ಕೆ ಬಿಜ್ಜಳ ಅಂಜಿ ಅದನ್ನು ಮೇಲುಗಟ್ಟಿದಾಗ ಗುರು ಬಸವಣ್ಣನವರು ತಮ್ಮ ಪ್ರಧಾನಿ ಹುದ್ದೆಗೆ ತ್ಯಾಗಪತ್ರ ನೀಡಿ ಹೊರನಡೆದರು. ವಿರೋಧಿಗಳಿಗೆ ಇನ್ನೂ ಸಮಾಧಾನವಾಗಲಿಲ್ಲ. ಮತಿಭ್ರಾಂತನಾದ ಬಿಜ್ಜಳನನ್ನು ಪ್ರಚೋದಿಸಿ ಗಡಿಪಾರು ಶಿಕ್ಷೆಯಾಗುವಂತೆ ಅವರು ಮಾಡಿದರು. ರಕ್ತಪಾತವನ್ನು ತಪ್ಪಿಸಲೋಸುಗ ಧರ್ಮಪಿತರು ಗಡಿಪಾರು ಶಿಕ್ಷೆ ಸ್ವೀಕರಿಸಿ ಹೊರಟರು. ಹೊರಡುವಾಗ ವಚನ ಸಾಹಿತ್ಯ ಮತ್ತು ಶರಣರ ರಕ್ಷಣೆಯ ಜವಾಬ್ದಾರಿಯನ್ನು ಚನ್ನಬಸವಣ್ಣ ಮತ್ತು ಮಡಿವಾಳ ಮಾಚಿದೇವರಿಗೆ ವಹಿಸಿದರು.

ಧರ್ಮಪಿತ ಬಸವಣ್ಣನವರ ನಿರ್ಗಮನದ ನಂತರ ಶರಣರ ವಿಚಾರಣೆ ನಡೆದು, ದೇವರ ಕಣ್ಣುಗಳಂತಿರುವ ಧರ್ಮ ಶಾಸ್ತ್ರಗಳನ್ನು ವಿರೋಧಿಸಿದ ವಿವಾಹ ಮಾಡಿದ್ದರಿಂದ ಕಣ್ಣುಗಳನ್ನು ಕಾಯ್ದ ಕಬ್ಬಿಣದ ಸಲಾಕೆಯಿಂದ ಕೀಳಿಸಬೇಕೆಂದು, ಆನೆಕಾಲಿಗೆ ಕಟ್ಟಿ ಎಳೆಸಿ ಮರಣ ದಂಡನೆ ವಿಧಿಸಬೇಕೆಂದು

Digitalized by e-Sahithya Documentation Forum
Sponsored by Sarayu Foundation Trust

ತೀರ್ಪು ನೀಡಲಾಯಿತು. ಅದರಂತೆ ಶರಣರ ವಧೆ ಮಾಡಿಸಲಾಯಿತು.

ಮೂದರಸು ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ । ಕಲ್ಯಾಣ
ಗಾದಿ ಹೌಹಾರಿ ತಳವಂಳಿಸಿ ॥

ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಕಳೆಯುದಕೆ । ದಂಡೇಶ
ಸಂದಣಿಗೆ ಉಳವಿ ಸೇರೆಂದ ॥

ಬಿಚ್ಚುಗತ್ತಿಯ ಮಾಚ ಕೆಚ್ಚೆದೆಯ ಬಂಟನವ
ರೊಚ್ಚ ಬೊಮ್ಮಯ್ಯ ಜಗದೇವ । ನಿಮ್ಮಾಣೆ
ನುಚ್ಚು ಬಿಜ್ಜಳನ ಕಡಿಯುವೆವು ॥

ಊಳಿಗವು ಹೊರಡುದಕೆ ನಾಳಿನಾ ಉದಯದೊಳು
ಕಾಳಗವು ಎಸಗೆ ಕೂಮತಕೆ । ಮಾಚಯ್ಯ
ಹೇಳಿ ಸಜ್ಜಾದ ಕಾಳಗಕೆ

ಕಾಳ ರುದ್ರನು ಮಾಚ ಭಾಳಲೋಚನ ಭಕ್ತ
ಮೊಲ್ಲ ಬೊಮ್ಮಯ್ಯ ಜಗದೇವ । ಮನೆಹೊಕ್ಕು
ಸೀಳಿ ಕಲೆಹೊಡೆದು ಬಿಜ್ಜಳನ ॥

ಹರಳಯ್ಯ- ಮಧುವರಸರ ವಧೆಯಿಂದ ಕಲ್ಯಾಣ ನಗರದ ಜನ ರೊಚ್ಚಿಗೆದ್ದರು. ಬೀದಿ ಬೀದಿಗಳಲ್ಲಿ ಸೈನ್ಯ ಮತ್ತು ಜನರ ಮಧ್ಯೆ ಕಾಳಗವಾಯಿತು. ರಾಜನ ಗಾದಿ ಅಲ್ಲಾಡ ತೊಡಗಿತು. ಅಂದು ಸಂಜೆ ಅನುಭವ ಮಂಟಪದಲ್ಲಿ ಶರಣರು ಸಮಾವೇಶವಾದರು. ವಚನ ವಾಙ್ಮಯದೊಡನೆ ಹೊರಡಲು ಸಜ್ಜಾಗುವ ಸೂಚನೆ ನೀಡಲಾಯಿತು. ಶರಣರ ವಧೆಯಿಂದ ಕೋಪಾವಿಷ್ಟರಾದ ಮಾಚಿದೇವರು, ಚಾಲುಕ್ಯ ಸಿಂಹಾಸನವನ್ನು ಅತಿಕ್ರಮಿಸಿದ್ದರಿಂದ ತಪ್ಪಿತಸ್ಥನಾಗಿದ್ದ ಮಲ್ಲಬೊಮ್ಮ ಜಗದೇವ ಇವರೆಲ್ಲ ಬಿಜ್ಜಳನನ್ನು ವಧಿಸುವ ಪ್ರತಿಜ್ಞೆ ಕೈಗೊಂಡರು.

ಬೆಳಗಾಗುವುದರಲ್ಲಿ ಕಲ್ಯಾಣದಿಂದ ನಿರ್ಗಮಿಸುವ ಸೂಚನೆ ನೀಡಿ, ಕಾಲರುದ್ರನೋ ಎಂಬಂತೆ ಸಿಟ್ಟಿಗೆದ್ದಿದ್ದ ಮಾಚಿದೇವರು ಮೊಲ್ಲ ಬೊಮ್ಮಣ್ಣ ಜಗದೇವರೊಡನೆ ಅರಮನೆ ಹೊಕ್ಕು ಬಿಜ್ಜಳನನ್ನು ವಧಿಸಿದರು. ಕಲ್ಯಾಣದಿಂದ ವಚನ ವಾಙ್ಮಯವನ್ನು ತೆಗೆದುಕೊಂಡು ಹೊರಟರು.

ಬಿಜ್ಜಳನ ಸಾವಿನ ಬಗ್ಗೆ ತಿಳಿದ ಅಳಿಯ ಬಿಜ್ಜಳ ಕಲ್ಯಾಣಕ್ಕೆ ಧಾವಿಸಿ ಬಂದು ಸೈನ್ಯವನ್ನು ಕೂಡಿಸಿಕೊಂಡು ದಂಡೆತ್ತಿ ಹೊರಟ. ಮೊದಲ ಯುದ್ಧವು ಮೊದಲೂರು ಬಳಿ ನಡೆಯಿತು. ಸೈನ್ಯದೊಡನೆ ಸೆಣಸಲಾರದೆ ಶರಣರು ಸಾಕಷ್ಟು ಸಾವು ನೋವನ್ನು ಅನುಭವಿಸಿದರು. ಚನ್ನಬಸವಣ್ಣನವರಿಗೆ ಹೋರಾಟದಲ್ಲಿ ಪೆಟ್ಟಾಯಿತು. ಅವರನ್ನು ದುರ್ಗಮ ಅರಣ್ಯದೊಳಕ್ಕೆ ಕಳಿಸಿ ಮಡಿವಾಳ ಮಾಚಿದೇವರು, ಅಕ್ಕನಾಗಲಾಂಬಿಕೆ ಹೋರಾಟದ ನೇತೃತ್ವ ವಹಿಸಿದರು. ಎರಡನೆಯ ಹೋರಾಟ ಮುರುಗೋಡದ ಬಳಿ ನಡೆಯಿತು. ಸ್ಥಳೀಯರ ಬೆಂಬಲ ಸಿಕ್ಕಿತು. ಗೋವೆಯ ಕದಂಬರು ಸೈನ್ಯವನ್ನು ನೆರವಿಗೆ ಕಳಿಸಿದರು.

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಸೈನ್ಯವನು । ಮುರುಗೋಡು
ಹಾದಿಯಲಿ ಮುರಿದ ಮಾಚಯ್ಯ

ತುಂಡ ಜಂಗಮದಂಡು ದಂಡನಾಯಕ ಮಾಚ
ಕಂಡಕಂಡಲ್ಲಿ ವೈರಿಗಳು । ಚೆಲ್ಲಿದರು
ಚಂಡು ಕಳೆಕೊಂಡು ಮರಿ ಅರಸ ॥

ಬೆನ್ನು ಹತ್ತಿದ ವೈರಿ ತಣ್ಣಗಾಯಿತು ಚೆದರಿ
ಮಣ್ಣು ಗೂಡಿಸಿದ ಮಾಚಯ್ಯ । ಕೈಯತ್ತಿ
ಚಿನ್ನವುಳಿಸಿದನು ಲಿಂಗಿಗಳ ॥

ಹರಭಜನೆ ಗುರು ಸೇವೆ ಉರುತರದಿ ಮಾಡುತಲಿ
ಶರಣ ಗಣ ಕೂಡಿ ಉಳಿವೆಯೊಳು । ಮರುದಿನವೆ
ಮೆರಸಿದರು ತತ್ವ ಮಂಟಪವ ॥

ಚನ್ನಬಸವೇಶ್ವರನು ಉನ್ನತನುಭಾವಿಗಳು
ಚಿನ್ಮಯವಾತು ಆ ಉಳಿವೆ । ಲಿಂಗಿಗಳ
ಕನ್ನೆ ಭಕ್ತಿಯಾ ಗೂಡಾತು ॥

ಮರಿ ಅರಸನ ವಧೆಯಾಗುತ್ತಲೇ ಸೈನ್ಯವು ಹತಾಶಗೊಂಡು ಹಿಮ್ಮೆಟ್ಟಿತು. ಉಳಿವೆಯ ದುರ್ಗಮ ಅರಣ್ಯವನ್ನು ಪ್ರವೇಶಿಸಿ ನಿಸರ್ಗ ನಿರ್ಮಿತ ಗವಿಗಳಲ್ಲಿ ವಚನ ಸಾಹಿತ್ಯವನ್ನು ಸಂರಕ್ಷಿಸಿದರು. ಪುನಃ ಉಳಿವೆಯಲ್ಲಿ ಅನುಭವ ಮಂಟಪದ ಚಟುವಟಿಕೆಗಳಾದ ಅನುಭವ ಗೋಷ್ಠಿ, ದಾಸೋಹ ಆರಂಭವಾಗಿ ಉಳಿವೆ ಕನ್ನೆ ಭಕ್ತಿ ಅಂದರೆ ಶರಣ ಸತಿಯರ ಭಕ್ತಿ ಕೇಂದ್ರವಾಯಿತು.

ಅನುಭವ ಮಂಟಪ ಎಂಬ ಜೇನೂಡಿನಲ್ಲಿ ಅಸಂಖ್ಯಾತ ಶರಣ ಶರಣೆಯರೆಂಬ ಅನುಭಾವಿಗಳಾದ ಜೇನ್ನೊಣಗಳು ತಮ್ಮ ತಮ್ಮ ಅನುಭಾವದ ಪರಿಪಾಕ ತುಂಬಿ ವಚನ ಸಾಹಿತ್ಯ ಎಂಬ ಜೇನುತುಪ್ಪವನ್ನು ಕೊಟ್ಟಿದ್ದಾರೆ. ಅದೇ ನನ್ನ ಪ್ರಾಣ. ಅದರ ರಕ್ಷಣೆಯೇ ನನ್ನ ಪ್ರಾಣ ರಕ್ಷಣೆ. ಎಂದು ಧರ್ಮಗುರು ಹೇಳಿದ ಆದೇಶವನ್ನು ಪಾಲಿಸಿದ ಸಂತೃಪ್ತಿಯಿಂದ ಆ ಸಂತೋಷವನ್ನು ಹಂಚಿಕೊಳ್ಳಲು ಮಡಿವಾಳ ಮಾಚಿದೇವರು ಕೂಡಲ ಸಂಗಮದತ್ತ ಸಾಗಿದರು. ಆದರೆ ಧರ್ಮಪಿತರ ದರ್ಶನ ಭಾಗ್ಯ ಸಿಗಲಿಲ್ಲ. ಇವರು ಕೂಡಲ ಸಂಗಮವನ್ನು ತಲ್ಪಿದಂದು ಅಲ್ಲಿ ಬಸವಣ್ಣನವರ ಕಾರಣಿಕೋತ್ಸವ ನಡೆಯುತ್ತಿತ್ತು. ಗುರು ಬಸವಣ್ಣನವರು ಲಿಂಗೈಕ್ಯರಾಗಿ ಗುರುಕುಲದಲ್ಲಿ ಗಣಾರಾಧನೆ ಏರ್ಪಾಡಾಗಿತ್ತು. ಮಡಿವಾಳ ಮಾಚಿದೇವರು ಧರ್ಮಗುರುವಿನ ಅಂತಿಮ ದರ್ಶನ ಸಿಗದಿದ್ದುದಕ್ಕಾಗಿ ದುಃಖಪಟ್ಟರು.

ಉಟ್ಟ ಸೀರೆಯ ಹರಿದು ಹೋದಾತ ನೀನಲ್ಲಾ ಬಸವಣ್ಣ.
ಮೆಟ್ಟಿದ ಕೆರಹ ಕಳದುಹೋದಾತ ನೀನಲಾ ಬಸವಣ್ಣ
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣ
ಸೀಮೆ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು
ಹೋದೆಯಲ್ಲಾ ಬಸವಣ್ಣ.
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ
ಆ ಬಸವಣ್ಣಂಗೆ ಶರಣೆಂಬ ಪಥವನೆ ತೋರು ಕಂಡಾ
ಕಲಿದೇವರದೇವ. ಸಂ.9 ಮ.ಮಾ.ವ.518

ಬಿಂದುವ ಹರಿದೆಯಲ್ಲ ಬಸವಣ್ಣ.
ನಾದವ ಸಿಂಹಾಸನವ ಮಾಡಿಕೊಂಡು ಇದ್ದೆಯಲ್ಲಾ ಬಸವಣ್ಣ.
ಅಷ್ಟಗುಣಂಗಳ ನಷ್ಟವ ಮಾಡಿದೆಯಲ್ಲಾ ನಿಜಲಿಂಗ ಬಸವಣ್ಣ.
ಶುಕ್ಲ ಶೋಣಿತ ಮೇದಸ್ಸು ಇದರಿಂದಾದ ಕಾಯವೆತ್ತ ಹೋಯಿತ್ತಯ್ಯಾ
ಘನ ಲಿಂಗ ಬಸವಣ್ಣ.
ಭಕ್ತಿಯ ರೂಪುಗೆಟ್ಟು ಮತ್ತೊಂದು ರೂಪಾದೆಯಲ್ಲಾ
ನಿರೂಪಿ ಬಸವಣ್ಣ.
ಶೂನ್ಯಪ್ರಸಾದಿಯಲ್ಲ, ನಿಶೂನ್ಯಪ್ರಸಾದಿಯಲ್ಲ.
ಆವ ಪ್ರಸಾದವನೂ ಸೋಂಕದ ಪ್ರಸಾದಿ.
ಯೋನಿಜನಲ್ಲದ, ಅಯೋನಿಜನಲ್ಲದ,
ನಿಜಮೂರ್ತಿಯೆನಿಸುವ ಬಸವಣ್ಣ.
ಭಕ್ತಿಯ ಹರಹಿಹೋದೆಯಲ್ಲಾ ಬಸವಣ್ಣ
ಮೂರ್ತನಲ್ಲದ, ಅಮೂರ್ತನಲ್ಲದ ಲಿಂಗವ
ತೋರಿದೆಯಲ್ಲಾ ಬಸವಣ್ಣ.
ನಿರವಯವಾಗಿ ಹೋದನು ನಮ್ಮ ಬಸವರಾಜನು.
ಬೆಳಗನುಟ್ಟು ಬಯಲಾಗಿ ಹೋದನು ನಮ್ಮ ಬಸವಲಿಂಗನು
ಬಸವಣ್ಣ ಬಸವಣ್ಣ ಬಸವಣ್ಣ ಎನಲಮ್ಮನು,

Digitalized by e-Sahithya Documentation Forum
Sponsored by Sarayu Foundation Trust

ಎನ್ನ ವಾಙ್ಮಯಕ್ಕಗೋಚರನಾಗಿ.
ಬಸವಣ್ಣಂಗೆ ಶರಣೆಂಬ ಪಥವ ತೋರಯ್ಯಾ, ಕಲಿದೇವರ ದೇವ.

ಶರಣ ಸಮೂಹದಲ್ಲಿ ಧರ್ಮಗುರು ಬಸವಣ್ಣನವರನ್ನೇ ತಮ್ಮ ಪ್ರಾಣವೆಂದು ತಿಳಿದವರು ಮಾಚಿದೇವರು. ಗಡಿಪಾರನ್ನು ಧರ್ಮಪಿತರು ಒಪ್ಪಿಕೊಳ್ಳುವ ಬಗ್ಗೆ ಮಾಚಿದೇವರ ವಿರೋಧ ವ್ಯಕ್ತವಾಯಿತು. ''ಇವು ಬಳೆ ತೊಟ್ಟ ಕೈಗಳಲ್ಲ, ರುದ್ರಾಕ್ಷಿಯ ವೀರಕಂಕಣ ಕಟ್ಟಿದವು. ನೀವು ಗಡಿಪಾರು ಆಜ್ಞೆ ಒಪ್ಪಿಕೊಳ್ಳದೆ, ನಮಗೆ ಅನುಮತಿ ಕೊಡಿರಿ. ನಾವು ರಾಜನ ಅನ್ಯಾಯದ ವಿರುದ್ಧ ಪ್ರತಿಭಟಿಸುತ್ತೇವೆ.'' ಎಂದರು ಮಾಚಿದೇವರು.

ಮಾಚಿತಂದೆಯ ಕೈಯಲಾಗದು
ಹೋಚಿ ತಂದೆಯು ಕೈಯಲಾಗದು
ಇಚ್ಛೆಗೆಟ್ಟಂತೆ ಇರಲಾಗದು
ಆಚೊತ್ತಿದಂತೆ ಇರಬೇಕು ಅತಿಚೋದ್ಯವಾಗಿ
ಎಚ್ಚರಿಕೆಯ ಮುಚ್ಚುಮರಹಿಲ್ಲದೆ ಬೆಚ್ಚದಂತಿರಬೇಕು
ಮಚ್ಚು ಪಲ್ಲಟವಾಗದೆ ಅಚ್ಚರಿಯ ಭಕ್ತಿಭರಿತನಾಗಿರಬೇಕು
ಕಲಿ ಕರುಳನೊತ್ತಿ ಮುಂದಕ್ಕೆ ನಡೆವನಲ್ಲದೆ
ಎಡೆಗೋಲನಾಸೆ ಮಾಡುವನೇ ಹೇಳಾ ?
ಕಲಿದೇವರದೇವನ ಅಂಕೆಗೆ ಝುಂಕೆಗೆ
ಬೆಚ್ಚಿ ಬೆದರಿ ಓಡದಿರು.
ವೀರಕಂಕಣವ ಕಟ್ಟಾ, ಸಂಗನಬಸವಣ್ಣ ಮ.ಮಾ.715

ಶಾಂತಿಪ್ರಿಯರಾದ ಬಸವಣ್ಣನವರು, ''ರಕ್ತಾಕ್ಷರಗಳಲ್ಲಿ ನನ್ನ ಹೆಸರು ಇತಿಹಾಸದಲ್ಲಿ ದಾಖಲಾಗುವುದು ನನಗಿಷ್ಟವಿಲ್ಲ, ರಾಜನ ಸೈನ್ಯದ ಎದುರಿಗೆ ಸೆಣಸುವುದರಿಂದ ರಕ್ತಪಾತವಷ್ಟೆ ಅದರ ಫಲಶ್ರುತಿ. ನಾನು ಗಡಿಪಾರನ್ನು ಸ್ವೀಕರಿಸಿ ಹೋದರೆ ಶರಣರಿಗೆ ಅದರಿಂದ ತೊಂದರೆಯಾದರೂ ತಪ್ಪಬಹುದು.'' ಎಂದು ನುಡಿದರು. ಎಂದೆಂದೂ ಧರ್ಮಗುರುವಿನ ಆದೇಶವನ್ನು ಮೀರದಿದ್ದ ಮಾಚಯ್ಯನವರು ಅಂದು ಎದುರು ವಾದಿಸಿದ್ದರು.

''ಬಿಜ್ಜಳನು ಪರೋಕ್ಷವಾಗಿ ಬೆಂಬಲಿಸಿದ್ದಾನೆ. ಆತನ ಜೀವಕ್ಕೆ ಅಪಾಯವಾದರೆ ಶರಣರಿಗೆ ಇನ್ನೂ ಹೆಚ್ಚಿನ ಅಪಾಯ ಎದುರಾಗುತ್ತದೆ. ಆದ್ದರಿಂದ ಬಿಜ್ಜಳನ ಜೀವಕ್ಕೆ ಅಪಾಯವಾಗಭಾರದು. ಎಂದು ಮುಂದಾಲೋಚನೆಯಿಂದ ಧರ್ಮಪಿತರು ಸೂಚನೆ ನೀಡಿ ನಿರ್ಗಮಿಸಿದ್ದರು. ಆದರೆ ಶರಣರ ವಧೆಯಿಂದ ತಪ್ತರಾದ ಮಾಚಿದೇವರು ಉದ್ವಿಗ್ನರಾದರು. ಕಾಲರುದ್ರನ ರೂಪ ತಳೆದು ಜಗದೇವ, ಮಲ್ಲಣ್ಣ, ಬೊಮ್ಮಣ್ಣರ ನೆರವಿನಿಂದ ಬಿಜ್ಜಳನ ವಧೆಗೆ ಪ್ರೇರಕರಾದರು. ಈ ಸಂಗತಿ ತಿಳಿದ ಬಳಿಕ ಧರ್ಮಪಿತರು ಅತ್ಯಂತ ವಿಷಾದದಿಂದ ಹೀಗೆ ನುಡಿದರೆಂಬುದು ಮಾಚಿದೇವರಿಗೆ ತಿಳಿದು ಬಂದಿತ್ತು.

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ;
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು, ನೋಡಾ !
ಒಬ್ಬ ಜಂಗಮದಭಿಮಾನದಿಂದ
ಜಗದೇವ ಮೊಲ್ಲ ಬೊಮ್ಮಣ್ಣಗಳ ಕೈಯಲ್ಲಿ
ಮಡಿದಿಹನು ಬಿಜ್ಜಳನು.
ಚಾಳುಕ್ಯರಾಯನ ಆಳಿಕೆ ತೆಗೆಯಿತು !
ಸಂದಿತ್ತು ಲಿಂಗದೇವಾ, ನಿಮ್ಮ ಕವಳಿಗೆಗೆ !

''ಒಬ್ಬ ಜಂಗಮದ ಅಭಿಮಾನದಿಂದ ಮಡಿದಿಹನು ಬಿಜ್ಜಳ. ಚಾಳುಕ್ಯರಾಯನ ಆಳ್ವಿಕೆ ತೆಗೆಯಿತು.'' ಎಂದು ಧರ್ಮಪಿತರು ಹೇಳುವಲ್ಲಿ ನನ್ನನ್ನೇ ಉದ್ದೇಶಿಸಿಯೇ ಹೇಳಿರಬೇಕು. ಇಡೀ ಜೀವನದಲ್ಲಿ ಅವರ ಒಂದು ಮಾತನ್ನು ಮೀರಿರಲಿಲ್ಲ. ಆದರೆ ಶರಣರ ವಧೆಯಿಂದಾಗಿ ಆಕ್ರೋಶಗೊಂಡ ಮನಸ್ಸನ್ನು, ಕೋಪವನ್ನು ನಿಯಂತ್ರಿಸಲಾಗಲಿಲ್ಲ. ಎಷ್ಟೂ ಅಂತ ಸಹಿಸಿಕೊಳ್ಳುವುದು ! ಬಿಜ್ಜಳನ ಸಾವಿನಿಂದ ಧರ್ಮಪಿತರಿಗೆ ನೋವುಂಟಾಯಿತೇನೋ ! ನಾನು ಅವರ ಕ್ಷಮೆ ಕೇಳಬೇಕು. ನಡೆದ ಪ್ರಸಂಗವನ್ನು ವಿವರಿಸಬೇಕು ಎಂದುಕೊಂಡು ಬಂದೆ. ಆದರೆ ನನ್ನ ಪ್ರಾಣಸ್ವರೂಪರಾದ ಅಪ್ಪನವರ ದರ್ಶನವಾಗಲಿಲ್ಲ.'' ಎಂದು ಮಾಚಿದೇವರು ಧರ್ಮಪಿತರ ಸಮಾಧಿಯ ಬಳಿ ಧ್ಯಾನಾಸಕ್ತರಾಗಿ ಕುಳಿತು

ಪ್ರಲಾಪಿಸುತ್ತಿದ್ದರು. ಗಾಢವಾದ ಕತ್ತಲೆ ವ್ಯಾಪಿಸಿದೆ. ಅಂಥ ಸನ್ನಿವೇಶದಲ್ಲಿ ಬೆಳಕೊಂದು ಮೂಡಿತು. ರೋಮಾಂಚಿತರಾಗಿ ಕಣ್ತೆರೆದು ನೋಡುತ್ತಾರೆ. ಬೆಳಕಿನ ಪುಂಜವಾಗಿ ಗುರು ಬಸವಣ್ಣನವರು ಬೆಳಗುತ್ತಿದ್ದಾರೆ. ''ಮಾಚಿದೇವರೆ, ನಾನೆಲ್ಲಿಯೂ ಹೋಗಿಲ್ಲ. ನಿಮ್ಮ ಹೃದಯದಲ್ಲೇ ನೆಲೆಸಿದ್ದೇನೆ.'' ಆ ಪ್ರಭಾಮೂರ್ತಿ ನುಡಿಯುತ್ತಲಿದೆ. ಮಾಚಿದೇವರ ಕಣ್ಣಲ್ಲಿ ಆನಂದ ಬಾಷ್ಪ ಸುರಿಯತೊಡಗಿತು. ಹೃದಯ ತುಂಬಿ ಹಾಡುತ್ತಾರೆ.

ನಿನ್ನ ಆಕಾರ ನಿರಾಕಾರವಾಯಿತಲ್ಲಾ ಬಸವಣ್ಣ
ನಿನ್ನ ಪ್ರಾಣ ನಿಃಪ್ರಾಣವಾಯಿತಲ್ಲಾ ಬಸವಣ್ಣ
ಲಿಂಗ ಜಂಗಮದ ಮಾಟ ಸಮರ್ಪಿತವಾಯಿತಲ್ಲಾ ಬಸವಣ್ಣ
ನಿಶ್ಶಬ್ದವೇದ್ಯವಾದೆಯಲ್ಲಾ ಬಸವಣ್ಣ
ಕಲಿದೇವರದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ, ಸಂಗನಬಸವಣ್ಣ

ಗುರು ಬಸವಣ್ಣನವರ ಜ್ಯೋತಿ - ಶರೀರ ದರ್ಶನದಿಂದ ಅಪಾರ ಆನಂದವಾಯಿತು. ತಮ್ಮ ಹೃದಯದಲ್ಲೇ ಧರ್ಮಪಿತರು ನೆಲೆಸಿದ್ದಾರೆ ಎಂದುಕೊಂಡು ಗುರು ಬಸವಣ್ಣನವರ ಲಿಂಗೈಕ್ಯದ ಸಂಗತಿಯನ್ನು ಚನ್ನಬಸವಣ್ಣನವರಿಗೆ ತಿಳಿಸಲೆಂದು ಉಳಿವೆಯತ್ತ ಸಾಗಿದರು. ಮುಪ್ಪು, ಜೊತೆಗೆ ಯುದ್ಧದಲ್ಲಿ ಆದ ಗಾಯಗಳಿಂದ ಬಹಳಷ್ಟು ಹಣ್ಣಾಗಿದ್ದ ಮಾಚಿದೇವರು ಗೊಡಚಿ ಎಂಬಲ್ಲಿ ಲಿಂಗೈಕ್ಯರಾದರು. ಗೊಡಚಿ ಗಿಡದ ಕೆಳಗೆ ಅವರ ಸಮಾಧಿ ಮಾಡಲಾಯಿತು. ಇಂದಿಗೂ ಆ ಸ್ಥಳವನ್ನು ಮುದಿ ವೀರಭದ್ರನ ಸ್ಥಾನ ಎಂದು ಹೇಳಲಾಗುವುದು.

ಷಡ್‌ಗಣಾಧೀಶರಲ್ಲಿ ಒಬ್ಬರಾದ ಮಡಿವಾಳ ಮಾಚಿದೇವರನ್ನು ಎಷ್ಟು ಸ್ಮರಿಸಿದರೂ ಕಡಿಮೆಯೆ. ಅವರ ಧೈರ್ಯ, ಸ್ಥೈರ್ಯಗಳಿಂದಲೇ ವಚನ ಸಾಹಿತ್ಯವು ಉಳಿಯಲು ಸಾಧ್ಯವಾಯಿತು. ಜನರು ಕೇವಲ ಧರ್ಮವಂತರಾದರೆ ಸಾಲದು ಧರ್ಮ ರಕ್ಷಣೆಗಾಗಿ ಹೋರಾಡುವುದೂ ಅಷ್ಟೇ ಅವಶ್ಯಕ ಎನ್ನುವುದನ್ನು ಮಾಚಿದೇವರಿಂದ ನಾವು ಕಲಿಯಬೇಕು. ಮಾಚಿದೇವರು ತತ್ವನಿಷ್ಠುರಿ. ಏನೇ ಕಷ್ಟ ಬಂದರೂ ಸರಿ ಸತ್ಯವನ್ನು, ತತ್ವವನ್ನು ಹಿಡಿಯಬೇಕೆನ್ನುವ ವಾದದವರು. ಹೀಗಾಗಿಯೇ ಗುರು ಬಸವಣ್ಣನವರು ತಮ್ಮೊಂದು ವಚನದಲ್ಲಿ ಹೀಗೆ ಹೇಳುವರು.

ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು
ಬಂದ ಬಳಲಿಕೆಯ ಪರಿಹರಿಸಲು ಚನ್ನಬಸವಣ್ಣ ಬಂದನು
ಇನ್ನು ಬಾರದಂತೆ ಪ್ರಭುದೇವರು ಬಂದರು
ಆಜ್ಞಾಕರ್ತೃ ಮಡಿವಾಳ ಮಾಚಿದೇವರು ಬಂದರು
ನಾನಿನ್ನಾರಿಗಂಜೆ ಲಿಂಗದೇವ.

ಸಮಾಜ ಸುಧಾರಣೆ, ವ್ಯವಸ್ಥೆಯ ಪರಿವರ್ತನೆಯ ಕ್ರಾಂತಿಕಾರಿ ಉದ್ದೇಶವನ್ನು ಬಸವಣ್ಣನವರು ಹೊಂದಿದ್ದು ಇಂಥ ಪ್ರಯತ್ನ ಗರ್ಜಿಸುವ ಸಿಂಹದ ಗವಿಯನ್ನು ಹೊಕ್ಕಂತೆಯೇ ಸರಿ. ಈ ದೇಶದಲ್ಲಿ ಸಾಮಾಜಿಕ ವರ್ಣ ವ್ಯವಸ್ಥೆ, ಪುರೋಹಿತ ಶಾಹಿ ಅಷ್ಟು ಬಲಶಾಲಿಯಾದುದು. ಅಂಥ ಸಾಹಸದ ಹೆಜ್ಜೆ ಇಡುವಾಗ ಬರುವ ಸಮಸ್ಯೆಗಳು, ಸಂಕಷ್ಟಗಳು ಬಹಳ. ಸಹಕರಿಸುವವರು ಬಹಳ ಕಡಿಮೆ. ಕ್ರಾಂತಿಪುರುಷ ಬಸವಣ್ಣನವರು ಏಕಾಂಗಿಯಾಗಿ ಹೋರಾಟ ಶುರುಮಾಡಿದರು. ಅನುಯಾಯಿಗಳು ಬಹಳ ಬಂದರೂ ಸಮಾನ ಚಿಂತಕರು ಸಿಗುವುದು ಬಹಳ ಕಷ್ಟ. ಚನ್ನಬಸವಣ್ಣನವರು ವಯಸ್ಸಿನಲ್ಲಿ ಅತ್ಯಂತ ಕಿರಿಯರಾದರೂ ಅಪಾರ ಮೇಧಾವಿಯೂ, ಚಿಂತಕರೂ ಆಗಿದ್ದರಿಂದ ಧರ್ಮಪಿತ ಬಸವಣ್ಣನವರಿಗೆ ಬೌದ್ಧಿಕ ಸಂಗಾತಿಯಾಗಿದ್ದರು. ಹೀಗಾಗಿ ಏನಾದರೂ ಬಳಲಿಕೆಯುಂಟಾದಾಗ ಅವರು ಪರಿಹರಿಸುವ ಮಾತುಗಳನ್ನು ಆಡುತ್ತಿದ್ದರು. ಪ್ರಭುದೇವರು ಬಂದ ಬಳಿಕವಂತೂ ಗುರು ಬಸವಣ್ಣನವರ ಆತ್ಮ ಬಲ ಇಮ್ಮಡಿಸಿತು. ಏಕೆಂದರೆ ಅಲ್ಲಮ ಪ್ರಭುದೇವರು ಶ್ರೇಷ್ಠ ತತ್ವಜ್ಞಾನಿ, ಯೋಗಿ, ದಾರ್ಶನಿಕ ದಿಗ್ಗಜ, ಸತ್ಯದ ಆರಾಧಕ. ಅವರು ಮನವೊಲಿದು ಬಸವ ಮಾರ್ಗಕ್ಕೆ ಬರುವುದೆಂದರೆ ಸಾಮಾನ್ಯವೆ!

ಮಡಿವಾಳ ಮಾಚಿದೇವರ ಸಾಂಗತ್ಯ ಬಸವಣ್ಣನವರಿಗೆ ನೂರ್ಮಡಿ ಆತ್ಮಬಲವನ್ನು ತುಂಬಿತು. ಅವರು ಸತ್ಯದ ಆರಾಧಕರಷ್ಟೆ ಅಲ್ಲ ಖಂಡಿತವಾದಿ. ತತ್ವ ನಿಷ್ಠುರಿ. ಸತ್ಯದ ಪ್ರತಿಷ್ಠಾಪನೆಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಾಗುವ ಗಣಾಚಾರಿ. ಹೀಗಾಗಿ ಯಾವುದನ್ನೇ ಕ್ರಿಯಾರೂಪಕ್ಕೆ ತರಬೇಕಾದರೆ ಮಾಚಿದೇವರು ಅದಕ್ಕೆ ಸದಾಸಿದ್ಧರು ಎಂಬ ನಂಬುಗೆ ಗುರು ಬಸವಣ್ಣನವರದು.

Digitalized by e-Sahithya Documentation Forum
Sponsored by Sarayu Foundation Trust

ಇಂಥ ಮಡಿವಾಳ ಮಾಚಿದೇವರನ್ನು ಕುರಿತು ಚಾಮರಸ ಕವಿಯು ಬರೆದ ಈ ಪದವನ್ನು ಹಾಡಿ ಶರಣು ಸಲ್ಲಿಸೋಣ.

ಶರಣು ಹೊಕ್ಕ ಸಮಸ್ತರಂತಃ
ಕರಣದ ಮಾಯಾಂಬರದ ಮೈಲಿಗೆ ದೊಳೆದು ಭ
ಕ್ತಿರಸ ಪ್ರವಾಹದಲಿ
ಶರಣ ಪದವಿಗೆ ಸಲ್ಲಿಸಿ
ಪರಮೇಶ್ವರನ ತೋರುವ ಸುಲಭ
ಕರುಣಾಶರಧಿ ಮಡಿವಾಳ ಮಾಚಿದೇವಯ್ಯಂಗೆ ಶರಣಾರ್ಥಿ.

ಮಾಚಿದೇವ ಮಂಗಲ

ಜಯತು ಜಯತು ಮಾಚಿದೇವ ಧೀರಯೋಗಿ ಪಾಹಿಮಾಂ
ಜಯತು ಜಯತು ಗಣವೀರ ಮಾಚಿತಂದೆ ರಕ್ಷಮಾಂ ॥ ಪ ॥

ದೇವರ ಹಿಪ್ಪರಗಿಯಲ್ಲಿ ಜನಿಸಿ ನೀನು ಬಂದೆಯಾ
ದೇವಗುರು ಬಸವಣ್ಣನ ಪಥಕೆ ಒಲಿದು ನಿಂದೆಯಾ
ಅನುಭವ ಮಂಟಪದ ಸ್ತಂಭವಾಗಿ ಮೆರೆದೆಯಾ
ಅನುಭಾವದ ನುಡಿಗಳನು ಭಾವತುಂಬಿ ಉಲಿದೆಯಾ ॥ 1 ॥

ಗುರು ಬಸವ ತಂದೆಯ ಕಾರುಣ್ಯವ ಗಳಿಸುತ
ಬಸವ ತಂದೆ ನಿನ್ನ ಪ್ರಾಣವೆಂದು ತಿಳಿದು ನಡೆದೆಯಾ
ಬಸವ ಧರ್ಮ ರಕ್ಷಣೆಗೆ ತನುಮನಗಳ ಅರ್ಪಿಸಿ
ತ್ಯಾಗ -ಯೋಗ -ವಿರಾಗಗಳ ಸಂಗಮವಾಗಿ ಮೆರೆದೆಯಾ ॥ 2 ॥

ಜಾತಿವಾದಿ ಜನರು ವಚನ ನಾಶಗೈಯಲೆಳಸಲು
ಛಾತಿಯಿಂದ ಖಡ್ಗ ಹಿಡಿದು ಅರಿಗಳನ್ನು ಮರ್ದಿಸಿದೆ
ವಚನ ನಿಧಿಯ ಉಳಿಸಿಕೊಟ್ಟ ಧೀರ ಶರಣ ನೀನಾದೆ
ಲಿಂಗಾಯತ ಧರ್ಮ ಜ್ಯೋತಿ ವೀರ ಮಾಚಿ ತಂದೆಯೆ ॥ 3 ॥

ಉಳಿವೆ ಬನಕ್ಕೆ ಸಾಹಿತ್ಯವ ತಂದು ಸಂರಕ್ಷಿಸಿ
ಅಳಿವ ಕಾಯವಿದನು ಗೊಡಚಿ ಕ್ಷೇತ್ರದಲ್ಲಿ ಬಿಟ್ಟೆಯಾ
ಧೀರ ಶರಣ ವೀರ ಗುರು ಮಾಚಿತಂದೆ ವಂದಿಪೆ
ನಿನ್ನ ಧೀರ ನಡೆ ನಮಗೆ ಎಂದೆಂದೂ ಸ್ಫೂರ್ತಿ ಸೆಲೆ ॥ 4 ॥

8.ಕಲ್ಯಾಣ ಕ್ರಾಂತಿಯ ಕಥೆ

ಹರಳಯ್ಯ ಸ್ತುತಿ

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣ ಹರಳಯ್ಯ। ನಮಗಿನ್ನು
ಹರಸಿರಿ ಹುಲುಸು ಹುಲ್ಲುಲಿಗೂ ॥
ಕಿರಿಕುಲದ ಹರಳಯ್ಯ ವರ ಶರಣ ತಾನಾದ
ಪರಮತವ ಜಯಿಸಿ ಹರಸಿದನು । ಹರಳನಿಗೆ
ಹರ ಮೆಚ್ಚಿ ಮೆರೆಸಿ ಕರೆದೊಯ್ದು ॥
ಕಾರಜೋಳದ ಮುಂದೆ ಯಾರು ನೆಲೆಸಿದೆರಯ್ಯ
ಮಾರಹರ ಭಕ್ತ ಹರಳಯ್ಯ। ತೋಡಿರುವ
ನೀರೊರತಿ ಸಾಕ್ಷಿ ಯುಗ ಯುಗಕೆ ॥
ಕುಲದಲ್ಲಿ ಹೊಲೆಯನವ ಹೊಲಬಿನಲಿ ಹೊಲೆಯಿಲ್ಲ
ಹೊಲೆಯ ನೆಲೆ ಬಲ್ಲ ಘನ ಶರಣ। ಹರಳಯ್ಯ
ನೆಲೆಸಿ ಕಲ್ಯಾಣ ಪುರದೊಳಗೆ

ತನು ಮನ ಧನ ಸವೆಸಿ ಮನೆಯ ಕಾಯಕ ಮಾಡಿ
ಅನುಭಾವಿಯಾದ ಹರಳಯ್ಯ। ಮಂಟಪಕೆ
ಮಣಿಮಾಲೆಯಾದ ಶಿವಮತಕೆ ॥
ಮಡದಿ ಕಲ್ಯಾಣಮ್ಮ ಹಡದವ್ವ ಜಂಗಮಕೆ
ಬಿಡದೆ ದಾಸೋಹ ಮಾಡಿದಳು। ಕಲ್ಯಾಣ
ಪಡೆದು ಘನ ಹೆಸರ ನಾಡೊಳಗೆ ॥
ಹೂವಿನ ಮಳೆಯಾಗಿ ಹೂವಿನ ತೇರೇರಿ
ಹೂವಾದರವರು ಶಿವಪದಕೆ। ಶಿವಶರಣ
ಪಾವನದ ಮಾಲೆ ಸೇರಿದರು ॥
ಹರನ ಶಿಖರದ ಮೇಲೆ ಸಿರಿಗಂಧ ಮರ ಹುಟ್ಟಿ
ಮರದೊಳಗೆ ಎರಡು ಗಿಣಿ ಕೂತು ಹಾಡಿದವು
ಹರಳಯ್ಯನೆಂಬ ಹಳೆ ಕಥೆಯ ॥

–ಜನಪದ ಗೀತೆ

ವಿಶ್ವಗುರು ಬಸವಣ್ಣನವರ ಚರಿತ್ರೆ

ವಿಶ್ವಗುರು ಬಸವಣ್ಣನವರು ಪರಮಾತ್ಮನ ಕರುಣೆಯ ಕಂದರಾಗಿ ಅವತರಿಸಿ. ಲೋಕಕ್ಕೆ ಹೊಸ ಧರ್ಮವೊಂದನ್ನು ಕೊಟ್ಟರು. ಇಂಗಳೇಶ್ವರ ಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ-ಮಾದಲಾಂಬಿಕೆಯರ ಮಗನಾಗಿ ಆನಂದನಾಮ ಸಂವತ್ಸರದಲ್ಲಿ ವೈಶಾಖಮಾಸದ ಅಕ್ಷಯ ತೃತೀಯಾದಂದು (೩೦-೪-೧೧೩೪) ರೋಹಿಣಿ ನಕ್ಷತ್ರದಲ್ಲಿ ಜನಿಸಿ; ಯಾವುದೇ ಅಂಧಶ್ರದ್ಧೆ ಜಡಸಂಪ್ರದಾಯಗಳನ್ನೊಪ್ಪದೆ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಯಾಗಿ ಕೂಡಲ ಸಂಗಮದ ಗುರುಕುಲಕ್ಕೆ ಬಂದರು. ಶಾಸ್ತ್ರಾಧ್ಯಯನ, ಯೋಗಾಭ್ಯಾಸಗಳಲ್ಲಿ ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಕಾಲಿರಿಸಿದರು. ಜನರಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯತೆ, ಕಂದಾಚಾರ, ಜಾತೀಯತೆಗಳನ್ನು ಕಂಡು ಮನನೊಂದು ಪರಿಹಾರವನ್ನು ಅರಸತೊಡಗಿದರು.

ಒಂದು ದಿನ (೧೪-೦೧-೧೧೫೫) ಪರಮಾತ್ಮನ ದಿವ್ಯ ದರ್ಶನವಾಯಿತು; ಅನುಗ್ರಹಿತರಾದರು. ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಮೀರಿದ ಸೃಷ್ಟಿಕರ್ತನೇ ಶ್ರೇಷ್ಠನೆಂದು ಘೋಷಿಸಿ ಆ ದೇವನನ್ನು ಲಿಂಗದೇವ ಎಂದು ಕರೆದರು. ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ ಎಂಬ ಭಾವ ತಳೆದು, ದೇವನ ಸಾಕಾರ ಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ಲಿಂಗದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ದೇವರ ಕುರುಹಾದ ಇಷ್ಟಲಿಂಗವು ಮಾನವನ ಜಾತಿ, ವರ್ಣ, ವರ್ಗ ಭೇದಗಳನ್ನು ಕಳೆದು ಶರಣನನ್ನಾಗಿ ಮಾಡುವ ಸಾಧನವಾಗಬೇಕೆಂದು ಅದನ್ನು ಗಣಲಾಂಛನವನ್ನಾಗಿ ಮಾಡಿದರು.

ದಿವ್ಯಾನುಭವ ಪಡೆದು, ನವ ಸಮಾಜ ನಿರ್ಮಾಣದ ರೂಪುರೇಷೆಗಳನ್ನು ತಮ್ಮ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕ ಕೈಗೊಂಡರು. ಅಲ್ಲಿಂದ ಮುಂದೆ ಭಂಡಾರಿಯಾಗಿ, ಪ್ರಧಾನಿ(ದಂಡನಾಯಕ)ಯಾಗಿ ಕಾಯಕ ನಿರ್ವಹಿಸಿದರು. ಅನುಭವ ಮಂಟಪ ರಚಿಸಿ ಧರ್ಮಪ್ರಚಾರ ಮಾಡಿದರು. ಎಲ್ಲರ ಮನೆ, ಮನಗಳ ಬಾಗಿಲಿಗೂ ಧರ್ಮಗಂಗೆ ಹರಿಯುವಂತೆ ಮಾಡಿದರು. ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ಲಿಂಗಾಯತರಾದ ಎಲ್ಲ ಶರಣ ಬಂಧುಗಳನ್ನು ಸಮಾನ ಭಾವದಿಂದ ಕಂಡರು.

ಗುರುಬಸವಣ್ಣನವರ ದಿವ್ಯ ಪ್ರಭೆಯ ಪ್ರಭಾವಕ್ಕೆ ಒಳಗಾದ ಮತ್ತೊಬ್ಬ ಶರಣರು ಸಮಗಾರ ಹರಳಯ್ಯನವರು. ಧರ್ಮಪಿತ ಬಸವಣ್ಣನವರ ಜೀವನದ ಕಡೆಯ ವರ್ಷಗಳಲ್ಲಿ ಪರಿಚಿತರಾದ ಹರಳಯ್ಯನವರು ತಮ್ಮ ಅಪೂರ್ವ ತ್ಯಾಗ ಬಲಿದಾನದಿಂದಾಗಿ ಶರಣ ಧರ್ಮದ ಕಣ್ಮಣಿಯಾಗಿ ಬೆಳಗಿ ಅಮರರಾಗಿದ್ದಾರೆ. ಕಲ್ಯಾಣ ಕ್ರಾಂತಿಯ ಪ್ರಮುಖ

Digitalized by e-Sahithya Documentation Forum
Sponsored by Sarayu Foundation Trust

ಸೂತ್ರಧಾರರು ಬಸವಣ್ಣನವರಾದರೆ ಪಾತ್ರಧಾರಿಗಳು ಶರಣ ಹರಳಯ್ಯನವರು ಮತ್ತು ಮಧುವರಸರು.

ಜನ್ಮದಿಂದ ಸಮಗಾರರ ಜಾತಿಯಲ್ಲಿ ಹುಟ್ಟಿದವರು ಹರಳಯ್ಯನವರು. ಅವರದು ಚಮ್ಮಾವುಗೆ ಹೊಲಿಯುವ ಕಾಯಕ. ಬಸವಣ್ಣನವರ ಕೀರ್ತಿಯನ್ನು ಕೇಳಿ ಸಮ್ಮೋಹಿತರಾಗಿ ಅನುಭವ ಮಂಟಪದತ್ತ ಆಕರ್ಷಿತರಾದರು. ಲಿಂಗಾಯತ ಧರ್ಮದ ಘನತೆಯನ್ನರಿತು ದೀಕ್ಷಾವಂತರಾದರು. ತವರ ಮಡದಿ ಕಲ್ಯಾಣಮ್ಮ ತಾಯಿ, ಒಬ್ಬನೇ ಮಗ ಶೀಲವಂತ. ಮೂವರೂ ಶರಣ ಮಾರ್ಗಿಗಳಾದರು.

ಒಂದು ದಿವಸ ತಾವು ಸಿದ್ಧಪಡಿಸಿದ ಚಮ್ಮಾವುಗೆಗಳನ್ನು ತೆಗೆದುಕೊಂಡು ಮಾರಲು ಹೋಗಿದ್ದರು. ಪ್ರಧಾನಿ ಬಸವಣ್ಣನವರು ಅರಮನೆಯ ಬೆಳಗಿನ ಕಾರ್ಯಕಲಾಪ ಪೂರೈಸಿ ಮಧ್ಯಾಹ್ನದ ಪೂಜೆ-ಪ್ರಸಾದಕ್ಕಾಗಿ ಮಹಾಮನೆಗೆ ಹೊರಟು, ರಾಜ ಮಾರ್ಗದಲ್ಲಿ ಬರುತ್ತಿದ್ದರು. ಮುಗ್ಧ ಭಕ್ತರಾದ ಹರಳಯ್ಯನವರು, 'ಶರಣು ಬಸವಣ್ಣ' ಎಂದರು ಕಿಂಕರತೆಯಿಂದ. ಧರ್ಮಪಿತರು ನೋಡಿದರು. ಹಣೆಯ ಮೇಲೆ ತ್ರಿಪುಂಡ್ರ; ಕೊರಳಲ್ಲಿ ಇಷ್ಟಲಿಂಗ ಮತ್ತು ರುದ್ರಾಕ್ಷಿ, ಸಾತ್ವಿಕತೆ ಮುಖದ ಮೇಲೆ. ಪಕ್ಕದಲ್ಲಿ ಚಮ್ಮಾವುಗೆಗಳನ್ನು ಇಟ್ಟ ಬುಟ್ಟಿಯನ್ನ ಹೊತ್ತು ನಿಂತ ಮಗ. ಅವನದೂ ಶರಣನ ವೇಷಭೂಷಣ. ಹೃದಯ ತುಂಬಿ ಬಂದಿತು. ಅತ್ಯಂತ ಕೆಳಸ್ತರದವರಿಗೂ ಧರ್ಮ-ದೇವರು-ಸಂಸ್ಕಾರ ಲಭ್ಯವಾಗಬೇಕು ಎಂಬ ಧರ್ಮಪಿತರ ಹಂಬಲ ಇಲ್ಲಿ ಸಾಕಾರಗೊಂಡಿತು. ಹೃದಯ ತುಂಬಿ ಬಂದು, "ಶರಣು ಶರಣಾರ್ಥಿ ಶರಣ ಹರಳಯ್ಯ" ಎಂದು ಭಾವಪೂರ್ಣವಾಗಿ ನುಡಿದು ಮುಂದೆ ಸಾಗಿದರು. ಧರ್ಮಗುರುವಿನ ಆ ವಿನಯ ಹರಳಯ್ಯನವರನ್ನು ದಿಗ್ಭ್ರಾಂತಗೊಳಿಸಿತು. ಎಷ್ಟೋ ಹೊತ್ತು ಸ್ತಂಭೀಭೂತರಾಗಿ ನಿಂತ ಹರಳಯ್ಯನವರನ್ನು ಮಗ ಶೀಲವಂತ ಎಚ್ಚರಿಸಿದ. ಭಾರವಾದ ಹೃದಯದಿಂದ ಮನೆಗೆ ಮರಳಿದರು. "ಕಲ್ಯಾಣಿ, ಎಂಥಾ ಪ್ರಮಾದವಾಯಿತು! ಯಾರ ಪಾದ ಧೂಳಿಯಿಂದ ನಾವು ಪುನೀತರಾಗುತ್ತೇವೆಯೋ ಅಂತಹ ಧರ್ಮಗುರುವು ನನಗೆ ಒಂದು ಶರಣೆನ ಭಾರ ಹೊರಿಸಿಬಿಟ್ಟರು. ನಾನು ಒಂದು ಶರಣು ಹೇಳಿದರೆ ಅವರು ಶರಣು ಶರಣಾರ್ಥಿ ಎಂದು ನುಡಿದು ಒಂದು ಶರಣೆನ ಸಾಲಹೊರಿಸಿಬಿಟ್ಟರು. ಈ ಸಾಲವನ್ನು ತೀರಿಸುವ ಬಗೆ ಹೇಗೆ?"

"ನಾನೊಂದು ಪರಿಹಾರ ಹೇಳುತ್ತೇನೆ. ಅವರಿಗೆ ಒಂದು ಜೋಡು ಸುಂದರವಾದ ಚಮ್ಮಾವುಗೆ ಮಾಡಿ, ಅರ್ಪಿಸೋಣ". ಕಲ್ಯಾಣಮ್ಮ ಸೂಚಿಸಿದಳು.

"ಇದೇನು ದೊಡ್ಡ ವಿಷಯ; ಬಹಳ ಹಣ ಕೊಟ್ಟವರಿಗೆ ವಿಶೇಷವಾದ ಚಮ್ಮಾವುಗೆ ಮಾಡಿಕೊಡುವುದಿಲ್ಲವೆ?"

"ನಾನು ಹೇಳುವುದು. ಸಾಮಾನ್ಯ ಚಮ್ಮಾವುಗೆ ಕುರಿತು ಅಲ್ಲ ; ಸ್ವತಃ ನಿಮ್ಮ, ನನ್ನ ಮೈಚರ್ಮ ತೆಗೆದು ಚಮ್ಮಾವುಗೆ ಮಾಡಿ ಅರ್ಪಿಸೋಣ. ಅವರ ಪಾದಗಳು ನಮ್ಮ ಮೈ ಚರ್ಮವನ್ನು ಮೆಟ್ಟಿದರೆ ಶರಣೆನ ಸಾಲ ಹರಿಯುತ್ತದೆ".

"ಆಹಾ, ಅದ್ಭುತ. ಅತ್ಯುತ್ತಮ ಸಲಹೆ" ಎಂದು ಹರಳಯ್ಯನವರು ಹರ್ಷಿಸಿದರು.

ಮರುದಿನವೆ ಹರಳಯ್ಯ ಕೊರೆದ ಬಲ ತೊಡೆ ಚರ್ಮ
ಹರನೆಂದು ಮಡದಿಯೆ ಎಡತೊಡೆಯ ತಾ ಕೊಯ್ದು
ಭರದಿ ಹದ ಮಾಡಿ ಒಣಗಿಸಿದ. ॥

ತಮ್ಮ ಬಲದೊಡೆಯ, ಮಡದಿಯ ಎಡತೊಡೆಯ ಚರ್ಮ ತೆಗೆದು ಒಣಗಿಸಿದ. ಅವು ಚಂದ ಕಾಣಲೆಂದು ಜರಿಯನ್ನು, ಪಚ್ಚೆ, ಮುತ್ತುಗಳನ್ನು ಹೆಣೆದನು. ವಿಶೇಷ ಸ್ಥಳದಲ್ಲಿ ರತ್ನದ ಹರಳನ್ನು ಇಟ್ಟರು. ಕೇವಲ ಕಲಾವಂತಿಕೆಯಷ್ಟೇ ಅಲ್ಲ ಸಮರ್ಪಣ ಮನೋಭಾವವೂ ಇದ್ದುದರಿಂದ ಆ ಚಮ್ಮಾವುಗೆಗಳು ಸೂರ್ಯ-ಚಂದ್ರರಂತೆ ಹೊಳೆಯುತ್ತಿದ್ದವು. ನೋಡಿ ನೋಡಿ ಭಕ್ತಿ ಪುಳಕಿತರಾಗಿ ಹರಳಯ್ಯನವರು ಹರ್ಷಿಸುತ್ತಿದ್ದರು.

ಒಂದು ರೇಷ್ಮೆ ಬಟ್ಟೆಯಲ್ಲಿ ಸುತ್ತಿ, ತಟ್ಟೆಯಲ್ಲಿಟ್ಟುಕೊಂಡು ತಲೆಯ ಮೇಲೆ ಹೊತ್ತು ಹರಳಯ್ಯನವರು, ಮಡದಿ ಕಲ್ಯಾಣಮ್ಮ ಮತ್ತು ಮಗ ಶೀಲವಂತನ ಜೊತೆ ಮಹಾಮನೆಯತ್ತ ಸಾಗಿದರು. ಮಹಾಮನೆಯಲ್ಲಿ ಶರಣರ ಸಂಭ್ರಮ.

ಕಿಕ್ಕಿರಿದ ಜನ ಬಂದು ಸಕ್ಕರೆಗೆ ಇರುವೆಗಳು

ಮುಕ್ಕಿದವ್ರೋ ವಚನ ಅಮೃತಕೆ । ಎಂಬಂತೆ
ಉಕ್ಕಿ ಮಹಾಮನೆಯು ಹೊರಸೂಸಿ ॥ ಹ.ಹಂ. ೨೦

ಅಂಥ ಜನ ಸಂದಣಿಯನ್ನು ದಾಟಿ ಒಳಹೋಗುವುದು ಹೇಗೆ ಎಂದು ಹರಳಯ್ಯನವರು ಚಿಂತಿತರಾಗಿರುವಾಗಲೇ ಧರ್ಮಪಿತ ಬಸವಣ್ಣನವರ ಹೃದಯ ಮಿಡಿಯಿತು. ಯಾರೋ ಕಾಯುತ್ತಿದ್ದಾರೆಂದು ತವಕದಿಂದ ಬಾಗಿಲ ಬಳಿ ಬಂದರು. ಆಗ ಹರಳಯ್ಯನವರು ಸಹರ್ಷದಿಂದ ನಮಿಸಿದರು.

ಕಾಣುತಲಿ ಹರಳನನು ಜಾಣನೊಪ್ಪಿದ ಬಸವ
ಪ್ರಾಣ ಬಂದಂತೆ ಬಿಗಿದಪ್ಪಿ । ಶರಣನಿಗೆ
ಮಾನದೊಳು ಮಾತನಾಡಿಸಿದ ॥ ಹ.ಹಂ ೨೩

ಹರಳಯ್ಯನವರು ಇನ್ನಷ್ಟು ಗಾಬರಿಗೊಂಡರು. ತಮ್ಮ ನೆರಳು ಸಹ ಸೋಂಕಬಾರದು ಎಂಬ ಸವರ್ಣೀಯರನ್ನಷ್ಟೇ ಕಂಡಿದ್ದರು. ತಟ್ಟನೆ ಬಸವಣ್ಣನವರ ಅಪ್ಪುಗೆಯಿಂದ ಬಿಡಿಸಿಕೊಳ್ಳಲು ಯತ್ನಿಸಿದರು.

ಮುಟ್ಟದಿರು ಬಸವೇಶ ಕೆಟ್ಟ ಹೊಲೆಯನು ನಾನು
ಬಟ್ಟ ಬಯಲಾಗಿ ಹೊಗಲೇ । ನಿಮ್ಮುಂದೆ
ಸುಟ್ಟು ಬೂದ್ಯಾಗಿ ಬೀಳುತಲಿ ॥ (ಹ. ಹಂ ೨೪)

ಅಯ್ಯೋ.... ಬಸವೇಶ ನನ್ನನಿಂತು ಮುಟ್ಟಬೇಡ. ನಾನು ಹೊಲೆಯನು. ನಿಮ್ಮ ಎದುರಿಗೆ ನಾನು ಸುಟ್ಟು ಬೂದಿಯಾಗುವುದು ಲೇಸು.

ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವುದೆ.
ಹೊಲೆಯ ಎಣಿಸಿದರೆ ತಿಳಿವುಂಟೆ । ಶರಣರಿಗೆ
ಹೊಲಬಳಿದು ಬೇರೆ ಕುಲವುಂಟೆ? (ಹ.ಹಂ. ೨೫)

ಹರಳಯ್ಯನವರ ಮಾತಿನಲ್ಲಿ ವ್ಯಕ್ತವಾದ ಕೀಳರಿಮೆಯಿಂದ ಬಸವಣ್ಣನವರು ಬಹು ನೊಂದುಕೊಂಡರು. ಹರಳಯ್ಯಾ, ಜಗತ್ತೆಲ್ಲವೂ ಹುಟ್ಟುವುದು ಹೊಲೆಯಲ್ಲೇ ವಿನಾ ತಲೆಯಲ್ಲಲ್ಲ. (ಇಲ್ಲಿ ಪರಮಾತ್ಮನಿಗೆ ತಲೆ, ಭುಜ, ತೊಡೆ, ಪಾದಗಳನ್ನು ಗುರುತಿಸಿ, ಕ್ರಮವಾಗಿ ಅವುಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ಹುಟ್ಟುತ್ತಾರೆ ಎಂಬ ನಂಬಿಕೆಯನ್ನು ಖಂಡಿಸಲಾಗಿದೆ.) ನಿನ್ನಂತಹವರಲ್ಲಿ ಕುಲವನ್ನು ತಿಳಿವು ಇಲ್ಲದವರಷ್ಟೇ ಹುಡುಕಬೇಕು. ಶರಣರು ಎಲ್ಲರೂ ಸತ್‌ಪಥಗಾಮಿಗಳು. ಶರಣರಾದ ಬಳಿಕ ಅವರಲ್ಲಿ ಯಾವ ಕುಲವೂ ಉಳಿದಿರದು.

ನೀತಿ ಮಂಟಪದೊಳಗೆ ಭೀತಿ ಶರಣರಿಗುಂಟೆ
ಮಾತಿನಲಿ ಮೊದಲು ನೂರೊಂದು । ಸ್ಥಲಗಳಿಗೆ
ಖ್ಯಾತಿ ನೀಯೆಂದ ಹರಳನಿಗೆ ॥ (ಹ.ಹಂ ೨೬)

"ಹರಳಯ್ಯ, ಅನುಭವ ಮಂಟಪವು ನೀತಿ ಮಂಟಪ; ಏಕೆಂದರೆ ಇಲ್ಲಿ ನೀತಿ-ಸಾಧನೆಗಳೇ ವ್ಯಕ್ತಿತ್ವವನ್ನು ಅಳೆಯುವ ಒರೆಗಲ್ಲು, ಇಂಥಲ್ಲಿ ನಿನ್ನಂತಹ ಶರಣ ಭೀತಿಪಡಬಾರದು. ನೂರೊಂದು ಸ್ಥಲಗಳ ಸಾಧಿಸಿದವನೇ ನಿಜ ಶರಣ. ಅಂಥ ಸಾಧನೆಯಲ್ಲಿ ನೀನೇ ಮುಂದು ಇರುವೆಯಲ್ಲವೆ?" ಎಂದು ಬಸವಣ್ಣನವರು ಹರಳಯ್ಯನನ್ನು ಒಳಗೆ ಕರೆದುಕೊಂಡು ಹೋಗುವರು.

ತಂದೆ ಬಸವನೆ ಕೇಳು ತಂದಿರುವೆನೀ ಜೋಡ
ಹೊಂದುವವು ನಿಮ್ಮ ಅಡಿಗಳಿಗೆ । ಸಲ್ಲಿಸಲು
ಎಂದು ಕೊಡ ಹೋದ ಬಸವನಿಗೆ ॥ (ಹ. ಹಂ ೨೭)

ಅಪ್ಪ ಬಸವೇಶಾ, ನೋಡು ಎಂಥ ಸುಂದರವಾದ ಜೋಡುಗಳಿವು. ನಿಮ್ಮ ಪಾದಗಳಿಗೆ ಚೆನ್ನಾಗಿ ಹೊಂದುವವು, ತೆಗೆದುಕೊಳ್ಳಿ. (ಬಹುಶಃ ಇವು ಮಾನವರ ಚರ್ಮದಿಂದ ಆಗಿರುವವು ಎಂದು ಊಹಿಸಿ, ಬಸವಣ್ಣನವರು ಕೇಳಿ ಆಘಾತಕ್ಕೊಳಗಾಗುವರು).

ಶಿವಕಳೆಯ ಈ ಜೋಡು ಜವನ ದಾಡೆಗಳಯ್ಯ
ಭವದೊಳಗೆ ಮೆಡುವ ಜನವುಂಟೆ । ಹರಳಯ್ಯ
ಶಿವನೊಪ್ಪೆನೆನ್ನ ಕ್ಷಮಿಸೆಂದ ॥ (ಹ.ಹಂ. ೨೮)

Digitalized by e-Sahithya Documentation Forum
Sponsored by Sarayu Foundation Trust

"ಶಿವತೇಜಸ್ಸಿನಿಂದ ಕೂಡಿರುವ ಈ ಚಮ್ಮಾವುಗೆಗಳು ಯಮನ ಕೋರೆಹಲ್ಲುಗಳಂತೆ. ನಿಮ್ಮಂತಹ ಶರಣರ ಪವಿತ್ರ ಚರ್ಮದಿಂದ ಮಾಡಿದ ಈ ಜೋಡುಗಳನ್ನು ಜಗತ್ತಿನಲ್ಲಿ ಮೆಡೆಬಲ್ಲ ಜನರು ಯಾರು ಇಲ್ಲ. ಹರಳಯ್ಯ, ಪರಮಾತ್ಮನಿಗೆ ಮಾತ್ರ ಮೀಸಲಾಗಬೇಕಾದವು ಇವು. ನೀನು ಕೊಟ್ಟ ವಸ್ತುಗಳನ್ನು ಸ್ವೀಕರಿಸಬಾರದೆಂಬ ಭಾವದಿಂದ ನಾನು ಹೇಳುತ್ತಿಲ್ಲ. ನೀನು ಘನಮಹಿಮ. ನಿನ್ನಂತಹವನ ಮೈಚರ್ಮವನ್ನು ಮೆಟ್ಟುವುದು ಉದ್ಧಟತನವಾದೀತು. ಆ ಉದ್ಧಟತನ ಮಾಡಲಾರೆ; ನನ್ನನ್ನು ಹೃತ್ಪೂರ್ವಕವಾಗಿ ಕ್ಷಮಿಸು" ಎಂದು ಆ ಚಮ್ಮಾವುಗೆಗಳನ್ನು ಕಣ್ಣಿಗೊತ್ತಿಕೊಂಡು, ತಲೆಯ ಮೇಲಿಟ್ಟುಕೊಂಡು ಭಾವಪರವಶರಾದರು.

ಹರಳ ಕೇಳೀ ನುಡಿಯ ಮರಳಿದನು ಮನೆ ಕಡೆಗೆ
ಶರಣೆಂದು ತಿರುಗಿ ಬಸವಂಗೆ । ಹಾದಿಯಲಿ
ತರುಬಿ ಕೇಳಿದನು ಮಧುವರಸ ॥ (ಹ. ಹಂ. ೨೯)

ಹರಳಯ್ಯ ಏನೂ ಹೇಳಲಾರದಾದ. ಬಸವಣ್ಣನವರಿಗೆ ವಂದಿಸಿ, ಮನೆಗೆ ಹೊರಟನು. ಆ ಚಮ್ಮಾವುಗೆಗಳನ್ನು ಭಕ್ತಿಯಿಂದ ಹೊತ್ತು ಬರುವಾಗ ದಾರಿಯಲ್ಲಿ ಮಧುವರಸನು ತಡೆದು ನಿಲ್ಲಿಸಿದನು.

ಏನು ಹರಳನೆ ಹೇಳು, ಏನು ಬಗಲೊಳು ಗಂಟು?
ಏನು ಎಲ್ಲಿಂದ ಬರವಾಯ್ತು । ಹೇಳೆನಗೆ
ಏನು ತೋರೆನಗೆ ಬಗೆ ಏಕೆ ॥

ಏನು ಹರಳಾ, ಬಗಲಲ್ಲಿ ಗಂಟನ್ನು ಇಟ್ಟುಕೊಂಡು ಎಲ್ಲಿಂದ ಬರುತ್ತಲಿರುವೆ. ಅದರಲ್ಲಿ ಇರುವುದೇನು ತೋರಿಸು.

ಜುಲುಮೆ ಮಾಡಲು ಬೇಡ ಮಲುವು ಜೀವಕೆ ನಿನಗೆ
ಹೊಲಬು ಹೇಳುವೆನು ಬೇಡೆಂದ । ಮಧುವರಸಾ
ಹೊಲಿದ ಜೋಡೆಂದ ಬಸವನಿಗೆ ॥ (ಹ. ಹಂ. ೩೧)

ಮಧುವರಸರೇ, ಒತ್ತಾಯ ಮಾಡಬೇಡಿರಿ, ಅದರಿಂದ ಜೀವಕ್ಕೆ ಬಾಧೆಯುಂಟಾಗುವುದು. ನಾನು ಬರುತ್ತಿರುವುದು ಅಪ್ಪ ಬಸವಣ್ಣನವರ ಮಹಾಮನೆಯಿಂದ. ಬಸವಣ್ಣನವರಿಗಾಗಿ ಈ ಜೋಡುಗಳನ್ನು ಒಯ್ದಿದ್ದೆ. ಅವರು ಒಂದು ಕಾರಣಕ್ಕಾಗಿ ನಿರಾಕರಿಸಿದರು.

ಬಡವ ಬಸವೇಶ್ವರನು ಕೊಡಲಾರ ಲೋಭದಲಿ
ಕೊಡುವೆ ನಾ ಬೆಲೆಯ ಬೇಡಿದುದ ತೋರಿಸೆಲೆ
ತಡಮಾಡದೆನಗೆ ಜೋಡುಗಳ ॥ (ಹ.ಹಂ. ೩೩)

ಬಹುಶಃ ಬಸವೇಶ್ವರನಿಗೆ ಬಡತನವಿರಬಹುದು ಅಥವಾ ಆತ ಲೋಭಿಯಾಗಿರಬೇಕು. ನಿನ್ನ ವಸ್ತುಗಳಿಗೆ ಸರಿಯಾದ ಬೆಲೆ ಕೊಟ್ಟಿರಲಿಕ್ಕಿಲ್ಲ. ನೀನು ಕೇಳಿದಷ್ಟು ಬೆಲೆಯನ್ನು ನಾನು ಕೊಟ್ಟರಾಯಿತಿಲ್ಲೊ? ಸಮಯವನ್ನು ಹಾಳುಮಾಡಬೇಡ ತೋರಿಸು.

ನೋಡಿ ಸೋಜಿಗವಾದ ಜೋಡ ತೋರಿಸಲಾತ
ಮೂಡಿ ಕಳೆ ಮುಖಕೆ ಮಧುವರಸ । ಒಂದ್ಹೆಜ್ಜೆ
ನೋಡಿ ಮೆಡಲಿಕ್ಕೆ ಕಾಲಿಟ್ಟ ॥ (ಹ.ಹಂ. ೩೪)

ಹರಳಯ್ಯ ಆ ಜೋಡುಗಳನ್ನು ತೋರಿಸುತ್ತಲೇ ಮಧುವರಸನು ಆಶ್ಚರ್ಯದಿಂದ ಮೂಕನಾದ. ಮುಖವು ಆನಂದದಿಂದ ಮಿನುಗಿತು. ಅಳತೆಯು ಹೇಗಿದೆಯೋ ಎಂದು ನೋಡಲು ಕಾಲುಗಳನ್ನು ಇಟ್ಟ.

ಹರಳ ಮಾಡಿದ ಜೋಡು ನರಪಾಪಿ ಮಧುವರಸ
ಜರಿದು ಶರಣನಿಗೆ ತಾ ಮೆಡಲು । ಮೈ ತುಂಬ
ಉರಿತಾಪವೆದ್ದು ಕೂಗಾಡಿ ॥ (ಹ.ಹಂ. ೩೫)

ಶರಣ ಹರಳಯ್ಯನಂತಹ ಮಹಾತ್ಮ ಮಾಡಿದ ಆ ಪವಿತ್ರ ಚಮ್ಮಾವುಗೆಗಳನ್ನು ಬೇಡವೆಂದರೂ ಕೇಳದೆ. ಶರಣರನ್ನು ಜರಿಯುತ್ತ ಅವಹೇಳನ ಮಾಡುತ್ತ ಮೆಟ್ಟಲು, ಮೈ ತುಂಬ ಉರಿತಾಪ ಎದ್ದು ಕೂಗಾಡಲು ಆರಂಭಿಸಿದನು.

ಸುಣ್ಣ ಕುದಿಗುಣಿಯೊಳಗೆ ಹಣ್ಣಾಗಿ ಬೆಂದಂತೆ ।
ಎಣ್ಣೆ ಬಲು ಕಾಸಿ ಕಣ್ಣೊಳಗೆ ಸುರಿದಂತೆ ।
ಡೊಣ್ಣೆ ಮುಳ್ಳುಗಳು ನೆಟ್ಟಂತೆ ॥ (ಹ.ಹಂ. ೩೭)

ಒಂದು ಗುಂಡಿಯೊಳಕ್ಕೆ ಹೊಸ ಸುಣ್ಣವನ್ನು ಹಾಕಿ, ನೀರು ಹಾಕಿದರೆ ಅದು ಕೊತಕೊತನೆ ಕುದಿಯಲು ಆರಂಭಿಸುತ್ತದೆ. ಅದರಲ್ಲಿ ಜಾರಿ ಬಿದ್ದು ಮನುಷ್ಯನು ಬೆಂದು ಹೋದಂತೆ, ಎಣ್ಣೆಯನ್ನು ಕಾಸಿ ಕಣ್ಣಿನಲ್ಲಿ ಸುರಿದರೆ ಯಾವ ಸಂಕಟವಾದೀತೋ ಹಾಗೆ, ಡೊಣ್ಣೆ ಮುಳ್ಳುಗಳು ದೇಹಕ್ಕೆ ಚುಚ್ಚಿದರೆ ಹೇಗೆ ನೋವಾದೀತೋ ಅಷ್ಟು ನೋವು ಮಧುವರಸನಿಗೆ ಆಗತೊಡಗಿತು.

ಉರಿಯುತಿದೆ ಮೈತುಂಬ ಪರಿಹರಿಪರಾರುಂಟೇ?
ಹರಳ ಕೈ ಮುಗಿವೆ ಹೇಳೆನಗೆ । ಮಧುವರಸ
ಹರಭಕ್ತ ಬಸವ ಮಂತ್ರೆಂದ ॥ (ಹ.ಹಂ. ೩೭)

"ಮೈಯೆಲ್ಲಾ ಉರಿ-ತಾಪ, ತಾಳಲಾರೆನು. ಹರಳಾ, ಕೈ ಮುಗಿದು ಕೇಳುವೆ. ಈ ಬಾಧೆಯನ್ನು ಪರಿಹರಿಸುವವರು ಯಾರಾದರು ಉಂಟೆ"? ಎಂದು ಮಧುವರಸ ಕೇಳಿದನು. ಗುರು ಬಸವ ಮಂತ್ರ ಪಠಣವೇ ಪರಿಹಾರ ಎಂದು ಹರಳಯ್ಯನು ಹೇಳುವನು.

ತೆರಳಿದನು ಮನೆ ಕಡೆಗೆ ಹರಳ ಶಿವಶಿವನೆಂದು
ನರಳುತಲಿ ಬಿದ್ದ ಮಧುವರಸ । ಮನೆಯೊಳಗೆ
ಕರಗಿತಾ ಕರುಳು ತಾಯಿಯದು ॥ (ಹ. ಹಂ. ೩೯)

ಹರಳಯ್ಯನು ಶಿವಧ್ಯಾನವನ್ನು ಮಾಡುತ್ತ ಮನೆ ಕಡೆಗೆ ಹೊರಟ, ಮಧುವರಸನು ನರಳುತ್ತಾ ಮನೆಗೆ ಬಂದು, ಒದ್ದಾಡತೊಡಗಿದ. ಆಗ ಆತನ ತಾಯಿಯ ಕರುಳು ಮರುಗಿ, ಕರಗಿತು.

ಹರಳನಾಡಿದ ಮಾತು ಕರುಣೆ ತಾಯಿಯು ಕೇಳಿ
ಥರಥರನೆ ಅಂಜಿ ನಡೆತಂದು ನಮಿಸಿದಳು
ಹರಭಕ್ತ ಬಸವ ದಯೆ ನೀಡು ॥ (ಹ.ಹಂ. ೩೯)

ಮಧುವರಸನು ಹರಳಯ್ಯನು ಹೇಳಿದ ಮಾತನ್ನು ತಾಯಿಗೆ ತಿಳಿಸಿದ. ಆಕೆ ಆಗಿರುವ ಪ್ರಮಾದವನ್ನು ಗಣಿಸಿ, ಥರಥರನೆ ಅಂಜಿ ನಡುಗಿದಳು. ಬಸವಣ್ಣನವರ ಬಳಿಗೆ ಬಂದು ನಮಿಸಿ " ಬಸವಣ್ಣಾ, ದಯೆ ತೋರು" ಎಂದಳು.

ಸೆರಗೊಡ್ಡಿ ಬೇಡುವೆನು ಕರುಣನಿಧಿ ಸಲಹಯ್ಯ
ತರುಣ ಮಧುವರಸ ಸಾಯುವನು । ಬಸವೇಶ
ಹರಸೆಂದು ತಾಯಿ ಕೈಮುಗಿದು ॥ (ಹ.ಹಂ. ೪೧)

ಕರುಣನಿಧಿ ಬಸವೇಶಾ ಸಲಹು, ತರುಣನಾದ ಮಧುವರಸನು ಸಾಯುತ್ತಾನೆ. ನೀನು ಹರಸಿ, ಆಶೀರ್ವದಿಸಿ ಆತನನ್ನು ರಕ್ಷಿಸು ಎಂದಳು.

ನೀರ ಮಿಂದಲು ಹೇಳು ಹರಳನ ಬಾನಿಯಿಂ
ಮೀರಿ ಹರನಾಮ ಭಜಿಸಿದರೆ । ಈ ಪಾಪ
ತೀರಿ ಕುಂದುವದು ಉರಿತಾಪ ॥ (ಹ.ಹಂ. ೪೧)

"ಶರಣ ಹರಳಯ್ಯನು ಯಾವ ಕರಿಯಬಾನೆಯಲ್ಲಿ ಪವಿತ್ರ ಚಮ್ಮಾವುಗೆ ಮಾಡುವಾಗ ಅವುಗಳನ್ನು ಎದ್ದಿದ್ದನೋ ಆ ನೀರಿನಿಂದ ಸ್ನಾನಮಾಡಬೇಕು". ಎಂದು ಬಸವಣ್ಣನವರು ಹೇಳಿದರು. ಚರ್ಮವನ್ನು ಹದಮಾಡಲು ಒಂದು ಗುಂಡಿಯಲ್ಲಿ ನೆನೆ ಹಾಕುತ್ತಾರೆ. ಆ ನೀರನ್ನು ತಂದು ಸ್ನಾನಮಾಡಬೇಕು. ಎಂದು ಹೇಳಿದರು ಎಂದೂ ಪ್ರತೀತಿ ಇದೆ.

ಬಸವ ಕಲ್ಯಾಣದ ಹತ್ತಿರ(ಆಗಿನ ಕಾಲದಲ್ಲಿ ನಗರದ ಒಂದು ಭಾಗವೇ ಆಗಿದ್ದ) ಹದ್ದಾರಿಯ ಬದಿಗೆ ಉಮಾಪುರ ಎಂಬ ಗ್ರಾಮವಿದೆ. ಅಲ್ಲಿ ಹರಳಯ್ಯನ ಮಂಟಪವಿದೆ. ಅದು ಹರಳಯ್ಯನವರಿಗೆ ಸೇರಿತ್ತು ಎನ್ನಲಾದ ಜಮೀನಿನಲ್ಲಿ ಇದೆ. ಈಗ ಊರಿನ ಗೌಡರ ಒಡೆತನದಲ್ಲಿದೆ. ಅದರ ಮಗ್ಗುಲಲ್ಲಿ ಎರಡು ಒರತೆಗಳಿವೆ. ಒಂದು ಕುಡಿಯುವ ನೀರಿಗಾಗಿ. ಇನ್ನೊಂದು ಚರ್ಮ ಹದಮಾಡಲಿಕ್ಕಾಗಿ ಇದ್ದುದು ಎಂದು ಊಹಿಸಲು ಸಾಧ್ಯವಿದೆ. ಜನಪದ ತ್ರಿಪದಿ ಹೀಗೆ ಹೇಳುತ್ತದೆ.

Digitalized by e-Sahithya Documentation Forum
Sponsored by Sarayu Foundation Trust

ಕಾರಜೋಳದ ಮುಂದೆ ಯಾರು ನೆಲೆಸಿದರಯ್ಯಾ?
ಮಾರಹರ ಭಕ್ತ ಹರಳಯ್ಯ । ತೋಡಿರುವ
ನೀರೊರತಿ ಸಾಕ್ಷಿ ಯುಗಯುಗಕೆ ॥ (ಹ.ಹಂ. ೨)

(ಈಗಿನ ಉಮಾಪುರಕ್ಕೆ ಆಗ ಕಾರಜೋಳ ಎಂಬ ಹೆಸರಿದ್ದರೂ ಇದ್ದಿರಬಹುದು.) ಕಾರಜೋಳ ಎಂಬ ಊರಿನ ಮುಂದೆ ಯಾರು ವಾಸವಾಗಿದ್ದರು? ಮಾರಹರ ಭಕ್ತ ಹರಳಯ್ಯನೇ ಅಲ್ಲಿದ್ದವನು. ಆತ ತೋಡಿರುವ ನೀರಿನ ಒರತೆಯೇ ಯುಗಯುಗಕ್ಕೂ ಸಾಕ್ಷಿಯಾಗಿ ನಿಂತಿದೆ. [ಬಿಜಾಪುರ ಜಿಲ್ಲೆಯಲ್ಲಿ ಕಾರಜೋಳ ಎಂಬ ಊರಿದ್ದ, ಹರಳಯ್ಯನವರು ಮೂಲತಃ ಆ ಊರಿನವರು. ನಂತರ ಕಲ್ಯಾಣಕ್ಕೆ ಬಂದರು ಎಂಬ ಪ್ರತೀತಿ ಇದೆ.]

ಹರಳ ಬಳಸಿದ ನೀರು ಹರಿದು ಬಿಚ್ಚಲಗುಂಡಿ
ಮೆರೆಯುವುದು ಇಂದು ಕಲ್ಯಾಣ ಕೇರಿಯೊಳು
ಹರಳಯ್ಯ ಗುಂಡಿ ಶಿವತೀರ್ಥ ॥ (ಹ.ಹಂ. ೪೬)

ಹರಳಯ್ಯನವರು ಬಳಸುತ್ತಿದ್ದ ನೀರು ಹೋಗಿ ಹರಿದು ನಿಂತಿತ್ತು, ಕಲ್ಯಾಣ ಕೇರಿಯೊಳು ಶಿವತೀರ್ಥದಂತಿತು.

ಶರಣ ಹರಳನ ಗುಂಡಿ ಮರಣದಲಿ ಅಮೃತವು
ಅರಿತು ಮಾದೇವಿ ಶಿವನೆಂದು । ಮನದೊಳಗೆ
ಹೊರತೇನು ಲೋಕ ಶರಣರಿಗೆ ॥ (ಹ.ಹಂ.೪೭)

ಮಧುವರಸರ ಮನೆಯಲ್ಲಿ ಕೆಲಸಕ್ಕಿದ್ದ ಆಳು, ಮಾದೇವಿ ಶಿವಭಕ್ತೆ ; ಶಿವಶರಣರ ಬಗ್ಗೆ ಭಕ್ತಿ ಅಭಿಮಾನ ಉಳ್ಳವಳು.

ಸುತ್ತ ನೋಡುತ ತಿರುಗಿ ಮತ್ತೆ ಅಗ್ಗಣಿ ತುಂಬಿ
ಚಿತ್ತದಲಿ ನಡುಗಿ ಹೆಣ್ಣದೆಯ । ಮಾದೇವಿ
ಹೊತ್ತೊಯ್ದು ಹರವಿ ತುಂಬಿದಳು ॥ (ಹ.ಹಂ.೪೮)

ಯಾರಾದರೂ ಈ ಕೇರಿಯಲ್ಲಿ ಬಂದುದನ್ನು ನೋಡಿದರೋ ಎಂದು ಹೆದರುತ್ತ, ಹೆಣ್ಣದೆಯ ಮಾದೇವಿ ಸುತ್ತ ಮುತ್ತ ನೋಡುತ್ತ ನೀರನ್ನು ತುಂಬಿಕೊಂಡು ಹೋಗಿ ಮನೆಯ ಹಂಡೆಯಲ್ಲಿ ತುಂಬಿಸಿದಳು.

ಹರಳ ಬಳಸಿದ ನೀರ ನೆರೆನಿಂತ ಮಡುವಿಂದ
ಮರೆತು ತಂದೆಂದು ಎರೆವಾಗ । ಮನದೊಳಗೆ
ಹರನ ಮಾದೇವಿ ಭಜಿಸಿದಳು. ॥ (ಹ. ಹಂ. ೪೯)

ಹರಳಯ್ಯನವರು ಬಳಸಿ ಮಡುವಾಗಿ ನಿಂತಿದ್ದ ಸ್ಥಳದಿಂದ ನೀರನ್ನು ತಂದು ಬಿಟ್ಟೆನಲ್ಲ ಎಂದು ಅವಳ ಮನಸ್ಸು ಚಟಪಟಿಸುತ್ತಿತ್ತು. ಏನೂ ಭಯದೆ ಇರಲಿ ಎಂದು ದೇವರನ್ನು ಮನದಲ್ಲೇ ಪ್ರಾರ್ಥಿಸುತ್ತಿದ್ದಳು.

ಕಳೆ ಬಂತು ಮೈತುಂಬ ಮಳೆಯಾದ ಬೆಳೆಯಂತೆ
ಅಳಿಯಲು ಉರಿತಾಪ ಮಧುವರಸ । ಕೇಳಿದನು
ಅಳುಕದಲೆ ಹೇಳು ಮಾದೇವಿ ॥ (ಹ.ಹಂ.೫೦)

ಸ್ನಾನಮಾಡುತ್ತಲೇ ಮಧುವರಸನ ಮೈಯಲ್ಲಿ ಕಾಂತಿಯುಂಟಾಯಿತು. ಮಳೆ ಬಂದಾಗ ಬೆಳೆಯು ಕಳೆ ಏರುವಂತೆ. ಉರಿತಾಪ ಅಳಿಯಿತು. ಆಶ್ಚರ್ಯಗೊಂಡ ಮಧುವರಸ ಮಹಾದೇವಿಯನ್ನು ಕರೆದು, 'ಅಂಜದೆ ಅಳುಕದೆ ಹೇಳು; ನೀರನ್ನು ಎಲ್ಲಿಂದ ತಂದೆ ಎಂಬುದನ್ನು' ಎಂದ.

ಇಂದು ತಂದಿರೊ ನೀರು ಮಿಂದಲಳಿಯಿತು ತಾಪ
ತಂದ ಕೆರೆಬಾವಿ ಹೇಳೆನಗೆ । ಹೇಳಿದಳು
ತಂದೆ ಹರಳಯ್ಯ ಗುಂಡಿಯಲಿ ॥ (ಹ.ಹಂ.೫೧)

"ಇವತ್ತು ತಂದ ನೀರಿನಿಂದ ಸ್ನಾನ ಮಾಡುತ್ತಲೇ ನನ್ನ ತಾಪ ಆರಿ ಹೋಯಿತು. ಯಾವ ಕೆರೆಬಾವಿಯಿಂದ ನೀರನ್ನು ತಂದಿರುವೆ ತಡಮಾಡದೆ ಹೇಳು." ಎಂದಾಗ ಹರಳಯ್ಯನ ಗುಂಡಿಯಿಂದ ತಂದೆ ಎಂದು ಸೇವಕಿ ಹೇಳುತ್ತಾಳೆ.

ಏನ ಹೇಳುವೆ ಶರಣೆ ಗ್ನಾನ ತಪ್ಪಿತೆ ನಿನಗೆ
ಕಾಣುದಕೆ ಹರಳ ಹೊಲೆಯನವ । ಅವ ಮಿಂದ
ಘಾಣ ನೀರಿಂದೆ ಗುಣವಾಯ್ತೆ? (ಹ.ಹಂ. ೫೨)

"ಎಂತಹ ಮಾತುಗಳನ್ನು ಆಡುತ್ತಿರುವೆ. ಆತನು ಹೊಲೆಯರವನು. ಆತ ಮಿಂದು, ಹರಿದ ಕೊಳಕು ನೀರಿನಿಂದ ಗುಣವಾಯಿತೆ?" (ಎಂಥ ಸೋಜಿಗದ ಸಂಗತಿ)

ಎಂಥ ಶರಣನು ಹರನೆ ಎಂಥ ಭಕ್ತನು ಹರಳ
ಎಂಥ ಶಿವಕುಲವು ಜಗದೊಳಗೆ । ಮಾದೇವಿ
ಅಂಥ ಶಿವಕುಲಕೆ ಸೇರುವೆನು ॥ (ಹ. ಹಂ. ೫೩)

ಪರಮಾತ್ಮಾ,ಹರಳಯ್ಯನು ಎಂಥಾ ಶರಣ, ಎಂಥ ಭಕ್ತನು? ಜಗತ್ತಿನಲ್ಲಿ ಎಷ್ಟು ಮಹತ್ವಪೂರ್ಣವಾದುದು ಈ ಶಿವಕುಲ, ಮಾದೇವಿ ನಾನೂ ಸಹ ಅಂಥ ಶಿವಕುಲವನ್ನು ಸೇರಿಕೊಳ್ಳುವೆನು.

ಶಿವಭಕ್ತಿ ಶಿವಪೂಜೆ ಭವತಾಪ ಕಳೆಯುವದು
ಸವೆಸಲೇಬೇಕು ಈ ದೇಹ । ಈ ಭವಿಗೆ
ಶಿವದೀಕ್ಷೆ ಈಯೋ ಹರಳಯ್ಯ ॥ (ಹ.ಹಂ. ೫೪)

"ಶಿವನಲ್ಲಿ ಅನನ್ಯವಾದ ಭಕ್ತಿ, ಶಿವನ ನಿರಂತರ ಪೂಜೆ ಭವತಾಪವನ್ನು ಕಳೆಯುತ್ತದೆ. ಅಂತಹ ಪವಿತ್ರ ಕೃತಿಗಳಲ್ಲಿ ಈ ದೇಹವನ್ನು ಸವೆಸಲೇಬೇಕಾಗುತದೆ. ಆದ್ದರಿಂದ ಈ ಭವಿಗೆ ಶಿವದೀಕ್ಷೆ ನೀಡಿ ಉದ್ಧರಿಸು ಹರಳಯ್ಯ"ಎಂದು ಮಧುವರಸನು ಬೇಡಿ ಕೊಳ್ಳುತ್ತಾನೆ. ಈ ಮಾತು ಹರಳಯ್ಯನಿಗೆ ಆಶ್ಚರ್ಯವನ್ನು ಉಂಟು ಮಾಡಿರಲೂ ಸಾಕು.

ಎನ್ನುತಲಿ ಮಧುವರಸೆ ಎನ್ನುತಾ ರಾಗದಲಿ
ಭಿನ್ನ ಭೇದಳಿದು ನಡೆತಂದು ಮಗಳನ್ನು
ನಿನ್ನ ಮಗ ವರಗೆ ಮಗಳೀವೆ ॥ (ಹ.ಹಂ ೫೫)

ಹೀಗೆ ಮಧುವರಸ ಪ್ರೀತಿಯಿಂದ ನುಡಿದು, "ಪೂರ್ವಾಶ್ರಮದ ಜಾತಿಗಳು ಏನೇ ಇರಲಿ, ಎಲ್ಲ ಭೇದಗಳನ್ನು ಮರೆತು ನಾವು ಪರಸ್ಪರ ಬೀಗತನ ಮಾಡೋಣ. ನಿನ್ನ ಮಗನಿಗೆ ನನ್ನ ಮಗಳನ್ನು ಕೊಡುವೆ". ಈಗ ಹರಳಯ್ಯ ನಿಜಕ್ಕೂ ದಿಗ್ಭ್ರಾಂತನಾಗಿರಲೂ ಸಾಕು. ಎಂತಹ ವಿಚಿತ್ರ ಬದಲಾವಣೆ ಮಧುವರಸರಲ್ಲಿ?! "ಅಯ್ಯೋ, ಮಧುವರಸರೇ ಎಂತಹ ಆಲೋಚನೆ ನಿಮ್ಮದು. ಇದಕ್ಕೆ ವೇದಶಾಸ್ತ್ರಗಳ ಅನುಮತಿ ದೊರಕೀತೆ? ನೀವು ಹಾರುವರು. ನಿಮ್ಮ ಜಾತಿ ಬಾಂಧವರು ಏನು ಅಂದಾರು?!" ಎಂದಿರಲೂ ಸಾಕು.

ಶಿವಲಿಂಗ ನೆನಸಿದರೆ ಶಿವಪದವೆ ದೊರಕುವುದು
ಭವದೊಳಗೆ ನೋಡು ವೇದಗಳು । ಹಾರುವರು
ರವಿಕೆ ಬಿಗಿದುಟ್ಟ ಗೊಂಬಿಗಳು ॥ (ಮೇ. ಕೇ. ೨೩)

ಯಾರಾದರೇನು ಧರ್ಮ ಸಂಸ್ಕಾರ ಹೊಂದಿದ ಬಳಿಕ ಎಲ್ಲರೂ ಸಮಾನರು. ಶಿವಲಿಂಗವನ್ನೊಲಿದು ಧರಿಸಿ ಪೂಜಿಸಿದರೆ ಎಲ್ಲರಿಗೂ ಶಿವಪದ ಪ್ರಾಪ್ತಿ. ಧರ್ಮಶಾಸ್ತ್ರಗಳನ್ನು ಅತಿಯಾಗಿ ನಂಬಿ ಬಹಳ ಪರಿಶ್ರಮಕ್ಕೆ ಒಳಗಾಗಿರುವ ಹಾರುವರು ವೇದಗಳು ವೆನ್ನುವ ಬಿಗಿ ರವಿಕೆಗಳನ್ನು ತೊಟ್ಟ ಗೊಂಬೆಗಳಂತೆ ಇದ್ದಾರೆ. (ಗೊಂಬೆಗಳು ಎಂಬ ಪದ ಯಾಂತ್ರಿಕವಾಗಿ, ಅನುಸರಿಸುವವರು ಎಂಬುದನ್ನು ಹೇಳಿದರೆ, 'ರವಿಕೆ ಬಿಗಿದುಟ್ಟ' ಎಂಬುದು ಶಾಸ್ತ್ರಗಳ ಬಂಧನದಲ್ಲಿ ಒದ್ದಾಡುತಿದ್ದಾರೆ ಎಂಬುದನ್ನು ಸೂಚಿಸುತ್ತದೆ.)

ಅಂಗದಲ್ಲಿ ಲಿಂಗವನು ಲಿಂಗಿಗಳೆ ಧರಿಸಿದರು
ಬಂದು ಮಧುವರಸ ಹೊನ್ನನಿಗೆ । ಮಗಳಿತ್ತು
ಹಂದರದ ನಡುವೆ ಬೀಗಾದ ॥ (ಹ.ಹಂ. ೫೬)

ತಂದೆ-ಮಗಳು ಲಿಂಗದೀಕ್ಷೆ ಹೊಂದಿ ಲಿಂಗಾಂಗಿಗಳಾದರು. ಮಧುವರಸ ಹರಳಯ್ಯನ ಮಗ ಹೊನ್ನನಿಗೆ ಮಗಳನ್ನು ಕೊಟ್ಟು ಮದುವೆ ಮಾಡಿದ. ಸುಂದರ ಹಂದರದ ಕೆಳಗೆ ಹರಳಯ್ಯ ಮಧುವರಸರು ಬೀಗರಾದರು.

ಹಾರುವರ ಮಧುವರಸ ಊರ ಮಾತನು ಮೀರಿ

Digitalized by e-Sahithya Documentation Forum
Sponsored by Sarayu Foundation Trust

ಧಾರೆ ಎರೆದಿತ್ತು ಮಗಳನ್ನು । ಬೀಗಾದ
ಮಾರಹರ ಭಕ್ತ ಹರಳನಿಗೆ ॥ (ಕ.ಬ. ೩೭)

ತನ್ನ ಕುಲಜಾತಿ ಬಾಂಧವರು, ಊರಿನವರುಗಳ ಮಾತನ್ನು ಮೀರಿ ಶಿವಶರಣನಾದ ಹರಳಯ್ಯನ ಮಗನಿಗೆ ತನ್ನ ಮಗಳನ್ನು ಕೊಟ್ಟು ಮಧುವರಸನು ಮದುವೆ ಮಾಡಿಬಿಟ್ಟನು.

ಹಾರುವರ, ಕುಲ ಹೊಲೆಯ ಬೇರನ್ನೆ ಕಿತ್ತೊಗೆದ
ಸಾರಿದನು ಬಸವ ಬೆಂಗುಡಿಗ । ಶರಣರಿಗೆ
ಧೀರ ಕಾಯಕವೇ ಕುಲವಾತು ॥ (ಕ.ಬ. ೩೮)

ಹಾರುವ-ಅಂತ್ಯಜ, ಬ್ರಾಹ್ಮಣ-ಹೊಲೆಯ ಈ ಭ್ರಾಂತಿಯ ಬೇರನ್ನು ಕಿತ್ತೊಗೆದು ಕ್ರಾಂತಿ ಪುರುಷ ಬಸವಣ್ಣ ಶರಣರ ಕುಲವೆಲ್ಲ ಒಂದೇ ಕುಲ ಎಂದು ಘೋಷಿಸಿ, ಈ ಸಮತೆಯ ಕಾರ್ಯಕ್ಕೆ "ಬೆಂಗುಡಿಗ" ರಾಗಿ ಬೆನ್ನೆಲುಬಾಗಿ ನಿಂತಿದ್ದರು.

ಹಿರಿ ಕುಲದ ಮಧುವರಸ ಕಿರಿಕುಲಕೆ ಬೀಗಾದ
ಸರಿ ಏನು ಪಾಪ ಮಾಡಿದನು ? ಕೊಂಡಿಗಳು
ಜರಿದು ಅರಸನಿಗೆ ದೂರಿದರು ॥ (ಹ.ಹಂ.೫೭)

ಉತ್ತಮ ಕುಲದ ಮಧುವರಸ ಕೀಳು ಕುಲದ ಹರಳಯ್ಯನಿಗೆ ಬೀಗನಾದ. ಇದೇನು ಪಾಪವೇ? ಇಬ್ಬರೂ ಸಮಾನ ಧರ್ಮೀಯರು. ಆದರೆ ಚಾಡಿಕೋರರು ಇದನ್ನು ಬಹುದೊಡ್ಡದಾಗಿ ಮಾಡಿ ಅರಸನಿಗೆ ಚಾಡಿ ಹೇಳಿ, ತಲೆ ಕೆಡಿಸಿದರು.

ಕೊಂಡಿಗಳು ಹಾರುವರು ಮಂಡಿಗೆಯ ಉಣ್ಣುದಕೆ
ಕಂಡ ಕಂಡಲ್ಲಿ ಕುದಿಮಾತ । ನಾಡಿದರು
ಹೆಂಡ ಕುಡಿದಂತೆ ಪಿಸುಣರಿಗೆ ॥ (ಕ.ಬ. ೨೯)

ಚಾಡಿಕೋರರು, ಮಡಿವಂತ ಬ್ರಾಹ್ಮಣರು ಮುಂತಾದವರಿಗೆ ಮಾತನಾಡಲಿಕ್ಕೆ ಒಂದು ಆಹಾರ ಸಿಕ್ಕಿತು. ಕಂಡಕಂಡಲ್ಲಿ ಈ ಕ್ರಾಂತಿಕಾರಿ ವಿವಾಹವನ್ನು ಜರಿದರು. ಕುದಿಮಾತನ್ನಾಡಿದರು; ಜನರನ್ನು ಪ್ರಚೋದಿಸಲು ಯತ್ನಿಸಿದರು.

ಭಂಡ ಕೊಂಡೆಯ ಮಾತ ಹುಂಡ ಬಿಜ್ಜಳ ಕೇಳಿ
ಕೊಂಡನರಮನೆಗೆ ಶಿವಸುರಿಯ । ಬೇಡೆಂದು
ದಂಡೇಶ ಬಸವ ತಿಳಿ ಹೇಳಿ ॥ (ಕ.ಬ.೪೦)

ಮಡಿವಂತರು, ಮತಾಂಧರೂ ಆದ ಜನರ ಮಾತಿಗೆ ಕಿವಿ ಕೊಟ್ಟ ಬಿಜ್ಜಳನು ಶಿವನ ಉರಿಯನ್ನು ಬರಮಾಡಿಕೊಳ್ಳಲು ಸಿದ್ಧನಾದ. ಆಗ ಬಸವಣ್ಣನವರು ಹಿತೈಷಿಗಳಾಗಿ ಬುದ್ಧಿ ಹೇಳಿದರು.

ಶಿವನಕಿಂತಲೂ ಹೆಚ್ಚು ಶಿವಶರಣರೀ ಜಗಕೆ
ಶಿವಲೋಕ ಮೆಚ್ಚಿ ಹಾಡುವುದು । ಬಿಜ್ಜಳನೆ
ದವಸ ಕಾಯಕದ ಬೆಳೆ ಬಂದು ॥ (ಕ.ಬ.೪೧)

"ಬಿಜ್ಜಳ ಮಹಾರಾಜಾ, ದೇವನಿಗಿಂತಲೂ ಅವನ ಶರಣರೇ ಮಿಗಿಲು, ನೋಡು ಪ್ರಾಮಾಣಿಕ ಕಾಯಕ ಜೀವಿಗಳಾಗಿ ಶರಣರು ಎಂಥ ಸಂವೃದ್ಧಿ ಸಾಧಿಸಿ, ನಾಡನ್ನು ಮುಂದೆ ತಂದಿದ್ದಾರೆ......" ಎಂದು ಶರಣರ ಹಿರಿಮೆಯನ್ನು ಮನದಟ್ಟು ಮಾಡಿಕೊಡಲು ಬಸವಣ್ಣನವರು ಪ್ರಯತ್ನಿಸಿದರು.

ಗದ್ದಲಕೆ ಕಲ್ಯಾಣ ಸದ್ದೆದ್ದು ಜಲ್ಲೆಂದು
ಎದ್ದು ಓಡಾಡಿ ಜನಬಿದ್ದು । ಹೌಹಾರಿ
ದದ್ದರಿಸಿ ಲೋಕ ಗಜಿಬಿಜಿಗೆ ॥ (ಕ.ಬ. ೪೨)

ಗೊಂದಲವು ಸೃಷ್ಟಿಯಾಯಿತು. ಮಡಿವಂತ ಜಾತಿವಾದಿಗಳು ಜನಸಾಮಾನ್ಯರನ್ನು ಪ್ರಚೋದಿಸಿದರು. ಅತ್ತ ಬಿಜ್ಜಳನಿಗೆ ಇದ್ದದ್ದು ಇಲ್ಲದ್ದು ಹೇಳಿ, ಗಲಿಬಿಲಿಗೆ ಒಳಗು ಮಾಡಿದರು.

ಹರಳ ಮಧುವರಸನಿಗೆ ಮರುಳು ಮಾಡಿದನೆಂದು
ಗರಳ ಸಿಟ್ಟಿನಲಿ ಹಾರುವರು । ಬಿಜ್ಜಳಗೆ

ಕೆರಳಿ ಚಾಡಿಯನು ಹೇಳಿದರು ॥ (ಹ.ಹಂ.೫೮)

"ಹರಳನು ಬ್ರಾಹ್ಮಣ ಮಧುವರಸನಿಗೆ ಏನೋ ಮರುಳು ಮಾಡಿರಬೇಕು ; ಇಲ್ಲವಾದರೆ ಅದು ಹೇಗೆ ಹೊಲೆಯನಿಗೆ ಮಗಳನ್ನು ಕೊಡುವನು?" ಎಂದು ವಿಷ ತುಂಬಿದ ದನಿಯಿಂದ ಬಿಜ್ಜಳನಿಗೆ ಚಾಡಿ ಹೇಳಿದರು.

ಕೂಡಿಸಿದ ಮಂಟಪವ ಹಾಡಿಸಿದ ಶಿವಮತವ
ನಾಡ ಶರಣರಿಗೆ ತಿಳಿಸಿದನು । ಬಸವಯ್ಯ
ಹೂಡುವರು ಕದನ ವಾದಿಗಳು ॥ (ಹ.ಹಂ.೬೦)

ಗುರು ಬಸವಣ್ಣನವರು ಒಂದು ಅವಸರದ ಸಭೆ ಕರೆದರು. ಶರಣ ಬಂಧುಗಳಿಗೆ ತಿಳಿಸಿದರು. ಕದನ ಕುತೂಹಲಿಗಳಾದ ಮತಾಂಧರು ವಿನಾ ಕಾರಣ ಹೋರಾಟಕ್ಕೆ ನಿಲ್ಲಬಹುದು ಎಂದು ಹೇಳಿದರು.

ಶಿವಯೋಗಿ ಮಗ ಬಾರೊ ಶಿವಪುತ್ರ ಚನಬಸವ
ಶಿವನಾಣೆ ಚೆನ್ನಬಸವಣ್ಣ । ಕಲ್ಯಾಣ
ಶಿವಗಳಸ ಬಾರೋ ಮಂಟಪಕೆ ॥ (ಕ.ಬ. ೪೪)

ಶಿವಯೋಗಿಯಾಗಿರುವ ಶಿವನ ಶಿಶು ಚನ್ನ ಬಸವಣ್ಣಾ, ಬಾ ಇಲ್ಲಿ ನೀನೇ ಮಂಟಪಕೆ ಕಳಸದಂತಿರುವವನು.

ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚನ್ನಬಸವ ಶರಣರಿಗೆ । ಕಂಟಕದ
ಹುರಿಯಾಳು ಕಾಯೊ ಹೊಸ ಮತವ॥ (ಕ.ಬ.೪೫)

ಬಸವಣ್ಣನವರು ಚನ್ನಬಸವಣ್ಣನನ್ನು ಕರೆದು ಆಶೀರ್ವದಿಸಿದರು, ಹರಸಿದರು. "ಶರಣರನ್ನು ಜೋಪಾನ ಮಾಡು ಚನ್ನಬಸವಣ್ಣ, ಹೊಸಧರ್ಮವು ಇದೀಗ ಹುಟ್ಟಿದೆ. ಇನ್ನಷ್ಟು ಬಲಗೊಂಡು ಬೆಳೆಯಬೇಕಾಗಿದೆ".

ಚನ್ನ ಬಸವನೆ ಕಾಯೊ ಇನ್ನು ಮಂಟಪ ನೀನು
ಗುನ್ನೆ ಮಾಡುವರು ಶಿವಮತಕೆ । ಕೋಪಿಗಳು,
ಮಣ್ಣು ಗೂಡಿಸುವ ಮಾಚಯ್ಯ ॥ (ಹ.ಹಂ. ೬೨)

ಚನ್ನಬಸವಣ್ಣಾ, ನಿನ್ನ ಜೊತೆಗೆ ಶತ್ರುಗಳನ್ನು ಮಣ್ಣು ಮಾಡುವ ಸಾಮರ್ಥ್ಯ ಉಳ್ಳ ಮಾಚಿದೇವರೂ ನೆರವಿಗೆ ಇರುವರು. ಆದ್ದರಿಂದ ಮಂಟಪದ ಸಂಪತ್ತಾದ ಸಾಹಿತ್ಯ ಸಿರಿಯನ್ನು ಕಾಪಾಡು.

ಹೇಳಿ ಹೊರಟನು ಬಸವ ಕೇಳಲಾರದೆ ಮಾತ
ಗೋಳಿಟ್ಟು ಜನವು ಸರಮಾಲೆ । ಸಂಗಮಕೆ
ಆಳು ಬಸವಯ್ಯಾ ದಯವಿಟ್ಟು ॥ (ಕ.ಬ. ೪೬)

ಶರಣರಲ್ಲಿ ಎರಡು ಅಭಿಪ್ರಾಯ ಮೂಡಿದವು. ಏಕೆ ಮತಾಂಧರನ್ನು, ಅವರನ್ನು ಬೆಂಬಲಿಸುವ ಬಿಜ್ಜಳನ್ನು ಎದುರಿಸಿ ನಿಲ್ಲಬಾರದು? ಎಂಬ ಉಗ್ರವಾದಿಗಳು. ಸಾತ್ವಿಕ ಮಾರ್ಗವೇ ಇರಲಿ ಎಂಬ ಸೌಮ್ಯವಾದಿಗಳು. ಮೊದಲನೆಯವರು "ಬಸವಣ್ಣಾ... ನೀವು ಹೋಗುವುದು ಬೇಡ. ಹೋರಾಟಕ್ಕೆ ನಿಲ್ಲೋಣ." ಎಂದು ಕೆಲವರು ಹಠಮಾಡಿದರೂ, ಶಾಂತಿಪಥವನ್ನೇ ತುಳಿಯಬಯಸಿದ ಬಸವಣ್ಣನವರು ತಮ್ಮ ನಿರ್ಗಮನದಿಂದ ಅರಸನ ಮತ್ತು ಮತಾಂಧರ ಕೋಪ ತಣ್ಣಗಾಗಿ, ಶರಣರ ಮೇಲೆ ಸೇಡು ತೀರಿಸಿಕೊಳ್ಳಲಾರರೆಂದು ಭಾವಿಸಿದರು. ಆಗ ಶರಣ ಜನರ ದುಃಖ ಮೇರೆವರಿಯಿತು.

ಬಸವ ಹೋಗಲು ಭೂಮಿ ಕಸವಾಗಿ ಸುಖವುಂಟೆ
ಮಸಣ ಮಸಣಾತು ಕಲ್ಯಾಣ । ಮಂತ್ರಿಗಳೆ
ಬಸವಗಧಿಕ ಮಂತ್ರಿ ಇನ್ನುಂಟೆ ॥ (ಹ.ಹಂ.೬೫)

ಗುರು ಬಸವಣ್ಣನವರ ನಿರ್ಗಮನದಿಂದ ಕಲ್ಯಾಣವು ಕಳಾಹೀನವಾಯಿತು. ಬಸವಣ್ಣನವರನ್ನು ಮೀರಿಸುವ ಮಂತ್ರಿ ಸಿಗಬಹುದೇ ಎಂದು ಬಿಜ್ಜಳನು ಚಿಂತಿತನಾದನು.

ಬಸವ ರಾಜ್ಯದ ಸಿರಿಯು ಬಸವ ಬಡವರ ನಿಧಿಯು

Digitalized by e-Sahithya Documentation Forum
Sponsored by Sarayu Foundation Trust

ಬಸವ ಮಳೆಬೆಳೆಯು ನಾಡೊಳಗೆ । ನಿಜದೀಪ
ಬಸವನೇ ಸಗ್ಗ ಸೋಪಾನ ॥ (ಹ.ಹಂ. ೬೬)

"ಬಸವಣ್ಣನೇ... ಈ ರಾಜ್ಯದ ಸಿರಿಯು, ಬಸವಣ್ಣನೇ ಬಡವರ ನಿಧಿಯು, ಆತನೇ ಮಳೆಬೆಳೆ ನಿಜದೀಪ, ಆತನೇ ಸ್ವರ್ಗದ ಸೋಪಾನ."

ಚಿಂತಿಸಿದ ಬಿಜ್ಜಳನು ಕುಂತಲ್ಲಿ ನಿಂತಲ್ಲಿ
ಬಂತು ಕೊನೆಯಿನ್ನು ರಾಜ್ಯಕ್ಕೆ । ಮುಂದೆನಗೆ
ಇಂಥ ಮಂತ್ರಿಗಳು ಸಿಗಬಹುದೆ ? ॥ (ಹ.ಹಂ.೬೭)

ಬಿಜ್ಜಳನು ದಿಗ್ಭ್ರಾಂತನಾಗಿ, ನಿಸ್ಸಹಾಯಕನೂ ಆಗಿದ್ದನು. ಬಸವಣ್ಣನವರ ಅಗಲುವಿಕೆಯಿಂದ ಘಾಸಿಗೊಂಡಿದ್ದನು. ಇನ್ನು ಇಂಥ ಮಂತ್ರಿಗಳು ಸಿಗಬಹುದೇ? ಎಂದು ಕುಂತಲ್ಲಿ ನಿಂತಲ್ಲಿ ಚಿಂತಿಸಲು ತೊಡಗಿದನು.

ಜನ ಸಾಮಾನ್ಯರ ಪ್ರೀತಿಪಾತ್ರ, ಬಡವರ ನಿಧಿಯು ಆದ ಬಸವೇಶನ ನಿರ್ಗಮನದಿಂದ ಜನಸಮುದಾಯ ಪ್ರಕೋಪಗೊಳ್ಳಬಹುದು ಎಂದು ಬಿಜ್ಜಳ ತಲ್ಲಣಿಸಿ, ಜನರ ಸಭೆಯನ್ನು ಸೇರಿಸಿದನು. ಅವರು ಹೇಳಿದರು:

ಕೇಳು ಬಿಜ್ಜಳರಾಯ ಹೇಳಿಹನು ಬಸವೇಶ
ಆಳಲೀ ಧರೆಯ ಚನಬಸವ । ಬಲವಂತ
ಮೇಳೈಸು ಮಂತ್ರಿ ಪದವವಗೆ ॥ (ಹ.ಹಂ. ೬೮)

ಬಿಜ್ಜಳರಾಜನೇ, ಬಸವಣ್ಣನವರು ಆದೇಶ ನೀಡಿ ಹೋಗಿದ್ದಾರೆ. ಚನ್ನಬಸವೇಶನೂ ಸಮರ್ಥನೆ. ಆತನಿಗೇ ಮಂತ್ರಿಪದವನ್ನು ಕೊಡು.

ಎಂದು ಹೇಳಿತು ಜನವು ಅಂದು ಕರೆಸಿದ ರಾಯ
ಚೆಂದದಲಿ ಚನ್ನಬಸವನಿಗೆ ಒಪ್ಪಿಸಿದ
ಬಂದು ತಾ ಮಂತ್ರಿ ಮುದ್ರಿಕೆಯ ॥ (ಹ.ಹಂ. ೬೯)

ಬಸವಣ್ಣನವರ ಪ್ರತಿನಿಧಿಯಾಗಿ ಚೆನ್ನಬಸವಣ್ಣನು ಇದ್ದರೆ ಜನ ಸಾಮಾನ್ಯರು ಸಂತೋಷಗೊಳ್ಳಬಹುದು ಎಂದು ಚೆನ್ನಬಸವಣ್ಣನನ್ನು ಕರೆಸಿ, ಮಂತ್ರಿಯ ಮುದ್ರಿಕೆಯನ್ನು ಬಿಜ್ಜಳನು ಕೊಟ್ಟನು.

ಇದರಿಂದ ಕೊಂಡಿ ಮಂಚಣ್ಣನಂಥವರಿಗೆ ಆಶಾಭಂಗವಾಯಿತು. ಪುನಃ ಶರಣರದೇ ಮೇಲುಗೈಯಾಯಿತೆಂದು ತಪ್ತರಾದರು. ಚನ್ನಬಸವಣ್ಣನವರೂ ಚೆನ್ನಾಗಿ ಆಳತೊಡಗಿದರು. ಅವರಲ್ಲಿ ತಪ್ಪು ತೆಗೆಯಲಾರದೆ ಭಂಡ ಜಗಳವನ್ನು ಆರಂಭಿಸಿದರು.

ಕೊಂಡಿಗಳು ಮುಂದಾಗಿ ಭಂಡ ಜಗಳವ ಹೂಡಿ
ಹೆಂಡ ಕುಡಿಸಿದರು ಚಾಡಿಯಲಿ । ಬಿಜ್ಜಳನು
ಹುಂಡ ತಿಳಿಯದಲೆ ಕಿವಿಗೊಟ್ಟ ॥ (ಹ.ಹಂ.೭೦)

ಕೊಂಡೆಯರು ಇಲ್ಲದ್ದು ಇದ್ದದ್ದು ಹೇಳಿ. ಭಂಡ ಜಗಳವನ್ನು ಶುರುಮಾಡಿದರು. ಚಾಡಿ ಎಂಬ ಹೆಂಡವನ್ನು ಕುಡಿಸಿ ಬಿಜ್ಜಳನನ್ನು ದಿಗ್ಮೂಢನನ್ನಾಗಿ ಮಾಡಿದರು.

ಹರಳಯ್ಯ ಮಧುವರಸ ವರ ಬೀಗರಾದುದಕೆ
ದುರುನಡತೆಯುಂಟೆ ಬೇರಿನ್ನು । ಬಿಜ್ಜಳನೆ
ಕರೆ ತರಿಸಿ ದಂಡಿಸವರೆಂದು ॥ (ಹ.ಹಂ. ೭೧)

ಚಾಡಿಕೋರರು ಹೇಳಿದರು, "ಹರಳಯ್ಯ-ಮಧುವರಸರು ಬೀಗರಾಗಲು ಸಾಧ್ಯವೇ? ಇದಕ್ಕಿಂತಲೂ ಕೆಟ್ಟದಾದ ನಡತೆಯುಂಟೇ? ರಾಜನೇ ನೀನು ಅವರನ್ನು ದಂಡಿಸದಿದ್ದರೆ ಬಹಳ ಉಗ್ರ ಪರಿಣಾಮವಾಗುವುದು."

ಓಲಗದಿ ಬಿಜ್ಜಳನು ನಾಳೆ ಅನ್ನದೆ ಕರೆಸಿ
ಕೀಳಿಸಿರಿ ಕಣ್ಣ ನಿಂತಲ್ಲೆ । ಕೇಡಿಗಳು
ಬಾಳುವದು ತರವೆ ನಾಡೊಳಗೆ ॥ (ಹ.ಹಂ.೭೩)

ಚಾಡಿಕೋರರ ಮಾತಿನಿಂದ ತಪ್ತನಾಗಿ ಬಿಜ್ಜಳನು, "ನಾಳೆಯೇ ಅವರನ್ನು ಕರೆಸಿ, ನಿಂತಲ್ಲೇ ಕಣ್ಣ ಕೀಳಿಸಿರಿ. ಇಂಥ ಕೇಡಿಗಳು ನಾಡಿನಲ್ಲಿ ಇರುವುದೇ ತರವಲ್ಲ." ಎಂದು

ಆರ್ಭಟಿಸಿದ.

ಸಾರುತಲಿ ಡಂಗುರವ ಊರಲ್ಲಿ ಮೆರೆಯಿಸಿರಿ
ಜಾರೆಯರ ಮುಂದೆ ಒದೆಯಿಸಲಿ । ಕೊನೆಗವರ
ಕ್ರೂರ ಕತ್ತಿಯಲೆ ಕೊಲ್ಲೆಂದ ॥ (ಹ.ಹಂ.೭೪)

ಇವರು ಮಾಡಿದ ಅಪರಾಧ ಏನೆಂಬುದನ್ನು ಡಂಗುರ ಹೊಯಿದು ಸಾರಿಸಿರಿ. ಹಾಗೆ ಸಾರುತ್ತಲೇ ಇವರನ್ನು ಎಳೆದು ತನ್ನಿರಿ. ವೇಶ್ಯೆಯರ ಕೇರಿಯಲ್ಲಿ ಹಾಯ್ದು ಬರುವಾಗ ಅವರ ಮುಂದೆ ಒದೆಯಿಸಿರಿ. ನಂತರ ಕತ್ತಿಯಿಂದ ತಿವಿದು ಕೊಲ್ಲಿಸಿರಿ.

ಸಿಟ್ಟೇಕೆ ಬಿಜ್ಜಳನೆ ಇಷ್ಟು ಕೋಪವು ತರವೆ
ಕೆಟ್ಟ ಬಗೆಸಿದರೆ ಒಡೆಯನಿಗೆ । ತಿಳಿಸಿದನು
ಕಟ್ಟಳೆಯ ಚನ್ನದಂಡೇಶ ॥ (ಹ. ಹಂ.೭೫)

"ಬಿಜ್ಜಳ ಮಹಾರಾಜ, ಇಷ್ಟು ಕೋಪ ನಿನಗೇಕೆ? ಶರಣರು ಯಾರಿಗಾದರೂ ಕೆಟ್ಟುದನ್ನು ಬಗೆದಿರುವರೆ?"

ಹಾರುವರ ಕುಲ ಹೆಚ್ಚು ಬೇರೆ ಜನ ಕುಲಹೀನ!
ಹಾರುವಗೆ ಉಂಟು ಹೊಲೆಯಿನ್ನು । ಜಗದೊಳಗೆ
ಯಾರು ಹಾರುವರ ಮೊದಲಿಗರು? (ಹ.ಹಂ.೭೬)

ಬ್ರಾಹ್ಮಣರು ಕುಲದಲ್ಲಿ ಹೆಚ್ಚು, ಉಳಿದವರು ಕುಲಹೀನರು ಎಂಬ ಭ್ರಾಂತಿ ಬೇಡ. ಎಲ್ಲರೂ ಹುಟ್ಟುವುದೂ ಹೊಲೆಯಲ್ಲಿಯೆ! ಮಾತ್ರವಲ್ಲ ಬ್ರಾಹ್ಮಣರ ಗೋತ್ರ ಪುರುಷರಾಗಿರುವ ಮೊದಲಿಗರ ಕುಲಗಳು ಗೊತ್ತಿರುವವೆ?

ಹೊಲಬರಿತ ಮನುಜನವ ಕುಲವಂತ ಜಗದೊಳಗೆ
ನೆಲೆಯುಂಟೆ ಗಂಗೆಗೆ ಬಿಜ್ಜಳನೆ । ಶಿವಮತಕೆ
ಕುಲವೆಣಿಸಲುಂಟೆ ನಡೆನುಡಿಗೆ ॥ (ಹ.ಹಂ.೭೭)

ನಿಜವಾದ ಪಥವನ್ನು ಅರಿತವನೆ ಶ್ರೇಷ್ಠ ಕುಲದವನು. ಗಂಗೆಗೆ ಹೇಗೆ ನೆಲೆ ಇರದೆ ಹರಿವುದೋ ಹಾಗೆ ಶ್ರೇಷ್ಠತೆ ಯಾರಲ್ಲಿಯೂ ಹರಿಯಬಹುದು. ಶಿವಮತವನ್ನು ಸೇರಿದವರಲ್ಲಿ ಕುಲವನ್ನು ಎಣಿಸಲಾಗದು.

ಅರಸೊತ್ತಿಗೆಯ ನಂಬಿ ಬಿರುಸು ಮಾತುಗಳೇಕೆ
ಚಿರವೆ ಹೂ ಬಿಸಿಲು ತಿಳಿಯರಸ । ಪರುಕಿಸಲು
ಹರಭಕ್ತಿ ಅಮರ ಶರಣರಿಗೆ ॥ (ಹ.ಹಂ.೭೮)

ಅರಸೊತ್ತಿಗೆಯೇ ಬಲು ಸ್ಥಿರ ಎಂದು ಬಿರುಸು ಮಾತುಗಳನ್ನು ಏಕೆ ಆಡುವೆ? ಹೂ ಬಿಸಿಲು ಹೇಗೆ, ಸ್ಥಿರವಲ್ಲವೋ, ಬಿಸಿಲು ಕಾಯ್ದಾಗ ಎಷ್ಟು ಬಾಧೆಯನ್ನೀಯುವುದೋ ಹಾಗೆ ಅಧಿಕಾರ ಸಹ. ಶರಣರು ಪ್ರಾಮಾಣಿಕ ಭಕ್ತರು.

ಬೇಡ ಶರಣರ ನಿಂದೆ ಕೇಡು ಬರುವುದು ಮುಂದೆ
ನೋಡಿಕೋ ನಾಡ ಬಿಜ್ಜಳನೆ । ಒಪ್ಪಿಸುತ
ಕಾಡಬೇಡಿನ್ನು ಶರಣರಿಗೆ ॥ (ಹ.ಹಂ. ೭೯)

"ರಾಜನೇ, ಶರಣರನ್ನು ನಿಂದಿಸಬೇಡ, ಅವರಿಗೆ ತೊಂದರೆ ಕೊಡಬೇಡ. ನಿನಗೆ ಕೇಡಾದೀತು. ಇಷ್ಟೂ ಮಿಕ್ಕಿ ಹಠ ಮಾಡುವುದಾದರೆ ನಾವು ಕೆಟ್ಟ ಕೆಲಸಕ್ಕೆ ಒಪ್ಪಿಗೆ ಕೊಡಲಾರೆವು. ಈ ನಾಡನ್ನು ನೀನೇ ನೋಡಿಕೊ. ನನಗೆ ಮಂತ್ರಿಪದವಿಯೂ ಬೇಡ; ಹೋಗುವ ಮುನ್ನ ಇನ್ನೊಮ್ಮೆ ಹೇಳುವೆ; ಶರಣರನ್ನು ಕಾಡಬೇಡ."

ಕೇಳದಲೆ ಬಿಜ್ಜಳನು ಆಳುಗಳನಟ್ಟಿದನು
ಕೀಳು ಕೆಲಸೆಂದು ಬಲು ಹೇಸಿ । ನೋಡುವಕೆ
ಹೋಳಾತು ಶರಣರೂಳಿಗವು ॥ (ಹ.ಹಂ.೮೦)

ಇಷ್ಟು ಹಿತೋಪದೇಶ ಹೇಳಿದಾಗಲೂ ಕೇಳದೆ ಆಳುಗಳನ್ನು ಬಿಜ್ಜಳನು ಅಟ್ಟಿದನು. ಇನ್ನು ಮುಂದಾಗುವ ಕೀಳು ಕೆಲಸಗಳನ್ನು ನೋಡಲು ಹೇಸಿ, ಅಲ್ಲಿ ಊಳಿಗದಲ್ಲಿದ್ದ ಶರಣ ಜನರೆಲ್ಲರೂ ಹೊರಗಾಗಿ ಹೋದರು. ಅರ್ಥಾತ್ ಉದ್ಯೋಗವನ್ನು ತೊರೆದರು.

Digitalized by e-Sahithya Documentation Forum
Sponsored by Sarayu Foundation Trust

ಚರರು ನಡೆದರು ಬೇಗ ಹರನ ಶರಣರ ಬಳಿಗೆ
ಕರೆದಿರುವ ದೊರೆಯು ಮಧುವರಸ । ಹರಳಯ್ಯ
ಬರಬೇಕು ಬೇಗ ಅರಮನೆಗೆ ॥ (ಹ.ಹಂ. ೮೧)

ಸೇವಕರು ಶರಣರ ಬಳಿಗೆ ಹೋದರು. ರಾಜನು ಕರೆದಿರುವನೆಂದು ಹೇಳಿ ಮಧುವರಸ-ಹರಳಯ್ಯನವರು ಬೇಗನೆ ಬರಬೇಕು ಎಂದರು.

ಉರದ ಲಿಂಗಕೆ ನಮಿಸಿ ಹರನ ಪೂಜೆಯ ಮುಗಿಸಿ
ಗುರುವೆ ಬಸವಯ್ಯ ಸಲಹೆಂದು । ಮಧುವರಸ
ಹರಳಯ್ಯ ಬಂದರರಮನೆಗೆ (ಹ.ಹಂ. ೮೨)

ಎದೆಯ ಮೇಲೆ ಕಟ್ಟಿಕೊಂಡ ಲಿಂಗಕ್ಕೆ ನಮಿಸಿ, ಇಷ್ಟಲಿಂಗ ಪೂಜೆಯನ್ನು ಪೂರೈಸಿ, ಗುರುವೆ ಬಸವೇಶ ಸಲಹು ಎಂದು ವಂದಿಸಿ ಮಧುವರಸ-ಹರಳಯ್ಯ ಅರಮನೆಗೆ ಬಂದರು.

ಭರದಿ ಯಾತಕೆ ನಮ್ಮ ಅರಸ ಕರೆಸಿದೆ ಹೇಳು
ನೆರವೇರಿಸುವೆವು ಆ ಕೆಲಸ । ಘುಡಘುಡಿಸಿ
ಅರಸ ಗರ್ಜಿಸಿದ ಹುಲಿಯಂತೆ ॥ (ಹ.ಹಂ.೮೩)

"ಮಹಾರಾಜಾ, ನಮ್ಮನ್ನು ಏತಕ್ಕೆ ಕರೆಸಿದಿ? ಏನಾದರೂ ಕರ್ತವ್ಯವಿದ್ದರೆ ಹೇಳು. ಶಿರಸಾವಹಿಸಿ ಮಾಡುತ್ತೇವೆ". ಎಂದು ಹರಳಯ್ಯ ಮಧುವರಸ ಹೇಳುತ್ತಲೇ ಆಗ ರಾಜನು ಹುಲಿಯಂತೆ ಗರ್ಜಿಸಿದ.

ಒಡೆಯ ಯಾತಕೆ ನಿನಗೆ ಕಡುಕೋಪ ನಮ್ಮೇಲೆ
ನುಡಿನಡೆಯ ಮಾಡಿದೊಲವಿಂದೆ । ಅರಸನಿಗೆ
ತಡಮಾಡದೆಂದ ಮಧುವರಸ ॥ (ಹ.ಹಂ.೮೪)

ನಮ್ಮ ಮೇಲೆ ಇಷ್ಟು ಕೋಪ ನಿನಗೇಕೆ? ನಾವು ಯಾವ ತಪ್ಪೂ ಮಾಡಿಲ್ಲ. ನುಡಿಯನ್ನು ನಡೆಯನ್ನಾಗಿ ಪರಿವರ್ತಿಸಿದ್ದೇವೆ ಅಷ್ಟೆ. ನಮ್ಮ ಧರ್ಮದ ಪ್ರಕಾರ ಯಾರು ಬೇಕಾದರೂ ದೀಕ್ಷಾಸಂಸ್ಕಾರ ಹೊಂದಬಹುದು ಮತ್ತು ಅವರವರ ಮಧ್ಯೆ ಬೀಗತನ ಮಾಡಬಹುದು. ಹೀಗೆ ಸಿದ್ಧಾಂತಕ್ಕೆ ಅನುವಾಗಿಯೇ ನಡೆದಿದ್ದೇವೆ ಎಂದು ಮಧುವರಸನು ತಡಮಾಡದೆ ನುಡಿದನು.

ಎಲವೋ ಮಧುವರಸಯ್ಯ ಕುಲದಲ್ಲಿ ಹಾರುವನು
ಹೊಲೆಯನಿಗೆ ಹೆಣ್ಣ ಕೊಡಬೇಕೆ?! ಕುಲಗೇಡಿ
ಕಲಿಸುವೆನು ಪಾಠ ನಿನಗಿದಕೆ ॥ (ಹ.ಹಂ.೮೫)

ಎಲೋ ಮಧುವರಸಾ, ನೀನು ನೋಡಿದರೆ ಶ್ರೇಷ್ಠ ಕುಲದಲ್ಲಿ ಹುಟ್ಟಿದ ಹಾರುವನು, ಕುಲಹೀನನಾದ ಹರಳನ ಮಗನಿಗೆ ಹೆಣ್ಣು ಕೊಟ್ಟು ಕುಲಗೆಡುವುದೆ ? ನಿನಗೆ ಸರಿಯಾದ ಪಾಠ ಕಲಿಸುವೆ.

ಹೊಲಸ ತಿಂಬುವ ಹೊಲೆಯ ಹೊಲಬಿಲ್ಲದವ ಹೊಲೆಯ
ನೆಲೆಸಲ್ಲುಸಿ ನುಡಿಯು ಎದೆಯೊಳಗೆ । ಹೊಲೆಯರಸ
ಹೊಲೆಯರೆನ್ನುವರೆ ಶರಣರಿಗೆ? (ಹ.ಹಂ. ೮೬)

"ಯಾರು ಹೊಲಸನ್ನು ತಿನ್ನುವರೋ, ಸನ್ಮಾರ್ಗದಲ್ಲಿ ನಡೆಯದೆ ಇರುವರೋ ಅವರು ಹೊಲೆಯರು. ಅಂತರಂಗದಲ್ಲಿ ಹುಸಿಯನ್ನು, ಕಾಮಕ್ರೋಧಾದಿಗಳನ್ನು ಬಚ್ಚಿಟ್ಟುಕೊಂಡುದೇ ಹೊಲೆತನ. ಶಿವಪಥದಲ್ಲಿ ನಡೆಯುವ ಶರಣರಿಗೆ ಹೊಲೆಯರೆನ್ನಬಹುದೆ?" ಎಂದು ಮಧುವರಸ ಉತ್ತರಿಸುವನು.

ಖೂಳ ಬಿಜ್ಜಳರಾಯ ತಾಳಲಾರದೆ ಕೋಪ
ಕೀಳಿಸಿದ ಕಣ್ಣ ನಿಂತಲ್ಲೆ । ನಿಲ್ಲದಲೆ
ಗಾಳಕವರನ್ನು ಎಳೆಸೆಂದ ॥ (ಹ.ಹಂ.೮೭)

ಕೋಪೋದ್ರಿಕ್ತನಾದ ಬಿಜ್ಜಳನು ಆ ಶರಣರ ಕಣ್ಣುಗಳನ್ನು ಕೀಳಿಸಿದ. ಅವರನ್ನು ಗಾಳಕ್ಕೆ ಕಟ್ಟಿ ಎಳೆಸಲು ಹೇಳಿದನು.

ಎಳೆಸುತಲಿ ಬೀದಿಯಲಿ ಬಳಲಿಸುತಲಿಬ್ಬರನು
ಹಳಿದು ಶೂಲಕ್ಕೆ ಏರಿಸಲು । ಶಿವನೆಂದೆ
ನಲುಮೆಯಲಿ ಜೀವ ನೀಗಿದರು ॥ (ಹ.ಹಂ,೮೮)

ಬೀದಿಯಲ್ಲಿ ಅವರುಗಳನ್ನು ಎಳೆಸುತ್ತ, ಬಳಲಿಸುತ್ತ ಶೂಲಕ್ಕೆ ಏರಿಸಿದರು. ಆಗ ಅವರು ಅಳದೆ, ಗೋಳಿಡದೆ ದೇವನನ್ನು ಸ್ಮರಿಸಿಕೊಳ್ಳುತ್ತಾ ನಗುನಗುತ್ತಲೇ ಪ್ರಾಣಬಿಟ್ಟರು.

ಹೂವಿನಾ ಮಳೆಯಾಗಿ ಹೊವಿನ ತೇರೇರಿ
ಹೂವಾದರವರು ಶಿವಪದಕೆ । ಶಿವಶರಣ
ಪಾವನದ ಮಾಲೆ ಸೇರಿದರು ॥ (ಹ.ಹಂ. ೮೯)

ಕಿರಿ ಕುಲದ ಹರಳಯ್ಯ ವರ ಶರಣ ತಾನಾದ
ಪರಮತವ ಜಯಿಸಿ ಹರಸಿದನು । ಹರಳನಿಗೆ
ಹರ ಮೆಚ್ಚಿ ಮೆರೆಸಿ ಕರೆದೊಯ್ದು ॥ (ಹ.ಹಂ.೯೦)

ಹುತಾತ್ಮರಾಗಿ ಶಿವನ ಪಾದವನ್ನು ಸೇರಿದರು. ಕೀಳುಕುಲದವನು ಎಂದು ಸಂಪ್ರದಾಯ ಬದ್ಧ ಸಮಾಜ ಕರೆದಿದ್ದ ಹರಳಯ್ಯ ವರಶರಣ ತಾನಾದ, ಜಾತಿವಾದಿಗಳ ಕೋಪಕ್ಕೆ ತುತ್ತಾದರೂ ಲಿಂಗದೇವನ ಪ್ರೀತಿಗೆ ಪಾತ್ರನಾದ.

ಅತ್ತ - ಕೂಡಲ ಸಂಗಮದಲ್ಲಿ

ಹರಹರನೆ ಪರಸಂಗ ಗುರು ಎನಗೆ ವರಸಂಗ
ಕರುಣನಿಧಿ ಹರನೆ ಲಿಂಗದೇವ ಎಂದೆನುತ
ಕರ ಮುಗಿದು ಬಸವ ಬಯಲಾದ ॥ (ಕ.ಬ. ೪೭)

ಗುರು ಬಸವಣ್ಣನವರು (ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು ಪೂಜೆಗೆ ಕುಳಿತವರೇ ದೇವನನ್ನು ಧ್ಯಾನಿಸುತ್ತ) ಉರಿಯುಂಡ ಕರ್ಪೂರದಂತೆ ಬಯಲಾದರು.

ಒಂದು ಪರಿಪೂರ್ಣ ಚೇತನವಾಗಿ ಬಾಳಿ ಅಸಾಮಾನ್ಯ ಸಾಧನೆ ಗೈದು, ಇಳೆಯನ್ನಗಲಿದ ಗುರು ಬಸವಣ್ಣನವರನ್ನು ಕುರಿತು ಜನಪದವು ಹೀಗೆ ಕೊಂಡಾಡುವುದು:

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ । ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವುದು ॥ (ಕ.ಬ.೪೮)

ಬಸವಣ್ಣನವರು ಬಹು ಬಲ್ಲಿದರು, ಜ್ಞಾನಿಗಳು, ಶಿವಬೆಳಕನ್ನು ತಂದು ನಾಡಿನಲ್ಲೆಲ್ಲ ಚೆಲ್ಲಿದರು. ಆದ್ದರಿಂದಲೇ ಜನರು ಹೃದಯತುಂಬಿ ಅವರನ್ನು ಕೊಂಡಾಡುವರು.

ಅರಿಯುದಕೆ ಕುರುಹೆಂದು ಕರಲಿಂಗ ನೀ ಕೊಟ್ಟೆ
ಶರಣೆಂಬೋ ನುಡಿಯ ಛಲ ಮಾಡಿ! ಶಿವಮತಕೆ
ಗುರು ಬಸವಲಿಂಗ ನಿಜ ಮಂತ್ರೋ ! (ಕ.ಬ.೪೯)

ಈ ಪದ್ಯವು ಅತ್ಯಪೂರ್ವವಾಗಿ ಬಸವಣ್ಣನವರ ಸಾಧನೆಯನ್ನು ಚಿತ್ರಿಸುತ್ತದೆ. ೧) ಗುರು ಬಸವಣ್ಣನವರು ಪರಮಾತ್ಮನನ್ನು ತಿಳಿದುಕೊಳ್ಳಲೆಂದು ಇಷ್ಟಲಿಂಗವೆಂಬ ಕುರುಹನ್ನು ಕರಕ್ಕೆ ಕೊಟ್ಟರು. ಬ್ರಾಹ್ಮಣ-ಶೂದ್ರ ಎಂಬ ವರ್ಣಭೇದವಿಲ್ಲದೆ, ಸನ್ಯಾಸಿ-ಸಂಸಾರಿ ಎಂಬ ಆಶ್ರಮಭೇದವಿಲ್ಲದೆ, ಹೆಣ್ಣು-ಗಂಡು ಎಂಬ ಲಿಂಗಭೇದವಿಲ್ಲದೆ, ಇಷ್ಟಲಿಂಗವೆಂಬ ಕುರುಹು ಕೊಟ್ಟರು.

೨) ಶರಣ ಎಂಬ ನುಡಿಯನ್ನು ಛಲ ಮಾಡಿಸಿ ತೋರಿಸಿದರು. ಆಚಾರ, ಅರಿವು, ಅನುಭಾವಗಳಿಂದಲೇ ವ್ಯಕ್ತಿಯು ಶರಣನಾಗಬಲ್ಲನು-ಹುಟ್ಟಿನಿಂದಲ್ಲ ಎಂದು ಘೋಷಿಸಿ ಅದರಂತೆ ಎಲ್ಲರಿಗೂ ಸಂಸ್ಕಾರ, ಅವಕಾಶ ನೀಡಿ ಸಾಧಿಸಿ ತೋರಿಸಿದರು.

೩) ಹಾಗಾಗಿಯೇ ಗುರು ಬಸವಣ್ಣನವರ ಹೆಸರು ಮಂತ್ರವಾಯಿತು.

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ
ಬಸವ ಕಾಯಕದ ಗುರುಬೀಜ ಶಿವಮತಕೆ
ಬಸವ ಓಂಕಾರ ಶಿವನಾಮೋ ॥ (ಕ.ಬ.೫೦)

ಬಸವಣ್ಣನೇ ಭಕ್ತಿಯ ಬೀಜ, ಬಸವಣ್ಣನೇ ಮುಕ್ತಿಯ ತೇಜ, ಆತನೇ ಕಾಯಕ ಸಿದ್ಧಾಂತಕ್ಕೆ

Digitalized by e-Sahithya Documentation Forum
Sponsored by Sarayu Foundation Trust

ಆದಿ ಬೀಜ! ಹೀಗಾಗಿ ಈ ಭಕ್ತಿ ಮಾರ್ಗಕ್ಕೆ ಆತನ ಹೆಸರು ಪ್ರಣವ ಸ್ವರೂಪಿ ಮಂತ್ರವಾಗಿದೆ.

ಸುಗ್ಗಿಯಲಿ ಒಕ್ಕಲಿಗೆ ಉಗ್ಗಡಿಸಿ ಹಾಡುವನು
ಕಗ್ಗಾಯಿ ತುಂಬಿ ಹಣ್ಣಾಗಿ । ಕಣತುಂಬಿ
ಒಗ್ಗುವದು ಲೋಕ ರಸ ಕುಡಿದು ॥ (ಕ.ಬ.೫೧)

ಆ ಬಸವ ಮಂತ್ರವನ್ನು ಒಕ್ಕಲಿಗನು ಉಗ್ಗಡಿಸಿ ಹಾಡುವನು. ಅದರಿಂದ ಕಗ್ಗಾಯಿಯೂ ಹಣ್ಣಾಗುವುದು; ಕಣವು ತುಂಬಿ ತುಂಬಿ ಒಗ್ಗುವುದು. ಲೋಕವು ಬಸವ ಮಂತ್ರದ ಅಮೃತರಸವನ್ನು ಪಾನ ಮಾಡಿ ತಣಿಯುವುದು.

(ಇಲ್ಲಿಗೆ ಗುರು ಬಸವಣ್ಣನವರ ಜೀವನ ಚರಿತ್ರೆ ಪೂರ್ತಿಗೊಳ್ಳುವುದು. ಆದರೆ ಅಲ್ಲಿಂದ ನಂತರ ನಡೆದ ಕಥೆಯೂ ಅತ್ಯಂತ ಮಹತ್ವಪೂರ್ಣವಾಗಿರುವ ಕಾರಣ ಅದನ್ನೂ ತಿಳಿದುಕೊಳ್ಳೋಣ.)

ಇದನ್ನು ಮಡಿವಾಳ ಮಾಚಯ್ಯನವರ ಹಂತಿಪದದಿಂದ ಆಯ್ದುಕೊಳ್ಳಲಾಗಿದೆ.

ಮಾದರಸು ಹರಳಯ್ಯ ಹೋದ ದಿನ ಶಿವನಡಿಗೆ
ಬೀದಿ ಬೀದಿಗಳು ಕಿಡಿಕಾರಿ । ಕಲ್ಯಾಣ
ಗಾದಿ ಹೌಹಾರಿ ತಳಮಳಿಸಿ ॥ (ಮ.ಮಾ.೮೩)

ನಿರಪರಾಧಿಗಳು, ಪವಿತ್ರಾತ್ಮರೂ ಆದ ಮಧುವರಸ-ಹರಳಯ್ಯನವರ ವಧೆಯಾದ ದಿನ ಬೀದಿಬೀದಿಗಳು ಕಿಡಿ ಕಾರಿದವು. ಜನ ಸಾಮಾನ್ಯರು ನೊಂದು, ರೋಷಗೊಂಡರು.

ಅಂದು ಸಂಜೆಗೆ ಶಿವನೆ ಹೊಂದಿ ಮಂಟಪ ಕೂಡಿ
ಬಂದ ಬವಣೆಯನು ಕಳೆಯುದಕೆ । ಚನ್ನ ದಂಡೇಶ
ಸಂದಣಿಗೆ ಉಳವಿ ಸೇರೆಂದ ॥ (ಮ.ಮಾ. ೮೪)

ಅನುಭವ ಮಂಟಪದಲ್ಲಿ ಸಭೆ ಸೇರಿತು. ಬಂದಿರುವ ವಿಪತ್ತನ್ನು ಎದುರಿಸುವುದು ಹೇಗೆ ಎಂಬ ಬಗ್ಗೆ ಚರ್ಚೆ ನಡೆಯಿತು. ಶರಣರಿಗೆ ಪ್ರಾಣಕ್ಕಿಂತಲೂ ಪ್ರಿಯವಾದುದು ವಚನ ಸಾಹಿತ್ಯ. ಏಕೆಂದರೆ,

ವಚನ ಮಂಟಪದೊಳಗೆ ವಚನಗಳ ಮಳೆ ಸುರಿದು
ಶುಚಿ ಹೊಂದಿ ಜಗವು ಅನುಭಾವ । ಬಿತ್ತಿದರು
ಉಚಿತ ಹೊಸಮತದ ಬೆಳೆ ಬಂತು ॥ (ಕಿ.ಹಂ.೬೪)

ವಚನ ಮಂಟಪದಲ್ಲಿ ವಚನಗಳ ಮಳೆ ಸುರಿಯಿತು. ಆ ಜ್ಞಾನದ ಹೊಳೆ ಹರಿದಾಗ ಜಗತ್ತು ಶುಚಿಗೊಂಡಿತು. ಆಗ ಅನುಭಾವ ಎಂಬ ಅಧ್ಯಾತ್ಮ ವಿದ್ಯೆ [Spiritualism]ಯ ಬೀಜ ಬಿತ್ತಿದರು. ಪರಿಣಾಮವಾಗಿ ಹೊಸಧರ್ಮ ಎನ್ನುವ ಬೆಳೆಯು ಬಂದಿತು.

ಇಂತಹ ಅಮೂಲ್ಯ ಸಂಪತ್ತನ್ನು ಕಾಯ್ದುಕೊಳ್ಳಲು ಚಿಕ್ಕ ದಂಡನಾಯಕ ಚನ್ನಬಸವಣ್ಣನವರು ಒಂದು ಅಜ್ಞಾತ ಮತ್ತು ದುರ್ಗಮ ಸ್ಥಳಕ್ಕೆ (ನಂತರ ಅದಕ್ಕೆ ಉಳವಿ ಎಂಬ ಹೆಸರಾಯಿತು.) ಹೋಗಲು ಆದೇಶ ನೀಡಿದರು.

ಬಿಚ್ಚುಗತ್ತಿಯ ಮಾಚ ಕೆಚ್ಚೆದೆಯ ಬಂಟನವ
ರೊಚ್ಚ ಬೊಮ್ಮಯ್ಯ ಜಗದೇವ । ನಿಮ್ಮಾಣೆ
ನುಚ್ಚು ಬಿಜ್ಜಳನ ಕಡಿಯುವೆವು ॥ (ಮ.ಮಾ.೮೬)

ಕೆಲವು ಶರಣರು ಸಾಹಿತ್ಯ ಸಂಪತ್ತನ್ನು ಹೊರಗೆ ಸಾಗಿಸುವ, ರಕ್ಷಿಸುವ ಯೋಜನೆ ಹಾಕುತ್ತಿದ್ದರು, ಮಡಿವಾಳ ಮಾಚಯ್ಯನವರೇ ರಕ್ಷಕರಾಗಿ ಮುನ್ನಡೆಸಬೇಕೆಂದು ನಿರ್ಧರಿಸಲಾಯಿತು.

ಚಾಲುಕ್ಯ ರಾಜ್ಯದ ನಿಷ್ಠಾವಂತ ಸೇವಕರಾಗಿ ಬಿಜ್ಜಳನ ಬಗ್ಗೆ ರೋಷಗೊಂಡಿದ್ದ ಮಲ್ಲಣ್ಣ, ಬೊಮ್ಮಣ್ಣ, ಜಗದೇವ ಎಂಬುವವರು ಅನುಭವ ಮಂಟಪದಲ್ಲಿ ಬಂದು ಕುಳಿತಿದ್ದರು. "ಇಷ್ಟು ದಿವಸ ಕಾಲ ಚಾಲುಕ್ಯರಿಗೆ ಮಾಡಿದ ದ್ರೋಹವನ್ನು ಸಹಿಸಿಕೊಂಡಿದ್ದೆವು. ಇದೀಗ ಮುಗ್ಧ ಶರಣರ ವಧೆಯಾಯಿತು. ನಮಗಿನ್ನು ಸಹಿಸಿಕೊಳ್ಳಲಾಗದು. ನಿಮ್ಮಾಣೆ, ಬಿಜ್ಜಳನ ತಲೆ ಕಡಿಯುವೆವು." ಎಂದು ಪ್ರತಿಜ್ಞೆ ಮಾಡಿ ಅವರು ಹೊರಟು ಹೋಗುವರು.

ಊಳಿಗವು ಹೊರಡುದಕೆ ನಾಳಿನ [illegible]

ಕಾಳಗವು ಎಸಗೆ ಕೂಮತಕೆ । ಮಾಚಯ್ಯ
ಹೇಳಿ ಸಜ್ಜಾದ ಕಾಳಗಕೆ ॥ (ಮ.ಮಾ.೮೭)

ಬೆಳಗಿನ ಜಾವದಲ್ಲಿಯೇ ಶರಣರು ಹೊರಡಬೇಕೆಂದು, ಅಕಸ್ಮಾತ್ ಶತ್ರುಗಳನ್ನು ಎದುರಿಸಬೇಕಾದರೂ ಕಾಳಗಕ್ಕೆ ಸಜ್ಜಾಗಿ ಇರಬೇಕೆಂದು ಮಾಚಯ್ಯನು ಗಣಾಚಾರಿಗಳೊಡನೆ ಶಸ್ತ್ರಧಾರಿಯಾಗಿ ನಿಂತನು.

ಕಾಲರುದ್ರನು ಮಾಚ ಭಾಳಲೋಚನ ಭಕ್ತ
ಮೊಲ್ಲ ಬೊಮ್ಮಯ್ಯ ಜಗದೇವ । ಮನೆ ಹೊಕ್ಕು
ಸೀಳಿ ತಲೆ ಹೊಡೆದು ಬಿಜ್ಜಳನ ॥ (ಮ.ಮಾ.೮೮)

ಕಾಲರುದ್ರನಂತಹ ಮಾಚಿದೇವನ ರಕ್ಷಣೆಯಲ್ಲಿ ಪ್ರಮುಖ ಶರಣರು ಬೆಳಗಿನ ಜಾವದಲ್ಲಿಯೇ ಕಲ್ಯಾಣವನ್ನು ತೊರೆದರು. ಅಂದು ರಾತ್ರಿಯಲ್ಲಿ ಮೊಲ್ಲ, ಬೊಮ್ಮ, ಜಗದೇವರು ಅರಮನೆ ಹೊಕ್ಕು ಬಿಜ್ಜಳರಾಜನ ತಲೆಯನ್ನು ತರಿದರು.

ಬಿಜ್ಜಳನ ವಧೆಯಾತು ಹೆಜ್ಜೆ ಮೀರಿತು ನಾಡು
ಕಜ್ಜ ಹದಗೆಟ್ಟು ಶಿವಶರಣ । ರೂಳಿಗವು
ಸಜ್ಜುಗೇಡಾಗಿ ಊರ್ಬಿಟ್ಟು ॥ (ನೇ. ಅ. ೮೧)

ಬಿಜ್ಜಳನ ವಧೆಯಾಯಿತು. ಕಾಯಿದೆ ಕಾನೂನು ಸಡಲಿದವು. ವಾತಾವರಣ ಹದಗೆಟ್ಟಿತು; ಶಿವಶರಣರ ಸಮುದಾಯವು ವಿಕ್ರಾಂತ ಸ್ಥಿತಿಯಲ್ಲಿ, ಅವ್ಯವಸ್ಥಿತವಾಗಿ ಊರನ್ನು ಬಿಡಬೇಕಾಯಿತು.

ಅಳಿಯ ಬಿಜ್ಜಳರಾಯ ಕೊಲೆಯ ಕೇಳುತಲೆದ್ದ
ತಳಮಳಿಸಿ ಬೆಳಗ ಕೂಡಿಸಿದ । ದಂಡೆತ್ತಿ
ಉಳುವೆಯ ಬಳಿಯವರ ತಡೆಗಟ್ಟಿ ॥ (ಮ.ಮಾ.೮೯)

ಕಲ್ಯಾಣದಿಂದ ಕೊಂಚ ಹೊರಗೆ ಇದ್ದ ಬಿಜ್ಜಳನ ಅಳಿಯನು ತನ್ನ ಮಾವನ ಸಾವಿನ ಸುದ್ದಿ ಕೇಳಿ ಧಾವಿಸಿದ. ಕೊಂಡೆಯರು ಅವನಿಗೆ ತಪ್ಪು ವಿವರ ಕೊಟ್ಟರು. ಜಗದೇವ-ಮಲ್ಲ-ಬೊಮ್ಮರದು ರಾಜಕೀಯ ದ್ವೇಷದ ವರ್ತನೆಯಾದರೂ, ಶರಣರೇ ಆ ಕೊಲೆಗೆ ಪ್ರೇರಕರು ಎಂಬ ತಪ್ಪು ಸುದ್ದಿ ಕೇಳಿ, ಅಳಿಯ ಬಿಜ್ಜಳನು ಕೋಪಗೊಂಡನು. ಸೈನ್ಯವನ್ನು ಕೂಡಿಸಿ ಶರಣರ ಮೇಲೆ ದಂಡೆತ್ತಿ ಹೊರಟ. ಸಹ್ಯಾದ್ರಿಯ ಘಟ್ಟದ ಕಡೆ ಹೊರಟಿದ್ದ ಶರಣರ ಮೇಲೆ ಸೈನ್ಯವು ದಾಳಿ ಮಾಡಿತು.

ಕಾದರೊಳ್ಳಿಯ ಮುಂದೆ ಕಾದಿದರು ಜಂಗಮರು
ಕಾದಿ ಹಿಮ್ಮೆಟ್ಟಿ ಸೈನ್ಯವನು । ಮುರಗೋಡ
ಹಾದಿಯೊಳು ಮುರಿದ ಮಾಚಯ್ಯ ॥ (ಮ.ಮಾ.೯೦)

ಕಾದರೊಳ್ಳಿ ಎಂಬಲ್ಲಿ ಬಲು ತೀವ್ರವಾದ ಕಾಳಗವಾಯಿತು. ಕೆಲವು ಶರಣರು ಸೈನ್ಯವನ್ನು ತಡೆಯುತ್ತಿದ್ದಂತೆಯೇ ಇನ್ನಷ್ಟು ಜನರು ಸಾಹಿತ್ಯವನ್ನು ಮುಂದುಮುಂದಕ್ಕೆ ಸಾಗಿಸುತ್ತಿದ್ದರು. ಮುರುಗೋಡು ಎಂಬಲ್ಲಿ ಅಂತಿಮ ಕಾಳಗವಾಯಿತು. ಅಲ್ಲಿ ಶರಣರಿಗೆ ಜಯವು ಲಭ್ಯವಾಯಿತು.

ತುಂಡ ಜಂಗಮದಂಡು ದಂಡನಾಯಕ ಮಾಚ
ಕಂಡಕಂಡಲ್ಲಿ ವೈರಿಗಳ । ಚಲ್ಲಿದರು
ಚಂಡು ಕಳಕೊಂಡ ಮರಿ ಅರಸ ॥ (ಮ.ಮಾ.೯೧)

ಸಾಹಿತ್ಯ ರಕ್ಷಣೆಗಾಗಿ ಜಂಗಮರು ಖಡ್ಗ ಹಿಡಿದರು, ಮಾಚಿದೇವನು ದಂಡನಾಯಕನಾದ. ವಚನ ವಾಙ್ಮಯವನ್ನು ನಾಶಮಾಡ ಬಂದ ವೈರಿಗಳನ್ನು ಸದೆಬಡಿದರು. ಅರಸನ ಸೇನೆಯ ಮುಖ್ಯಸ್ಥ ಹತನಾದ. ಅಳಿಯ ಬಿಜ್ಜಳನು ಸೆರೆ ಸಿಕ್ಕಾಗ ಅಕ್ಕ ನಾಗಲಾಂಬಿಕೆ ಕ್ಷಮಿಸಿ ಕಳಿಸುವಳು.

ಬೆನ್ನು ಹತ್ತಿದ ವೈರಿ ತಣ್ಣಗಾಯಿತು ಚೆದುರಿ
ಮಣ್ಣುಗೂಡಿಸಿದ ಮಾಚಯ್ಯ । ಕೈಯೆತ್ತಿ
ಚಿನವುಳ್ಳಿಸಿದನು ಲಿಂಗಿಗಳ ॥ (ಮ.ಮಾ.೯೨)

ವೈರಿ ಸೈನ್ಯದ ಶಕ್ತಿಯುಡುಗಿತು; ಜಯವು ದೊರೆಯಿತು. ಮಾಚಯ್ಯ ಅವರಿಗೆ ಚೆನ್ನಾಗಿ

Digitalized by e-Sahithya Documentation Forum
Sponsored by Sarayu Foundation Trust

ಹಣ್ಣುಗಾಯಿ ನೀರುಗಾಯಿ ಮಾಡಿದ. ಪುಣ್ಯಾತ್ಮ ಶಸ್ತ್ರವನ್ನು ಹಿಡಿದು ಲಿಂಗಾಂಗಿಗಳ ಚಿನ್ನವನ್ನು ಉಳಿಸಿದನು. ಅರ್ಥಾತ್ ಲಿಂಗಾಯತ ಧರ್ಮವನ್ನು ಮತ್ತು ಸಾಹಿತ್ಯವನ್ನು ರಕ್ಷಿಸಿದನು.

ಹರಭಜನೆ ಗುರುಸೇವೆ ಉರುತರದಿ ಮಾಡುತಲಿ
ಶರಣಗಣ ಕೂಡಿ ಉಳಿವೆಯೊಳು । ಮರುದಿನವೆ
ಮೆರೆಸಿದರು ತತ್ವ ಮಂಟಪವ ॥ (ಮ.ಮಾ. ೯೩.)

ಚದುರಿದ್ದ ಶರಣರೆಲ್ಲ ಉಳಿವೆಯಲ್ಲಿ ಸೇರಿ ಪರಮಾತ್ಮನ ಭಜನೆ, ಗುರು ಸೇವೆ ಮಾಡುತ್ತ ಪುನಃ ಅಲ್ಲಿಯೂ ತತ್ವ ಮಂಟಪವನ್ನು ಕಟ್ಟಿದರು. ಬಸವ ಧರ್ಮದ ಪ್ರಸಾರ ಕಾರ್ಯ, ವಚನ ಸಾಹಿತ್ಯದ ಪ್ರತಿ ಮಾಡುವಿಕೆ, ದಾಸೋಹ ಎಲ್ಲ ಪ್ರಾರಂಭವಾದವು.

ಚನ್ನಬಸವೇಶ್ವರನು ಉನ್ನತಾನುಭಾವಿಗಳು
ಚಿನ್ನ ಮಯವಾತು ಆ ಉಳಿವೆ । ಲಿಂಗಿಗಳ
ಕನ್ನೆ ಭಕ್ತಿಯಾ ಗೂಡಾತು ॥ (ಮ.ಮಾ.೯೭)

ಚಿನ್ಮಯ ಜ್ಞಾನಿ ಚನ್ನಬಸವೇಶ್ವರನ ನೇತೃತ್ವದಲ್ಲಿ ಅನುಭಾವಿಗಳು ಪುನಃ ಸಮಾವೇಶವಾದರು. ಉಳಿವೆಯು ಪುನಃ ಜ್ಞಾನದಿಂದ ಬೆಳಗಿತು. ಶರಣಸತಿ-ಲಿಂಗಪತಿ ಭಕ್ತಿಗೆ ಅದು ಗೂಡಾಯಿತು.

ದೂರದೂರವೆ ಸಾಗಿ ಸೇರಿದರು ಹಳ್ಳಿಗಳ
ಯಾರು ಯಾರೆಂಬ ಗುರುತಳಿದು । ಮರೆಯಾಗಿ
ಆರಿ ಕೆಂಡಡಗಿ ಬೂದಿಯೊಳು ॥ (ನೇ. ಅ. ೮೨)

ಕಲ್ಯಾಣದಲ್ಲಿ ಉದ್ವಿಗ್ನ ವಾತಾವರಣ ಉಂಟಾಗುತ್ತಲೇ ಶರಣರು ದೂರದೂರಕ್ಕೆ ಚದುರಿದರು. ಹಳ್ಳಿಗಳಲ್ಲಿ ಸೇರಿದರು. ಯಾರು ಯಾರು ಎಲ್ಲಿಗೆ ಹೋದರೆಂಬುದೂ ತಿಳಿಯಲಿಲ್ಲ. ಬೂದಿಯಲ್ಲಿ ಕೆಂಡವು ಮರೆಯಾಗಿ ಇರುವಂತೆ ಶರಣ ಚೇತನಗಳು ಅಡಗಿಕೊಂಡವು.

ಮಂಟಪದ ಹೆಜ್ಜೇನ ಗಂಟೇರು ಕೆಡಿಸಿದರೆ
ಕುಂಟಿತವೆ ಜೇನು ನೊಣಗಳಿಗೆ । ಹುಟ್ಟಿಡಲು
ಬಂಟ ಶರಣರಿಗೆ ಕಂಟಕವೆ? ॥ (ನೇ.ಅ. ೭೩.)

ಅನುಭವ ಮಂಟಪದಲ್ಲಿ ಶರಣರೆಂಬ ಜೇನ್ನೊಣಗಳು ಸ್ವಾನುಭವದ ಸಾಹಿತ್ಯದ ಹುಟ್ಟನ್ನು ನಿರ್ಮಿಸಿ, ಅದರಲ್ಲಿ ತಮ್ಮ ಸ್ವಾನುಭವದ ಮಧುವನ್ನು ತುಂಬಿದವು. ಮತಾಂಧರು, ಚಾಡಿಕೋರರು ಆ ಜೇನಿನ ಹುಟ್ಟಿಗೆ ಆಘಾತ ಮಾಡಿದರು. ಆದರೇನಂತೆ? ಆ ಅನುಭವಿಗಳು ಎಂಬ ಜೇನ್ನೊಣಗಳಿಗೆ ಇನ್ನೊಂದು ಕಡೆ ವಚನ ಶಾಸದ ಹುಟ್ಟು ಕಟ್ಟಿ ಅನುಭವದ ಜೇನು ಸಂಗ್ರಹಿಸುವುದು ಅಸಾಧ್ಯದ ಕೆಲಸವೆ? ಶರಣರು ಧೀರರು. ಕಂಟಕಗಳಿಗೆ ಅಂಜುವವರಲ್ಲ.

ಶಿವಶರಣ ದುಂಬಿಗಳು ಭವದೊಳಗೆ ಹಾರ್ಯಾರಿ
ಶಿವಮತದ ಹುಟ್ಟು ಕಟ್ಟಿದವು । ವಚನಗಳು
ಸವೆಯದುಳಿದಿರುವ ಹೊಸ ಜೇನು ॥ (ನೇ.ಅ.೮೪)

ಶಿವಶರಣರು ಎಂಬ ದೇವದುಂಬಿಗಳು. ಸುತ್ತಲಿನ ಭವ ಜಗತ್ತು ಎಂಬ ವನದೊಳಗೆ ಹಾರಾಡಿದವು. ಶಿವಮತದ ಹುಟ್ಟನ್ನು ಪುನಃ ಕಟ್ಟಿದವು. ವಚನ ಸಾಹಿತ್ಯವು ಸವೆಯದೆ ಉಳಿದಿರುವ ನಿತ್ಯ ನೂತನವೂ, ಸಾರ್ವಕಾಲಿಕವೂ ಆಗಿರುವ ಹೊಸಜೇನು.

ಮಲ್ಲಿಗೆ ಇದ್ದಾಗ ಮುಳ್ಳೇಕೆ ಮುಡಿಯುತೀ?
ಕಲ್ಯಾಣದಲ್ಲಿ ಬಸವಯ್ಯ । ಇದ್ದಾಗ
ಕಲ್ಗೇಕೆ ಕಯ್ಯ ಮುಗಿಯುವೆ ॥

ಅತ್ಯಂತ ಸುಮಧುರ ಸುವಾಸನೆ ಬೀರುವ ಮಲ್ಲಿಗೆ ಹೂವು ಇರುವಾಗ ಯಾರಾದರೂ ಮುಳ್ಳನ್ನು ಮುಡಿಯುವರೆ? ಕಲ್ಯಾಣದ ಬ[illegible] ಗುರು ಇರುವಾಗ ಆತನನ್ನು

ಸ್ಮರಿಸುವುದು ಬಿಟ್ಟು ಬೀಸುವ ಕಲ್ಲಿಗೆ ಏಕೆ ಕೈಮುಗಿವೆ?

ಶರಣರ ನೆನೆದಾರ ಸರಗೀಯ ಇಟ್ಟಂಗಾ
ಅರಳ ಮಲ್ಲೀಗಿ ಮುಡಿದಾಂಗಾ । ಕಲ್ಯಾಣ
ಶರಣರ ನೆನೆಯೋ ನನ ಮನವೆ ॥

ಒಂದು ತತ್ವಕ್ಕಾಗಿ, ಆದರ್ಶಕ್ಕಾಗಿ ಬಾಳಿದ ಕಲ್ಯಾಣದ ಶರಣರನ್ನು ನೆನೆಯುವುದು ಎಂದರೆ, ಅತ್ಯಂತ ಬೆಲೆಬಾಳುವ ಆಭರಣವಾದ ಸರಗಿ (ಕೊಂಟದ ಡಾಬು)ಯನ್ನು ಇಟ್ಟುಕೊಂಡಂತೆ, ಅದೇ ಆಗ ಅರಳಿದ ಘಮಘಮಿಸುವ ಮಲ್ಲಿಗೆಯನ್ನು ಮುಡಿದಂತೆ. ಆದ್ದರಿಂದ ಎಲೇ ಮನಸ್ಸೇ ಕಲ್ಯಾಣದ ಶರಣರನ್ನು ಸದಾ ಕಾಲವೂ ನೆನೆ.

ಬಸವ ಹಲೆ ಹಲೆ ಹಂತಿ ಬಸವ ಹಲೆ ಹಲೆ ರಾಶಿ
ಬಸವ ಹುಲುಹುಲುಸು ಕಣಕಣಕೆ ಒಕ್ಕಲಿಗ
ಬಸವನ ನೆನೆಸೋ ಚಣಚಣಕೆ ॥ (ಕ.ಬ. ೫೨)

ಹಂತಿ ಕಟ್ಟುವಾಗ, ರಾಶಿ ಮಾಡುವಾಗ ಗುರು ಬಸವಣ್ಣನವರನ್ನು ನೆನೆಸು ಒಕ್ಕಲಿಗನೆ: ಅದರಿಂದ ಕಣದಲ್ಲಿ ಬೆಳೆಯು ಹುಲುಸಾಗಿ ವೃದ್ಧಿಯಾಗುವುದು. ನಿನ್ನ ಪ್ರತಿಯೊಂದು ಕೆಲಸದಲ್ಲೂ, ಕ್ಷಣ ಕ್ಷಣಕ್ಕೂ ಆತನನ್ನು ಸ್ಮರಿಸು.

ಈಸರನ ನೆನೆಸಿದರೆ ವಿಷವೆಲ್ಲ ಅಮರೂತ
ಬಿಸಿಲೆಂಬ ದಾರಿ ನೆರಳಾಗಿ । ಎಲೆ ಮನವೆ
ಬಸವಯ್ಯನ ನೆನೆಸು ಕೈಲಾಸ ॥ (ಕ.ಬ.೫೩.)

ಪರಮಾತ್ಮನನ್ನು ಸ್ಮರಿಸುತ್ತಿದ್ದರೆ ವಿಷವೂ ಅಮೃತವಾಗುತ್ತದೆ. ದಾರಿ ನಡೆಯುವಾಗ ಬಿಸಿಲೂ ನೆರಳಾಗಿ ಬಿಡುತ್ತದೆ. ಗುರು ಬಸವಣ್ಣನವರನ್ನು ನೆನೆಸಿದರೆ ಕೈಲಾಸದ ಅಂದರೆ ಸಂವೃದ್ಧಿ ಸಂತೃಪ್ತಿ-ಸುವಿಧಾನಗಳಿಂದ ಕೂಡಿದ ಸ್ಥಿತಿ ಇಲ್ಲಿಯೇ ದೊರೆಯುತ್ತದೆ. ಆದ್ದರಿಂದ ಬಿಡದೆ ಸ್ಮರಿಸು.

ಹಂತಿಯದು ಹಾಡೆಂದು ಪಂಥ ಕಟ್ಟಲಿಬೇಡ
ಕಂತಿ ಕರಗುವುದು ನಿಂತಲ್ಲಿ । ಬಸವಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ (ಕ.ಬ. ೫೪)

ಏನು ಹಾಡಬಲ್ಲೆವು ಎಂದು ಪಂಥ ಕಟ್ಟಬೇಡಿರಿ. ನೀವು ಎಷ್ಟು ಕಂತೆಕಂತೆ ತೆನೆ ತಂದು ಹಾಕಿದರೂ, ಅದು ಕರಗೀತೇ ವಿನಾ ನಾವೇನು ಹಾಡುವುದರಲ್ಲಿ ಸೋಲುವುದಿಲ್ಲ. ಏಕೆ ಗೊತ್ತೆ? ಬಸವಣ್ಣ ನಮ್ಮ ಎದೆಯೊಳಗೆ ಕುಂತು ಹಾಡಿಸುತ್ತಿದ್ದಾನೆ.

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣ ಬಸವಯ್ಯ । ನಮಗಿನ್ನು
ಹರಸಿರಿ ಹುಲುಸು ಹುಲ್ಲುಲಿಗೋ ॥ (ಕ.ಬ. ೫೫)

ಶರಣಗಣಮಣಿ ಬಸವಯ್ಯ, ನಾವು ನಿನಗೆ ಶರಣು ಎನ್ನುತ್ತಿರುವೆವು. ಎಲ್ಲಿಯವರೆಗೂ? ನಮ್ಮ ದೇಹದಿಂದ ಪ್ರಾಣ ಹಾರುವವರೆಗು ! ಕರುಣಿಸು ತಂದೆ. ನಮ್ಮನ್ನು ಹರಸು, ನಿನ್ನ ಕರುಣೆಯಿಂದ, ಹರಕೆಯಿಂದ ನಮ್ಮ ಬಾಳಿನಲ್ಲಿ ಎಲ್ಲವೂ ಹುಲುಸಾಗಿಲಿ.

ಸಮಾರೋಪ :

ಯಾವ ಕವಿ ಪಂಡಿತರಿಗಿಂತಲೂ ಮೀರಿದ ಹೃದಯವಂತಿಕೆಯಿಂದ ಮಣ್ಣಿನ ಮಕ್ಕಳು ಹಾಡಿದ್ದಾರೆ. ಘಟನೆಗಳನ್ನು ಸಂಕೋಚವಿಲ್ಲದೆ ಚಿತ್ರಿಸಿದ್ದಾರೆ. ಇಷ್ಟಾದರೂ ಅಜ್ಞಾತರಾಗಿ ಉಳಿದಿದ್ದಾರೆ. ಇಂಥ ಅಜ್ಞಾತ ಹಾಡುಗಬ್ಬಕಾರರಿಗೆ ಧನ್ಯವಾದ ಸಲ್ಲಿಸೋಣ.

ಅವರು ನಮಗೆ ಕಲಿಸಿಕೊಟ್ಟಂತೆ-

"ನಮ್ಮ ದೇಹದಲ್ಲಿ ಪ್ರಾಣವಿರುವವರೆಗೆ ಅಪ್ಪ ಬಸವಣ್ಣನವರಿಗೆ ಶರಣು ಶರಣೆನ್ನೋಣ, ಮಂತ್ರಪುರುಷ ಬಸವಣ್ಣನವರ ಕರುಣೆಗಾಗಿ, ಹರಕೆಗಾಗಿ ಬೇಡೋಣ, ಬದುಕನ್ನು ಹುಲುಸಾಗಿಸಲು ಅವರಲ್ಲಿಯೇ ಕೇಳೋಣ".

[illegible] "ಕನ್ನಡ ಜಾನಪದ ಗೀತೆಗಳು" ಕೃತಿಯಿಂದ ತ್ರಿಪದಿಗಳನ್ನು ಆಯ್ದುಮಾಡಿಕೊಳ್ಳಲಾಗಿದೆ. ಕಲ್ಯಾಣ ಬಸವಯ್ಯ, ೨. ಹರಳಯ್ಯ, ೩. ಮೇದಾರ

Digitalized by e-Sahithya Documentation Forum
Sponsored by Sarayu Foundation Trust

ಕೇತಯ್ಯ ೪. ಮಡಿವಾಳ ಮಾಚಯ್ಯ ೫. ನೇಗಿಯ ಅಮುಗಯ್ಯ ಎಂಬುವವರ ಪಂಕ್ತಿಪದಗಳಿಂದ ಸಂಗ್ರಹಿಸಿ ಕಥೆಯನ್ನು ಪೂರ್ಣಗೊಳಿಸಲಾಗಿದೆ. - ಮಾತಾಜಿ

ಮಂಗಲ

ಬೆಳಗಿರಿ ಬೆಳಗಿರಿ ಮಂಗಳವಾರತಿ
ಹರಳಯ್ಯ ಮಧುವಯ್ಯ ಶೀಲವಂತರಿಗೆ ||ಪ||

ಗುರು ಬಸವ ತಂದೆಯ ಪಥವನ್ನು ಹಿಡಿದು
ಕುಸುಮಗಳಾಗಿಸಿ ತನುಮನ ಪ್ರಾಣವ
ಸಮತಾ ವಾದವ ಮೆರೆಸಲಿಕೆಂದು
ಪ್ರಾಣವ ತೆತ್ತ ಭವ್ಯಾತ್ಮರಿಗೆ ||೧||

ಶರಣೆಂಬೊ ಪದದ ಋಣವ ತೀರಿಸಲು
ತನುವಿನ ಚರ್ಮದಿ ಕೆರಹನು ಮಾಡಿ
ಗುರು ಬಸವಣ್ಣಗೆ ಅರ್ಪಿಸಿದಂತಹ
ಅಪ್ರತಿಮ ತ್ಯಾಗಿ ಹರಳಯ್ಯ ಶರಣಗೆ ||೨||

ಶರಣನ ಚರ್ಮದಿ ಮಾಡಿದ ಜೋಡುಗಳ
ಹಮ್ಮಿನಿಂ ಮೆಟ್ಟಿ ಪರಿತಾಪ ಪಟ್ಟು
ಕ್ಷಮೆಯನು ಯಾಚಿಸಿ ಹರಳಯ್ಯ ಪುತ್ರಗೆ
ಮಗಳನು ಕೊಟ್ಟ ಮಧುವಯ್ಯ ಶರಣಗೆ ||೩||

ತತ್ತ್ವದ ಸ್ಥಾಪನೆಗೆ ಪ್ರಾಣವ ಪಣಕಿಟ್ಟು
ಎಳೆ ಹೂಟೆ ಶಿಕ್ಷೆಯ ನಗುತಲಿ ಸ್ವಾಗತಿಸಿ
ಸಮತಾ ಧ್ವಜವ ಧೈರ್ಯದಿ ಹಾರಿಸಿದ
ಕ್ರಾಂತಿಕಾರ ತರುಣ ಶೀಲವಂತಯ್ಯನಿಗೆ ||೪||

ಕಲ್ಯಾಣ ಕ್ರಾಂತಿಯ ತಾರೆಗಳಾಗಿ
ಕಲ್ಯಾಣ ಸ್ಥಾಪನೆಗೆ ಬಲಿದಾನ ಗೈದು
ಬಸವ ಧರ್ಮವ ಉಜ್ವಲಗೊಳಿಸಿದ
ಹುತಾತ್ಮರಾದ ತ್ರೈ ಶರಣರಿಗೆ ||೫||

ನವರಾತ್ರಿಯಲ್ಲಿ ವಚನ ಲೇಖನ ವ್ರತ

ದಶಹರ (ದಸರಾ) ಹಬ್ಬದಲ್ಲಿ ದಿನಾಲು ಒಬ್ಬೊಬ್ಬ ಶರಣರ ಜೀವನ ಚರಿತ್ರೆ ಪಾರಾಯಣ ಮಾಡುವುದರ ಜೊತೆಗೆ ವಚನ ಲೇಖನ ವ್ರತ ಕೈಗೊಳ್ಳಬೇಕು. ಪ್ರತಿಪದೆಯಿಂದ ನವಮಿಯವರೆಗೆ ಎಷ್ಟು ಸಾಧ್ಯವೋ ಅಷ್ಟು ವಚನಗಳನ್ನು ಬಿಳಿ ಹಾಳೆಯ ಚೌಕಾಕಾರದ ತುಂಡುಗಳಲ್ಲಿ ಬರೆದು ಇಡಬೇಕು. ಮೇಲೆ ವಚನಕಾರರ ಹೆಸರು, ಕೆಳಗೆ ಪ್ರತಿ ಮಾಡಿದವರ ಹೆಸರು ಬರೆದು ವಿಜಯ ದಶಮಿಯಂದು ಗುರು-ಹಿರಿಯರು, ಬಂಧು-ಮಿತ್ರರನ್ನು ಭೇಟಿಯಾಗಿ ಪರಸ್ಪರ ಶರಣು ಶರಣಾರ್ಥಿ ಹೇಳಿ, ಕಲ್ಲು ಸಕ್ಕರೆಯಂತಹ ಸಿಹಿಯೊಡನೆ ವಚನದ ಕಾಗದವನ್ನು ಸಮರ್ಪಿಸಬೇಕು. ಇದರಿಂದ ವಚನ ಲೇಖನ ಒಂದು ತಪಸ್ಸಾಗುವುದಲ್ಲದೆ ವಚನ ಸಾಹಿತ್ಯ ಪ್ರಚಾರವಾಗುವುದು. - ಮಾತಾಜಿ

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ಸಾಸಿರ
ಪಾರಾಯಣಕ್ಕೆ
ಗಾಯತ್ರಿ ಲಕ್ಷ ಜಪ ಸಮಬಾರದಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ
- ಸಿದ್ಧರಾಮೇಶ್ವರ

ವೀರ ಮಾತೆ ಅಕ್ಕನಾಗಲಾಂಬಿಕೆಯವರ ಸ್ತುತಿ

(ಕಳೆದ ತಿಂಗಳ ಸಂಚಿಕೆ (ಆಗಸ್ಟ್) ಯಲ್ಲಿ ಅಕ್ಕನಾಗಲಾಂಬಿಕೆಯ ಪರಿಚಯವನ್ನು ಕೊಡಲಾಗಿದೆ. ಈಗ ಅವರ 108 ಸ್ತುತಿಯನ್ನು ಕೊಡಲಾಗುತ್ತಿದೆ.) ರಚನೆ - ಮಾತಾಜಿ

01. ವೀರ ಮಾತೆ ಅಕ್ಕನಾಗಲಾಂಬಿಕಾ ತಾಯಿ ಶರಣು ಶರಣಾರ್ಥಿ
02. ಗುರು ಬಸವ ಸೋದರಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
03. ಮಾದರಸ ಪುತ್ರಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
04. ಮಾದಲಾಂಬಿಕಾ ತನುಜೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
05. ಶಿವದೇವಯ್ಯ ಸತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
06. ಗುರು ಬಸವಣ್ಣನ ಕರ ಕಮಲ ಸಂಜಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
07. ಚನ್ನಬಸವೇಶನ ಜನ್ಮದಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
08. ವೀರ ಮಾತೆ ಧೀರ ಮಹಿಳೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
09. ವಚನ ವಾಙ್ಮಯ ರಕ್ಷಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
10. ಸ್ತ್ರೀ ಕುಲ ಕಣ್ಮಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
11. ಮಹಾಮನೆಯ ಮಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
12. ಪರಮ ದಾಸೋಹ ಮೂರ್ತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
13. ಶರಣ ಸಂಕುಲದ ಅಕ್ಕರೆಯ ತಾಯಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
14. ನೀಲಾಂಬಿಕಾ ತಾಯಿಗೆ ಹಾಲೂಟವನ್ನಿಕ್ಕಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
15. ದಿವ್ಯಾನುಭಾವಿ ದಿವ್ಯ ಚೇತನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
16. ಶಿಖಾ ಚಕ್ರವ ಭೇದಿಸಿ ಶಿವನೆ ತಾನಾದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
17. ಕಾಯ ಜೀವದ ಭ್ರಾಂತಿ ತೊಡೆದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
18. ಧರ್ಮಪ್ರಚಾರದ ಧೀಮಂತ ಯೋಗಿಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
19. ಅಂಗಗುಣಗಳ ಅಳಿದುಕೊಂಡ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
20. ಅರಿಷಡ್ವರ್ಗಗಳ ಮೆಟ್ಟಿನಿಂದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
21. ಬಸವ ಧರ್ಮದ ಕೀರ್ತಿಪತಾಕೆ ಹಾರಿಸಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
22. ಅನುಭವ ಮಂಟಪದ ಅಮರಜ್ಯೋತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
23. ಧರ್ಮಾಚಾರ ವಿಖ್ಯಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
24. ಅಷ್ಟಮದಂಗಳ ಲಿಂಗಭಾವದಿ ಗೆಲಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
25. ಉಳವಿ ಪುರವಾಸಿನಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
26. ಬಸವ ತತ್ತ್ವದ ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
27. ಪರಮ ಪರಿಣಾಮಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
28. ಪರಿಶುದ್ಧ ಚೇತನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
29. ಬಸವ ಲಿಂಗ ಧ್ಯಾನ ನಿರತ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
30. ಸತ್ಯ ಸದಾಚಾರ ಸಂಪನ್ನೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
31. ಪರಂಜ್ಯೋತಿ ಸ್ವರೂಪಿಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
32. ಮಹಾಮನೆಯ ನಂದಾದೀಪ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
33. ಮಹಾಘನವ ವೇಧಿಸಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
34. ಪುಣ್ಯದ ಮಹಾಪುಂಜ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
35. ಪರಮ ಪಾವನ ಮೂರ್ತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
36. ಅಚ್ಚ ಪ್ರಸಾದಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
37. ನಿಚ್ಚ ಪ್ರಸಾದಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
38. ಸಕಲ ಸದ್ಗುಣ ಸಂಪನ್ನೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
39. ಅಪ್ರತಿಮ [illegible] ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
40. ಇಹದಲ್ಲಿ ಸುಖಿ ಪರದಲ್ಲಿ ಪರಿಣಾಮಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

41. ಗುರು ಲಿಂಗ ಜಂಗಮ ಪ್ರೇಮಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
42. ಪ್ರಸಾದವಲ್ಲಿ ಪರಿಣಾಮಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
43. ಅಂಗದಲ್ಲಿ ಆಚಾರ ಸಂಪನ್ನೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
44. ತನುವಿನಲ್ಲಿ ನಿರ್ಮೋಹಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
45. ಮನವಲ್ಲಿ ನಿರಹಂಕಾರಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
46. ಚಿತ್ತದಲ್ಲಿ ನಿರಪೇಕ್ಷೆಯುಳ್ಳ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
47. ಪ್ರಾಣದಲ್ಲಿ ನಿರ್ಭೀತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
48. ಭಾವದಲ್ಲಿ ದಿಗಂಬರೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
49. ಪರಮಾನಂದ ಪ್ರವೀಣೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
50. ಬಸವ ಪಾದ ಪದ್ಮಾರಾಧಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
51. ಬಸವ ಧರ್ಮದ ಪ್ರಭೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
52. ವೀರ ಗಣಾಚಾರಿಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
53. ಮುರುಗೋಡಿನಲ್ಲಿ ವೈರಿಯ ಸದೆ ಬಡಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
54. ಲಿಂಗಾಯತ ಧರ್ಮ ಉಳಿಸಿದ ಮಂಗಳಾಂಗಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
55. ಅಷ್ಟಾವರಣ ಸಂಪನ್ನೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
56. ಷಡಾಚಾರ ಪ್ರವೀಣೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
57. ಷಟಸ್ಥಲ ಸಿದ್ಧಿ ಪೂರ್ಣೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
58. ನಿಷ್ಕಲಂಕ ನಿಜ ಮುಕ್ತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
59. ಬಸವ ತತ್ವದ ಚಿತ್ಪ್ರಭೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
60. ಅಶ್ವಾರೂಢ ಸಂಚಾರಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
61. ಸಶಸ್ತ್ರಧಾರಿಣಿ ವೀರಮಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
62. ಅರಿವಿನ ವಾರಿಧಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
63. ಕಲ್ಯಾಣಪುರ ಕಣ್ಮಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
64. ಜೀವನ್ಮುಕ್ತ ನಿಲುವಿನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
65. ಶರಣ ಸಂಗ ಪ್ರಿಯೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
66. ಸದ್ಧರ್ಮಪೂರ್ಣ ಚೇತನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
67. ನಿರವಯ ಬಯಲ ಪ್ರಸಾದಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
68. ನಿರ್ಲಿಪ್ತ ನೀರತಾವರೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
69. ಲಿಂಗಪ್ರಸಾದ ಪರಿಣಾಮಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
70. ಜಂಗಮ ಪ್ರಸಾದ ಸಂತೃಪ್ತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
71. ಪಾದೋದಕ ಪ್ರಸಾದ ಗ್ರಾಹಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
72. ಮಹಿಳೆಯರ ಆತ್ಮಬಲ ವರ್ಧಿಸುವ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
73. ಕಾಯಕ ಪರಿಣಿತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
74. ದಾಸೋಹಭಾವ ಸಂಪನ್ನೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
75. ಲಿಂಗಾಚಾರ ನಿಷ್ಠಾವಂತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
76. ಸದಾಚಾರ ಸಂಯುಕ್ತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
77. ಶಿವಾಚಾರ ಸಾಧಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
78. ಗಣಾಚಾರ ಬೋಧಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
79. ಭೃತ್ಯಾಚಾರ ನಿರತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
80. ತ್ರಿಕರಣ ಶುದ್ಧ ಚೇತನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
81. ಕಾಯದ ಕಳವಳವ ಕಳೆದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
82. ಮನದ ಮಾಯೆಯ ಮೆಟ್ಟಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
83. ಜೀವದ ಜಂಜಡವ ಗೆಲಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ

84. ಪರಮಾನಂದವ ಪಡೆದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
85. ದಿವ್ಯ ಸಾತ್ವಿಕ ಮೂರ್ತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
86. ಲಿಂಗಾಂಗಯೋಗ ಪ್ರವೀಣೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
87. ಸ್ವಾನುಭಾವದ ದಿವ್ಯಮೂರ್ತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
88. ಪುಣ್ಯ ಕರ್ಮದ ಪುಂಜ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
89. ಚಿದಮೃತಧಾರೆಯಲ್ಲಿ ಮಿಂದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
90. ವೀರ ಕಂಕಣ ಧಾರಿಣಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
91. ಪರಮ ಪ್ರಸನ್ನ ಮೂರುತಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
92. ತನುಗುಣವಳಿದು ಪ್ರಾಣ ಲಿಂಗಿಯಾದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
93. ಮನಗುಣವಳಿದು ಭಾವ ಲಿಂಗಿಯಾದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
94. ಭಾವ ಭ್ರಮೆಯಳಿದು ಪರಮಾನಂದ ಪ್ರಭೆಯಾದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
95. ನಿಃಕಾಮದ ಭಸ್ಮವ ಧರಿಸಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
96. ಸಮ್ಯಕ್ ದೃಷ್ಟಿಯ ರುದ್ರಾಕ್ಷಿಯ ಹೊದ್ದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
97. ನಿಜವನುಂಡು ನಿತ್ಯ ತೃಪ್ತಳಾದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
98. ಸುಜ್ಞಾನ ಪ್ರಭೆಯೊಳಗೆ ಸುಳಿದಾಡಿದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
99. ವಿವೇಕ ಜ್ಞಾನದ ವಾರಿಧಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
100. ದಿವ್ಯಾನಂದದ ಸಾಗರ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
101. ಲೋಕದಲ್ಲಿದ್ದು ಲೋಕವಗೆದ್ದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
102. ಲೋಕಾಚರಣೆಯ ಅತಿಗಳೆದ ನಿಸ್ಸೀಮ ಶರಣೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
103. ಬಸವ ತಂದೆಯ ಗುರು ಮಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
104. ಬಾಳೇ ಹೊನ್ನೂರು ಪೀಠ ಸಂಸ್ಥಾಪಕಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
105. ರುದ್ರ ಮುನೀಶ್ವರ ಪೀಠದಾತೆ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
106. ಸುಕ್ಷೇತ್ರ ತರೀಕರೆ ಪುರವಾಸಿನಿ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
107. ಉರಿಯುಂಡ ಕರ್ಪೂರವಾದ ಲಿಂಗೈಕ್ಯ ಚೇತನ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ
108. ನಿರವಯಲ ಬಯಲ ಬೆರೆದ ಅಕ್ಕನಾಗಲಾಂಬಿಕಾ ಶರಣು ಶರಣಾರ್ಥಿ

|| ಶರಣು ಶರಣಾರ್ಥಿ ||

ಶರಣ ವಂದನೆ

ಶರಣರ ಚರಿತ್ರೆಯ ಪಾರಾಯಣ ಮತ್ತು ಸ್ತುತಿಯನ್ನು ಪ್ರತಿಪದೆಯಿಂದ ನವಮಿಯವರೆಗೆ ಮಾಡಬೇಕು. ವಿಜಯ ದಶಮಿಯಂದು ಬಸವ ಧರ್ಮ ವಿಜಯೋತ್ಸವ ಆಚರಿಸಬೇಕು. ಅಂದು ಶರಣ ಬಂಧುಗಳು ಒಂದೆಡೆ ಸೇರಿ ಶರಣರಿಗೆ ಶರಣಾರ್ಥಿ ಎಂಬ ಕಾರ್ಯಕ್ರಮ ನಡೆಸಬೇಕು. ಅದಕ್ಕಾಗಿ ಈ ಸಂಚಿಕೆಯಲ್ಲಿ ಶರಣರ ಹೆಸರಗಳನ್ನು ಪ್ರಕಟಿಸಲಾಗಿದೆ.

ಶರಣು ಶರಣಾರ್ಥಿ

ಶರಣ ಧರ್ಮದಾತ ಶ್ರೀಗುರು ಬಸವ
ಕಾರಣಿಕ ಚೇತನ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ || ಶರಣು ಶರಣಾರ್ಥಿ ||

ಚಿನ್ಮಯ ಜ್ಞಾನಿ ಚನ್ನಬಸವಣ್ಣ
ಉನ್ನತ ಯೋಗಿ ಚನ್ನಬಸವಣ್ಣ
ಷಟಸ್ಥಲ ಪರಿಣಿತ ಚನ್ನಬಸವಣ್ಣ
ಶರಣೆಂಬೆ ನಾ ಗುರು ಚನ್ನಬಸವಣ್ಣ || ಶರಣು ಶರಣಾರ್ಥಿ ||

ವ್ಯೋಮಕಾಯ ಸಿದ್ಧಶ್ರೀ ಪ್ರಭುದೇವ
ಶೂನ್ಯ ಪೀಠಾರೋಹಿ ಶ್ರೀ ಪ್ರಭುದೇವ

Digitalized by e-Sahithya Documentation Forum
Sponsored by Sarayu Foundation Trust

ಜಂಗಮ ಜ್ಯೋತಿ ಶ್ರೀ ಪ್ರಭುದೇವ
ಶರಣೆಂಬೆ ನಾ ಓಂ ಗುರು ಪ್ರಭುದೇವ || ಶರಣು ಶರಣಾರ್ಥಿ ||

ಕಾಯಕಯೋಗಿ ಸಿದ್ಧರಾಮೇಶ್ವರ
ಪರೋಪಕಾರಿ ಸಿದ್ಧರಾಮೇಶ್ವರ
ಶರಣ ಗಣ ಜ್ಯೋತಿ ಸಿದ್ಧರಾಮೇಶ್ವರ
ಶರಣೆಂಬೆ ನಾ ಗುರು ಸಿದ್ಧರಾಮ || ಶರಣು ಶರಣಾರ್ಥಿ ||

ವೀರ ವಿರಾಗಿಣಿ ಅಕ್ಕಮಹಾದೇವಿ
ದಾರ್ಶನಿಕ ಕೋಗಿಲೆ ಅಕ್ಕಮಹಾದೇವಿ
ಸ್ತ್ರೀಕುಲ ಕಣ್ಮಣಿ ಅಕ್ಕಮಹಾದೇವಿ
ಶರಣೆಂಬೆ ನಾ ಅಕ್ಕಮಹಾದೇವಿ || ಶರಣು ಶರಣಾರ್ಥಿ ||

ಶರಣಗಣ ವೀರ ಶ್ರೀ ಮಾಚಿದೇವ
ಮರಣಭಯ ರಹಿತ ಶ್ರೀ ಮಾಚಿದೇವ
ವಚನ ನಿಧಿ ರಕ್ಷಕ ಶ್ರೀ ಮಾಚಿದೇವ
ಶರಣೆಂಬೆ ನಾ ಗುರು ಮಾಚಿ ತಂದೆ || ಶರಣು ಶರಣಾರ್ಥಿ ||

ಹುತಾತ್ಮ ಚೇತನ ಶ್ರೀ ಹರಳಯ್ಯ
ಪಾವನಮೂರ್ತಿ ಶ್ರೀ ಹರಳಯ್ಯ
ಅರಿವಿನ ಮಾಣಿಕ್ಯ ಶ್ರೀ ಹರಳಯ್ಯ
ಶರಣೆಂಬೆ ನಾ ಹರಳಯ್ಯತಂದೆ ||ಶರಣು ಶರಣಾರ್ಥಿ||

ಧೀರ ಶರಣ ಮಾತೆ ಅಕ್ಕನಾಗಲಾಂಬಿಕೆ
ಪರಮ ದಾಸೋಹಿ ತಾಯಿ ನೀಲಾಂಬಿಕೆ
ಎಮ್ಮಯ ಬಂಧು ಬಳಗ ಶರಣ ಸಮೂಹ
ಶರಣೆಂಬೆ ನಾ ಸಕಲ ಪ್ರಮಥರಿಗೆ ||ಶರಣು ಶರಣಾರ್ಥಿ||

ಆದಿ ಶರಣರ ಸ್ಮರಣೆ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವದ 2ನೆಯ ದಿವಸ ಅಂದರೆ (13-10-2008) ಆದಿ ಶರಣರನ್ನು ಸ್ಮರಿಸಿಕೊಂಡು ಅವರಿಗೆ ಶರಣು ಸಲ್ಲಿಸುವ ಪವಿತ್ರ ಧಾರ್ಮಿಕ ವಿಧಿಯು ನಡೆಯುತ್ತದೆ. ಲಭ್ಯವಿರುವ ಶರಣರ ಹೆಸರುಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಷಟ್ ಸಂಜ್ಞೆಗಳು :

ಅಷ್ಟಾವರಣವು ಎಂಟು ಷಡಾಚಾರಗಳು ಆರು
ಷಟ್‌ಸ್ಥಲಗಳೂ ಆರು ಷಟ್‌ಸೂತ್ರಗಳು ಆರು
ಷಟ್‌ಶೀಲಗಳು ಆರು ಷಟ್‌ಕ್ರಿಯೆಗಳು ಆರು
ಷಟ್ ಸಂಜ್ಞೆಗಳು ಆರು ಎಂದು ನೆನೆಯುವೆನು ||

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತವತ್ಸಲ ಇಷ್ಟ ಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ||

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಲಿಂಗಾಯತ ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ

6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ತ್ವನಿಷ್ಠುರಿ ಅಂಬಿಗ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಾರಯ್ಯನವರಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ
27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು. ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೊಳಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಣ ಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರೆ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ
63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಣ ಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಪಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ, ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ಧಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111. ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113. ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114. ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115. ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116. ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117. ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118. ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119. ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120. ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121. ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122. ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123. ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124. ನಿಜಾನುಭಾವಿ ಸುಲಿಯ ಚಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125. ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127. ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129. ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130. ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131. ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132. ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133. ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134. ಬಾಲಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

135. ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136. ಬಾಹೂರ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137. ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138. ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139. ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140. ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141. ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142. ಮನಸಂಪ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143. ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144. ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145. ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146. ಮಹಾದೇವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
147. ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148. ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149. ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150. ಚೋಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
151. ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
152. ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153. ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154. ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155. ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156. ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157. ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158. ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160. ರೇಚವ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161. ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162. ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163. ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164. ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165. ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166. ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167. ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
168. ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169. ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170. ಶಿವನಾಗಮಯ್ಯ ಶರಣರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ
171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ಘವಣಿಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
191. ಮೊರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಸದ್ಯೋನ್ಮುಕ್ತಿ ಶರಣ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
200. ರೇವಣಸಿದ್ಧರ ಸುಪುತ್ರ ರುದ್ರಮುನಿ ದೇವರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ
201. ವೀರ ಶರಣ ಜಗದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
202. ಧೀರ ಶರಣ ಮಲ್ಲಿಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
203. ಹಿಪ್ಪರಿಗೆಯ ಶರಣ ಮಲ್ಲಿಕಾರ್ಜುನನಿಗೆ ಶರಣು, ಶರಣು ಶರಣಾರ್ಥಿ
204. ದಿಗಂಬರ ಮುಕ್ತಿ ಮುನಿ ಶರಣರಿಗೆ ಶರಣು, ಶರಣು ಶರಣಾರ್ಥಿ
205. ಸುಕುಮಾರ ಚೆನ್ನಬಸವೇಶ್ವರರಿಗೆ ಶರಣ, ಶರಣು ಶರಣಾರ್ಥಿ
206. ಶೂಲದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
207. ಹೊಡೆಹುಲ್ಲ ಬಂಕನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
208. ಇಂಡಿಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
209. ಗೊಬ್ಬೂರ ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
210. ಸೂಗರ ಚೆನ್ನವೀರೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
211. ಅಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
212. ಎಡೆ ಮಠದ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
213. ಕುಂಬಾರ ಗುಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
214. ಲಕ್ಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
215. ಚಾಂಗುಬಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
216. ಶಿವಭಕ್ತ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
217. ಲೆಂಕ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
218. ಸಪ್ಪೆ ಯಲ್ಲಮ್ಮದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
219. ಹಾಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
220. ಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

221. ಒಕ್ಕಲಿಗ ಮಾರಗೌಡ ಶರಣರಿಗೆ ಶರಣು, ಶರಣು ಶರಣಾರ್ಥಿ
222. ಒಳ್ಳಿಗಾವಿಯ ಗೊಗ್ಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
223. ಮೊರಟದ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
224. ರಾಗರಸಾಂಕ ಶರಣರಿಗೆ ಶರಣು, ಶರಣು ಶರಣಾರ್ಥಿ
225. ಶಿವರಾತ್ರಿ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
226. ಮುಸುಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
227. ಗರಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
228. ಪುಲಿಗೆರೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
229. ನಾಗನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
230. ಅಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
231. ಮಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
232. ಬ್ಯಾಳಿ ಬಸವೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
233. ಬಡಿಹೋರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
234. ಶಿವಯೋಗಿ ಮಲ್ಲರಸ ಶರಣರಿಗೆ ಶರಣು, ಶರಣು ಶರಣಾರ್ಥಿ
235. ಜಂಬೂರು ಮಹಾಕಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
236. ಅಮೋಘದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
237. ಢಂಕಣಿ ಕೋಟೆಯ ನೂರೊಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
238. ಓಲೆಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
239. ತಾಳಿಕೋಟೆಯ ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
240. ಇಳಿಹಾಳ ಬೊಮ್ಮಯ ಶರಣರಿಗೆ ಶರಣು, ಶರಣು ಶರಣಾರ್ಥಿ
241. ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
242. ತಂಗಟೂರು ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
243. ಗುಂಡ ಬ್ರಹ್ಮಯ ಶರಣರಿಗೆ ಶರಣು, ಶರಣು ಶರಣಾರ್ಥಿ
244. ರೇವಯ್ಯದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
245. ಸುರಗಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
246. ದಾಸೋಹ ರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
247. ವನಿಪುರದ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
248. ವೆಲ್ಲಗೊಂಡದ ಮಹಾದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
249. ಪಡಿಹಾರಿ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
250. ರುದ್ರಪಶುಪತಿ ಶರಣರಿಗೆ ಶರಣು, ಶರಣು ಶರಣಾರ್ಥಿ
251. ವಿಜಯಪುರದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
252. ಉರಗ ರಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
253. ಕನಕದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
254. ಕಸ್ತೂರಿಯ ಸಾರಣೆಯ ಉದ್ಭಟಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
255. ಕಂಬಿಕಾರ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
256. ಕಾಖಂಡಕಿಯ ಶಿವಮುಗ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
257. ಕುರುಗೋಡದ ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
258. ಗಂಡುಗತ್ತಿಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
259. ಚಿಕ್ಕಣಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
260. ಶ್ವೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
261. ಸಕಲ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
262. ಸನ್ಯಾಸಿ ಮಾಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
263. ಶಿರಿವಾರದ ಬಂಕಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ

264. ಸಗರದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
265. ಸಾತ್ವಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
266. ಸಾಹಿತ್ಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
267. ಸಿಂಗೀ ಬೊಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
268. ಸಿಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
269. ಸಿದ್ಧ ಬುದ್ಧಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
270. ಸುಂಕದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
271. ಸೆಬ್ಬಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
272. ಶೆಟ್ಟಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
273. ಶೆಟ್ಟಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
274. ಸೋಮರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
275. ಹಸಿಯ ಮಸಕದ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
276. ಹಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
277. ಹಟಕೇಶಿರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
278. ಹೂವಿನ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
279. ಕ್ಷೇತ್ರನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
280. ಶಿವಕರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
281. ನಂದೀಶ ಶರಣರಿಗೆ ಶರಣು, ಶರಣು ಶರಣಾರ್ಥಿ
282. ನಂದೀಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
283. ತಂಡೇಶ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
284. ತಿಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
285. ಬೆಟ್ಟಂಬಲೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
286. ತರನಳ್ಳಿ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
287. ದಾಸೋಹದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
288. ಮಳೆಯ ರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
289. ಧನಸೇನ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
290. ಧೂಪದ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
291. ವೀರಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
292. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
293. ಪ್ರಸಾದದ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
294. ಬಾಗುಳಿಯ ಕೇಶವರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
295. ಬಾಣಸಿಗ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
296. ಬೆಡಗಿನ ಸುಂದರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
297. ಬಾಲ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
298. ಮಾದರ ದೊಡ್ಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
299. ಮೂರು ಜಾವದ ದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
300. ವಿರುಪಾಕ್ಷಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
301. ಕಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
302. ಶಿವಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
303. ಶಿವಯೋಗಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
304. ಶಿವರಾತ್ರಿ ಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
305. ಸಗರದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
306. ಸದ್ಯೋಜಾತ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

307. ಸಾಂಕ್ಯನಾರು ಶರಣರಿಗೆ ಶರಣು, ಶರಣು ಶರಣಾರ್ಥಿ
308. ಸೌಂದರ್ಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
309. ಅಜ್ಜದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
310. ಅಣ್ಣಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
311. ಅಮಾತ್ಯ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
312. ಅಮೃತನಾಥಯ್ಯ ಶರಣರಿಗ ಶರಣು, ಶರಣು ಶರಣಾರ್ಥಿ
313. ಅವಗಡದ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
314. ಅಲಂಕಾರ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
315. ಅಂಗರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
316. ಆಚಾರ್ಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
317. ಶಿಗುರಿಯ ಚಾವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
318. ಸಿದ್ದವೀರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
319. ಪುಪ್ಪದ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
320. ಇಡುವನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
321. ಇಂಡೆ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
322. ಉಘೆಯ ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
323. ಏಕಾಂತದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
324. ಕಲ್ಲಿನಾಥ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
325. ಕಾಜೀ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
326. ಕಾಲಾಗ್ನಿರುದ್ರ ಶರಣರಿಗೆ ಶರಣು, ಶರಣು ಶರಣಾರ್ಥಿ
327. ಕಾಳಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
328. ಕನ್ನವ ವೀರಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
329. ಕಿರಾತ ಶರಣರಿಗೆ ಶರಣು, ಶರಣು ಶರಣಾರ್ಥಿ
330. ಕುಪ್ಪಸದ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
331. ಕುರುಕಾಂಟ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
332. ಕೆರೆಯೂರ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
333. ಕೆಲವೂರು ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
334. ಕೊಟಕದ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
335. ಕೋಟಿ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
336. ಗಂಗ ಮಲ್ಲಯ್ಯ ಶರಣರಿಗ ಶರಣು, ಶರಣು ಶರಣಾರ್ಥಿ
337. ಗಂಗಾಪುರದ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
338. ಗೋಣೆಯ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
339. ಗೊಲ್ಲ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
340. ಗೋಯಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
341. ಗೌರಾರ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
342. ಚಾರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
343. ಚಾಳುಕ್ಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
344. ಚಿಕ್ಕಬಸವ ಶರಣರಿಗೆ ಶರಣು, ಶರಣು ಶರಣಾರ್ಥಿ
345. ಚಿಕ್ಕ ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
346. ಚಿಪ್ಪನೂರಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
347. ಚಿಂಕರ ಮಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
348. ಚೇಟಲ ನೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
349. ಜಗದಾರಾಧ್ಯ ಕರಸ್ಥಲದ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ

350. ಜಟ್ಟಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
351. ಜತ್ತರಟದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
352. ಜೋಹಿರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
353. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
354. ದಶಗುಣ ಸಿಂಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
355. ದಂಡೀ ಪ್ರಸನ್ನ ಬಸವ ಶರಣರಿಗೆ ಶರಣು, ಶರಣು ಶರಣಾರ್ಥಿ
356. ದಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
357. ದಾನ ಕೇಶಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
358. ದೇವರ ಪಂಡಿತ ಶರಣರಿಗೆ ಶರಣು, ಶರಣು ಶರಣಾರ್ಥಿ
359. ಮಾರಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
360. ದ್ರೋಣೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
361. ಧವಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
362. ಡವಳೇಶ್ವರ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
363. ದುರ್ಜಟ ಕೇಶ ಶರಣರಿಗೆ ಶರಣು, ಶರಣು ಶರಣಾರ್ಥಿ
364. ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
365. ನಾಳ್ಪೊತ್ತಿನ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
366. ನಿಜಭಾವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
367. ನಿತ್ಯ ನಿಯಮದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
368. ನಿರಂಜನದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
369. ನಿರಾಲಂಬದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
370. ನಿರಾಳದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
371. ನೆಲವಿಗೆ ಚೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
372. ನಿರ್ಧನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
373. ನಿರ್ಮಿಷ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
374. ನಿರ್ವತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
375. ಪ್ರಸಾದಿ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
376. ಪರಮ ಹಂಸ ಶರಣರಿಗೆ ಶರಣು, ಶರಣು ಶರಣಾರ್ಥಿ
377. ವಲ್ಲಭ ರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
378. ಕಲ್ಲೇಶ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
379. ಪುಷ್ಪದ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
380. ಪರ್ವತನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
381. ಪಂಚಾಗ್ನಿ ಸೂರ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
382. ಪಂಚಾಕ್ಷರಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
383. ಪಾಕದ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
384. ಪಾದಾಲಕೆ ಶರಣರಿಗೆ ಶರಣು, ಶರಣು ಶರಣಾರ್ಥಿ
385. ಪಾಂಡ್ಯನಾಯಕ ಶರಣರಿಗೆ ಶರಣು, ಶರಣು ಶರಣಾರ್ಥಿ
386. ಪೋತಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
387. ಪೇದಿಗೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
388. ಪೊನ್ನ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
389. ಪರಾರೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
390. ಬಡಿವರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
391. ಬಲಗರ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
392. ಬಸವರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

393. ಬಿಸಿನೆಲೇಸದ ದೇವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
394. ಬಾಚರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
395. ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
396. ಬಿಜ್ಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
397. ಬೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
398. ಬುಡ್ಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
399. ಬೆಟ್ಟದ ದೇವರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
400. ಬೈತಲೆಯ ಮಾರಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
401. ಬೊಮ್ಮಿ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
402. ಬಾಸರ ದೇವಯ್ಯ ಶರಣರಿಗೆ ಶರಣು,ಶರಣು ಶರಣಾರ್ಥಿ
403. ಮಹಾ ಕಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
404. ಮಹಾಬಲದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
405. ಮಾದಿರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
406. ಮಾಯಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
407. ಮಿಂಡ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
408. ಮುದ್ದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
409. ಮುಷ್ಕಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
410. ಮುಂಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
411. ಮೂಗ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
412. ಮೂಲ ಪ್ರಣಮಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
413. ಮೇಧಾವಿ ಉದ್ರುಕ್ತ ಶರಣರಿಗೆ ಶರಣು, ಶರಣು ಶರಣಾರ್ಥಿ
414. ಮೇಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
415. ಮೋಳಿಗೆಯ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
416. ಮೌಕ್ತಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
417. ರತ್ನದ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
418. ರಾಚಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
419. ರಾಚಾರ್ದ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
420. ರಾಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
421. ರಾಮೇಸಹಣ ಶರಣರಿಗೆ ಶರಣು, ಶರಣು ಶರಣಾರ್ಥಿ
422. ರುದ್ರಿಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
423. ಲಿಂಗ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
424. ಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
425. ವತ್ತೇಶ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
426. ವರಗೊಂಡ ಚಕ್ರವರ್ತಿ ಶರಣರಿಗೆ ಶರಣು, ಶರಣು ಶರಣಾರ್ಥಿ
427. ವೀರ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
428. ವೀರ ಕೇದಾರ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
429. ವೀರ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
430. ವೀರಚಾಕಿ ರಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
431. ವೀರನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
432. ವೀರ ಶಿವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
433. ವಿರೂಪ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
434. ವೀರ ಘಂಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
435. ವೀರ ಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ

436. ವೀರ ಪೊಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
437. ವೆಡ್ಡ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
438. ವೇರಲದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
439. ಮೇಗಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
440. ಶೇಖರ ಶೆಟ್ಟಿ ಶರಣರಿಗೆ ಶರಣು, ಶರಣು ಶರಣಾರ್ಥಿ
441. ಶಂಕರ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
442. ಶಾಂತರಾಮ ಶರಣರಿಗೆ ಶರಣು, ಶರಣು ಶರಣಾರ್ಥಿ
443. ಶಾರ್ದೂಲ ಶರಣರಿಗೆ ಶರಣು, ಶರಣು ಶರಣಾರ್ಥಿ
444. ಶಿಖರೇಶ್ವರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
445. ಶಿವಕುಮಾರ ಶರಣರಿಗೆ ಶರಣು, ಶರಣು ಶರಣಾರ್ಥಿ
446. ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
447. ಶಿವಪೂಜೆಯ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
448. ಶಿವ ಮುದ್ರೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
449. ಶಿವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
450. ಶಿವರಾತ್ರಿ ಅಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
451. ಅಕ್ಕನಾಗಲಾಂಬಿಕಾ ಪತಿ ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
452. ಕೇಶ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
453. ಕನ್ನದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
454. ಉತ್ತಮಾಂಗದ ಕೇಶ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
455. ಸವರದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
456. ಕದಿರೆ ರೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
457. ವೀರ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
458. ಉರುಗದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ .
459. ಸೊಡ್ಡಲ ಮಲ್ಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
460. ನಿಜ ಭಾನು ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
461. ನಿತ್ಯ ನೇಮದ ಮೈಲಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
462. ದೇವರ ದಾಸಿ ಶರಣರಿಗೆ ಶರಣು, ಶರಣು ಶರಣಾರ್ಥಿ
463. ಸೋಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
464. ಗೌಳ ಬಟ್ಟಾರಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
465. ಪಿಟ್ಟವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
466. ಗೋವಿಂದ ಬಟ್ಟಾರಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
467. ಶ್ವಪಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
468. ಸಾಮವೇದಿ ಶರಣರಿಗೆ ಶರಣು, ಶರಣು ಶರಣಾರ್ಥಿ
469. ಅಮುಗಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
470. ಕಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
471. ಮಾರಗೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
472. ಮಲೆಯ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
473. ಮಲೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
474. ಬಿಲ್ಲ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
475. ವೇಮನಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
476. ಚಿಕ್ಕ ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
477. ನರವಲಿ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
478. ಕಂಭಾವಿ ಭೋಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

479. ವೀರಚಾಕಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
480. ಮಾಟ ಕೂಟದ ಮಲ್ಲಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
481. ಅಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
482. ನೀಡುವನಾಥ ತಿಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
483. ಮಲ್ಲಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
484. ಗೊಗ್ಗ ಮೊರೆ ಕೇಲಕ್ಕರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
485. ಚಾಕಲಿದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
486. ಉದ್ಭಟ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
487. ರೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
488. ಜೂಟೂರ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
489. ವೀರ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
490. ಸಾಂಖ್ಯ ದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
491. ಹೊಟ್ಟಲ ಕೆರೆಯ ವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
492. ನಾಮಾಕ್ಯದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
493. ಬಿಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
494. ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
495. ವೀರ ಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
496. ವೀರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
497. ಭಾನುದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
498. ಕೋಹರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
499. ಕಾಮಲ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
500. ಸಾನೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
501. ರಾಜನ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
502. ಕಪಿಲೆಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
503. ಜಕ್ಕೀರ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
504. ಖಿಡ್ಗದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
505. ಮಿಂಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
506. ಸಾಹಿತ್ಯ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
507. ಚಿಮ್ಮುಲಿಗೆಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
508. ಮೇಧಾವಿ ರುದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
509. ಹೆರೂರ ಹೆಣ್ಣು ಶರಣೆಗೆ ಶರಣು, ಶರಣು ಶರಣಾರ್ಥಿ
510. ವಹಿಲದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
511. ಬೊಪ್ಪಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
512. ಪಲ್ಲಮ ರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
513. ಗೊಲ್ಲಾಳ ರಾಯನು ಶರಣರಿಗೆ ಶರಣು, ಶರಣು ಶರಣಾರ್ಥಿ
514. ಇಳಿಹಾಳ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
515. ರಾಮಲಿಂಗೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
516. ನಾದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
517. ಬಾದರಾಯಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
518. ಬೋದ ರಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
519. ಶೂಲಾಯುಧಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
520. ಆರಿಯಮ ರಾಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
521. ಹಂಪೆ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
522. ವೆಂಗಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
523. ವೀರಬೊಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

524. ಪ್ರಸಾದಿ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
525. ಏಲೇಶ್ವ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
526. ಚಾಳೂಕ್ಯದ ಭೋಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
527. ಚೆಟ್ಟಿಗ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
528. ಗುರು ಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
529. ದರೀಪುರದ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
530. ನಿಂಗುಳಿಗೆ ವೈಜಕ್ಕವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
531. ಶಿವ ಮುದ್ದ ದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
532. ಭಂಡಾರ ಬಸವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
533. ಕಾಳ್ವೊರತೆಯ ಬಲಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
534. ಶ್ರೀಕೋಟಿ ಪಿಳ್ಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
535. ಸರವೂರ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
536. ಬೆರಳಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
537. ಆತ್ಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
538. ಕೊಲ್ಲಿಪಾಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
539. ಗೋವಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
540. ಗಣೇಶ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
541. ವೀರ ಗುಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
542. ಮಾರಗೋವಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
543. ನೆಲವಿಗೆ ಶಾಂತಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
544. ಅಜ್ಞದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
545. ಅನುಮಿಷಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
546. ಸಕಳೇಶ ಗೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
547. ವರ್ತೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
548. ಧವಳಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
549. ಬೊಂತಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
550. ಧವಳೇಶ ಶರಣರಿಗೆ ಶರಣು, ಶರಣು ಶರಣಾರ್ಥಿ
551. ಕಂಗಳ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
552. ಜಂತರಾವದ ಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
553. ಶ್ರೀ ಗುರು ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
554. ಸೂರಸಾನಿ ಶರಣರಿಗೆ ಶರಣು, ಶರಣು ಶರಣಾರ್ಥಿ
555. ಧೂಳೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
556. ಮರುಳ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
557. ಕೈ ಕೂಲಿಯ ಚಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
558. ಕಲ್ಲುಗೆಲಸದ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
559. ಸೂಳೆ ನಂಬಿಯಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
560. ಸೂಳೆ ಬೊಮ್ಮಕ್ಕ ಶರಣೆಗೆ ಶರಣು, ಶರಣು ಶರಣಾರ್ಥಿ
561. ಸೂಳೆ ಚಾಕಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
562. ಸೂಳೆ ಪದ್ಮಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
563. ಸೂಳೆ ಬೊಪಲದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
564. ಚಂದದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
565. ಗುಗ್ಗುಳದ ಧವಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
566. ವರಾಕಿ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
567. ಹಣತೆ ಲಕ್ಕರಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
568. ಕೊಳಲಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

Digitalized by e-Sahithya Documentation Forum
Sponsored by Sarayu Foundation Trust

569. ಮನ್ನಣಿಗೆ ಮಾಹಾದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
570. ಕಂಬಿಯ ರೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
571. ಎಡೆಮಠದ ನಾಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
572. ಕಂಥೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
573. ಲದ್ದೆ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
574. ಮೊಗವಾಡದ ಮಹದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
575. ಯೋಗಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
576. ಗಿರುಗಟೀಶ್ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
577. ಹೂಲಿ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
578. ಹೂಲಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
579. ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
580. ಹಾದರದ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
581. ಬಿಲ್ಲಮರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
582. ಬೋಗಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
583. ಕೊಡದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
584. ಮೌನದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
585. ಕೋರಿ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
586. ಕೊಂಡೆಯ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
587. ಕೊಂಡಗುಳಿ ಕೇಶರಾಜ ಶರಣರಿಗೆ ಶರಣು, ಶರಣು ಶರಣಾರ್ಥಿ
588. ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
589. ಸತ್ತಿಗೆ ಪಟ್ಟಪ್ಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
590. ಕುಮಾರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
591. ಸಾರಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
592. ನೀಲಲೋಚನೆಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
593. ಗುರು ಭಕ್ತೆ ಲಿಂಗಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
594. ಚಂದ್ರ ಮಹಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
595. ಮಲುಹಣ ದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
596. ಮಲುಹಣೆ ಶರಣೆಗೆ ಶರಣು, ಶರಣು ಶರಣಾರ್ಥಿ
597. ನಿಜಗುಣದೇವರು ಶರಣರಿಗೆ ಶರಣು, ಶರಣು ಶರಣಾರ್ಥಿ
598. ಹೂವಿನ ಮಾಚಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
599. ಮಲ್ಲಿಕಾರ್ಜುನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
600. ಹೆರೂರು ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
601. ಸಗರದ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
602. ಎರದಲೆಯಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
603. ಮುದನೂರು ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
604. ವೈಜಕ್ಕವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
605. ಬಲ್ಲವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
606. ಅಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
607. ಆದವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
608. ಅರಸವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
609. ವೀರ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
610. ನಿಂಬವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
611. ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
612. ಹಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

613. ಬೀರದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
614. ಬಿಜ್ಜಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
615. ಕಂದುಲಿಗೆ ನಾಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
616. ನಾಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
617. ಚಕ್ಕುಲಿಗೆ ನಾಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
618. ಸೇನಾಥದೇವರ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
619. ಹೂವಿನ ಬಾಚಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
620. ಬಾಚಲಾದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
621. ಸಿಂಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
622. ಸಾತ್ವಿಕ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
623. ಮಾಳಿಗೆ ನಿಜ ಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
624. ದೇವರಸ ಶರಣರಿಗೆ ಶರಣು, ಶರಣು ಶರಣಾರ್ಥಿ
625. ಕನ್ನಮ್ಮರಸಿ ಶರಣೆಗೆ ಶರಣು, ಶರಣು ಶರಣಾರ್ಥಿ
626. ದೇವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
627. ಸಕಲ ಆದಿ ಪ್ರಮಥ ಗಣಂಗಳಿಗೆ ಶರಣು, ಶರಣು ಶರಣಾರ್ಥಿ

ಮಂಗಲ

ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ ॥ ಪ ॥

ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ ॥ ಅ.ಪ ॥

ಕಲ್ಯಾಣವೆ ಪ್ರಣತೆಯಾಗಿ ಅದರೊಳು
ಭಕ್ತಿರಸವೆ ತೈಲವಾಗಿ
ಸದಾಚಾರದ ಬತ್ತಿ ಹಿಡಿದು ಬಸವಣ್ಣನೆಂಬ ಜ್ಯೋತಿ
ಮುಟ್ಟಲು ಪರಮ ಪ್ರಕಾಶವ ಚಲ್ಲವರಿದು ॥ 1 ॥

ಅಲ್ಲಮಪ್ರಭುದೇವ ಸುಜ್ಞಾನಿ
ಶ್ರೀ ಚನ್ನಬಸವಣ್ಣ
ವೀರವಿರಾಗಿಣಿ ಶ್ರೀ ಅಕ್ಕಮಹಾದೇವಿ
ಗುಡ್ಡಾಪುರ ದಾನಮ್ಮ ಸತ್ಯಕ್ಕೆ ಹಚ್ಚಿದ ಕಲ್ಯಾಣ ॥ 2 ॥

ಶ್ರೀ ಸಿದ್ಧರಾಮೇಶ್ವರ ಮಡಿವಾಳ
ಮಾಚಯ್ಯ ಕೇತಯ್ಯ
ಹರಳಯ್ಯ-ಮಧುವಯ್ಯ ಅಂಬಿಗರ ಚೌಡಯ್ಯ
ಒಕ್ಕಲಿಗ ಮುದ್ದಣ್ಣ ಅಮುಗಯ್ಯ ಹಚ್ಚಿದ ಕಲ್ಯಾಣ ॥ 3 ॥

ನೀಲಮ್ಮ ನಾಗಮ್ಮ ಮುಕ್ತಾಯಿ
ಶರಣೆ ಕಲ್ಯಾಣಮ್ಮ
ಅನುಭವ ಮಂಟಪದಿ ಲಿಂಗದೇವನ ನೆನೆದು
ಹಡಪದ ಅಪ್ಪಣ್ಣ ಲಿಂಗಮ್ಮ ಹಚ್ಚಿದ ॥ 4 ॥

ಮೋಳಿಗೆ ಮಾರಯ್ಯ ಆತನ ಸತಿ
ಜ್ಞಾನಿ ಗಂಗಾದೇವಿ
ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ಸತ್ಯಕ್ಕ
ಜೇಡರ ದಾಸಯ್ಯ ದುಗ್ಗಳೆ ಹಚ್ಚಿದ ಕಲ್ಯಾಣ ॥ 5 ॥

ಸದ್ಗುರು ಲಿಂಗಾನಂದರ ಸಂಕಲ್ಪದಿಂ
ಬಸವಾತ್ಮಜೆ ಮಾತೆಯು
ಕಾಯಕ ದಿನವಿಂದು ಕಲ್ಯಾಣ ಪರ್ವದಿ
ಸಚ್ಚಿದಾನಂದನ ಶರಣರ ಕೂಡಿಸಲು ॥ 6 ॥

Digitalized by e-Sahithya Documentation Forum
Sponsored by Sarayu Foundation Trust

ಓಂ ಶ್ರೀ ಗುರು ಬಸವಲಿಂಗಾಯ ನಮಃ



866666



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಏಳನೆಯ ಕಲ್ಯಾಣ ಪರ್ವ

2008ರ ಆಕ್ಟೋಬರ್ 12, 13 ಮತ್ತು 14 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 21ನೆಯ ಶರಣ ಮೇಳವು ಇದೇ 2008ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

''ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು''

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. ''ಕಾಯಕವೇ ಕೈಲಾಸ '' ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ ''ಕಲ್ಯಾಣ ಪರ್ವ''ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2008ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 7ನೆಯ ಕಲ್ಯಾಣ ಪರ್ವವನ್ನು 2008 ರ ಅಕ್ಟೋಬರ್ 12, 13 ಮತು 14 ರಂಧು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು - ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. **''ಪಾಷಂಡಿ ಭೂಮಿಯೊಳು ಶಿವಭಕ್ತಿಯುನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು''** ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 11ರ ರಾತ್ರಿಯಿಂದ ಅಕ್ಟೋಬರ್ 15 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 300 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (*F.D*) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ
ಬಸವ ಮಹಾಮನೆ, ಬಸವಕಲ್ಯಾಣ-585327, ಜಿಲ್ಲೆ-ಬೀದರ್
☎ : 08482 - 251921/252856

Digitalized by e-Sahithya Documentation Forum
Sponsored by Sarayu Foundation Trust

ವಚನಾಂಕಿತ ಬದಲು–ಪ್ರಮುಖ ಸಾಹಿತಿಗಳ ತೀವ್ರ ಆಕ್ರೋಶಕ್ಕೆ ಪ್ರತಿಕ್ರಿಯೆ

- ಹೆಚ್.ಎ.ಶರಣಪ್ಪ

ಹೆಸರು ನಮೂದಿಸಿದ ಶರಣರೆಲ್ಲರಿಗೂ ನನ್ನ ಹೃತ್ಪೂರ್ವಕ ಶರಣಾರ್ಥಿಗಳು. ನೀವುಗಳೆಲ್ಲಾ ಒಮ್ಮೆಲೇ ಒಟ್ಟಿಗೆ ಸೇರಿ ಒಂದೇ ದಿನ ಪೂಜ್ಯ ಶ್ರೀ ಮಾತೆ ಮಹಾದೇವಿಯವರ ಮೇಲೆ ಗದಾ ಪ್ರಹಾರ ಮಾಡಿದ್ದೀರಿ. ಈ ಒಗ್ಗಟ್ಟಿಗೇನು ಕಾರಣವಿರಬಹುದು ಎಂದು ಊಹಿಸಿದಾಗ ಒಂದು ಪರಮ ಸತ್ಯ ವ್ಯಕ್ತವಾಗುತ್ತದೆ. ನಿಮ್ಮೆಲ್ಲರ ಹಿಂದೆ ಕೆಲವು ಪ್ರಭಾವೀ ಮಠಗಳ ಕುಮ್ಮಕ್ಕೂ ಇದೆ ಎಂದು ಎಂತಹವರಿಗೂ ಅರಿವಾಗದೇ ಇರುವುದಿಲ್ಲ. ಈ ಸ್ಫೂರ್ತಿ ಸೆಲೆಗೆ ಏನಿರಬಹುದೆಂದು ಹುಡುಕಾಡಿದಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಸಾಮಾನ್ಯರಿಗೆ ಜೀವನವೆಂದರೆ ಅವಕಾಶಗಳ ನದಿ ಇದ್ದಂತೆ. ನೀವುಗಳೆಲ್ಲರೂ ಕೆಲವು ಶ್ರೀಮಂತ ಮಠಗಳನ್ನು ಓಲೈಸಲು ಬಕೆಟ್ ಹಿಡಿದಿದ್ದೀರೋ, ಚಮಚ ಹಿಡಿದಿದ್ದೀರೋ ಎಂಬುದು ಮುಖ್ಯ. ಯಾವುದನ್ನು ಹಿಡಿಯಬೇಕೆಂದು ನಿರ್ಧರಿಸುವವರು ನೀವೆ? ನೀವುಗಳೆಲ್ಲರೂ ವಿದ್ಯಾವಂತರಿರಬಹುದು, ಸಾಹಿತಿಗಳಿರಬಹುದಾದರೂ ಸಾಮಾನ್ಯ ಜನರಿಗಿಂತ ನೀವೇನೂ ದೊಡ್ಡವರಲ್ಲವೆನಿಸುತ್ತದೆ. ನೀವ್ಯಾರೂ ತತ್ವ ಸಿದ್ಧಾಂತಗಳ ಬಗ್ಗೆ ಗಮನ ಹರಿಸಿಲ್ಲ ಎನ್ನುವುದು ನೀವುಗಳು ಉಪಯೋಗಿಸಿದ ಭಾಷೆಯಿಂದ ಅಭಿವ್ಯಕ್ತವಾಗುತ್ತದೆ.

ನಿಮ್ಮ ಪ್ರತಿಕ್ರಿಯೆಗಳ ಬಗ್ಗೆ ಚರ್ಚಿಸುವ ಮೊದಲು ಶ್ರೀ ಗುರು ಬಸವಣ್ಣನವರ ಉದ್ದೇಶಗಳೇನು? ಈಗ ಪೂಜ್ಯ ಶ್ರೀ ಮಾತಾಜಿಯವರ ಉದ್ದೇಶವೇನು ಎಂಬುದನ್ನು ತಿಳಿಯೋಣ.

ಹನ್ನೆರಡನೇ ಶತಮಾನದ ಬಸವಣ್ಣನವರ ಕಾಲವೇ ಅತ್ಯುತ್ತಮವೆಂದು ಹೇಳಬಹುದು. ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರ ಕಾಲ ಕ್ರಾಂತಿಕಾರಿ ಸಾಹಿತ್ಯದ ಉದಯದ ಕಾಲ. ಶ್ರೀಗುರು ಬಸವಣ್ಣನವರು ವಚನಗಳ ಮುಖಾಂತರ ಮೇಲು-ಕೀಳು,ಜಾತಿ-ಧರ್ಮ, ಶೋಷಣೆ ಮುಂತಾದವುಗಳ ಕುರಿತು ಸಾಮಾನ್ಯರಿಗೂ ಅರ್ಥವಾಗುವಂತೆ ಹೇಳಿದ್ದಾರೆ.ಲಿಂಗಾಯತರು(ಭಕ್ತರು ಮತ್ತು ಮಠಾಧಿಪತಿಗಳು) ಬಸವಣ್ಣನವರು ಹಾಕಿಕೊಟ್ಟ ತತ್ವ ಸಿದ್ಧಾಂತಗಳನ್ನು ಮೂಲೆಗುಂಪು ಮಾಡಿ ಮತ್ತು ಅವರು ಹೇಳಿದಂತೆ ನಡೆದುಕೊಳ್ಳುತ್ತಾ ಬರಲಿಲ್ಲ. ಬ್ರಾಹ್ಮಣರು ರೂಪಿಸಿದ ವರ್ಣಾಶ್ರಮ ಪದ್ಧತಿ ಅನುಸರಿಸಿದರೇ ಹೊರತು ಸಮಾಜದಲ್ಲಿ ಬದಲಾವಣೆಗೆ ಮುಂದಾಗಲಿಲ್ಲ. ಬದಲು ವಚನ ಸಾಹಿತ್ಯವನ್ನು ಕಲುಷಿತಗೊಳಿಸಿದರು. ಇದರ ಪರಿಣಾಮ ಬಸವಣ್ಣನವರು ಕೊಟ್ಟ ಲಿಂಗಾಯತ ಧರ್ಮ ಧರ್ಮವಾಗಿ ಉಳಿಯಲಿಲ್ಲ. 15-16ನೇ ಶತಮಾನದಿಂದೀಚೆಗೆ ಬಸವಾದಿ ಶರಣರು ಹುಟ್ಟು ಹಾಕಿದ್ದ ತತ್ವ ಸಿದ್ಧಾಂತಗಳು ಕಲುಷಿತಗೊಂಡು ತಮ್ಮ ತಮ್ಮ ಪ್ರತಿಷ್ಠೆಗೆ ತಕ್ಕಂತೆ ಸಾಹಿತಿಗಳು/ಮಠಾಧಿಪತಿಗಳು ವಚನ ಸಾಹಿತ್ಯವನ್ನು ಕೆಡಿಸಿ ಹಾಳು ಮಾಡಿದ್ದಾರೆ.

ನಮ್ಮ ಪುಣ್ಯವೋ ಎಂಬಂತೆ 20-21ನೇ ಶತಮಾನದಲ್ಲಿ ಲಿಂ|| ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರಿಂದ ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ ಲಿಂಗಾಯತ/ಬಸವ ಧರ್ಮವು ಪುನರುತ್ಥಾನಕ್ಕೊಳಪಟ್ಟಿದೆ. 12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕ್ರಾಂತಿ ಇಂದು ಮರುಕಳಿಸಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು.ಅಂದು ಕೊಂಡಿಮಂಚಣ್ಣಗಳಿದ್ದರು.ಇಂದು ಕೂಡಾ ಕೊಂಡಿಮಂಚಣ್ಣಗಳಿದ್ದಾರೆ. ಇದು ಪ್ರಸ್ತಾವನೆ ಮಾತ್ರ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಅಕ್ಕಮಹಾದೇವಿಯವರ ವಚನಾಂಕಿತದ ಬಗ್ಗೆ ನಿಮ್ಮ ಕೀಳು ಮಟ್ಟದ ನಿಲುವನ್ನು ಈ ಪತ್ರದ ಮುಂದಿನ ಭಾಗಗಳಲ್ಲಿ ಪುನಃ ಚರ್ಚಿಸುತ್ತೇನೆ.

ಪ್ರಜಾವಾಣಿ ಪತ್ರಿಕೆಯ 30-07-2008ರ ಆವೃತ್ತಿಯಲ್ಲಿ ನಿಮ್ಮಗಳ ಅನಿಸಿಕೆ ಪ್ರಸ್ತಾಪಿಸಿರುವುದು ಹೊಸ ವಿಷಯವೇನೂ ಅಲ್ಲ.ಈಗ್ಗೆ 6-7 ವರ್ಷಗಳ ಹಿಂದೆಯೇ ಇದೇ ವಿಚಾರದಲ್ಲಿ ಶ್ರೀ ಶಿವಮೂರ್ತಿ ಶರಣರು,ಮುರುಘಾಮಠಾಧ್ಯಕ್ಷರು ಚಿತ್ರದುರ್ಗ, ಇವರು ತಕರಾರು ಮಾಡಿ ಪತ್ರಿಕೆಗಳಲ್ಲಿ ತಮ್ಮ ಆಕ್ರೋಶವನ್ನು ಪೂಜ್ಯ ಮಾತೆಯವರ ಮೇಲೆ ಅಭಿವ್ಯಕ್ತಪಡಿಸಿದ್ದಲ್ಲದೇ ಕೋರ್ಟಿಗೆ ಹೋಗುವ ಬೆದರಿಕೆಯನ್ನೂ ಹಾಕಿದ್ದರು.ಇಷ್ಟೇ ಅಲ್ಲದೇ ದಾವಣಗೆರೆಯಲ್ಲಿ ಕೆಲವು ಗೂಂಡಾ ಜನರನ್ನು ಒಗ್ಗೂಡಿಸಿ ಬಹಿರಂಗ ಮೆರವಣಿಗೆ ಮುಖಾಂತರ ತಮ್ಮ ನೇತೃತ್ವದಲ್ಲಿ ಪಾದ ಯಾತ್ರೆ ಮುಖಾಂತರ ಹೋರಾಟ ಮಾಡಿ ಭ್ರಮನಿರಸನ ಹೊಂದಿದ್ದನ್ನು ಜನತೆ ಮರೆತಿಲ್ಲ. ಇಷ್ಟು ವರ್ಷಗಳ ನಂತರ ಇದೇ ವಿಚಾರದಲ್ಲಿ ನೀವುಗಳು ಈಗ ತಕರಾರು ಮಾಡುತ್ತಿರುವುದು ತುಂಬಾ ಆಶ್ಚರ್ಯದ ಸಂಗತಿ. ಹಿಂದಿನ ಸಂದರ್ಭದಲ್ಲಿ ಪೂಜ್ಯ ಶ್ರೀ ಶಿವಮೂರ್ತಿ ಶರಣರಿಗೆ ಆವಾಗಲೇ ಅಂದು ತಾ. 03-04-2001 ರಲ್ಲಿ ನಾನೊಂದು ಸುದೀರ್ಘ ಪತ್ರ ಬರೆದು ಸಂಬಂಧಪಟ್ಟವರಿಗೆಲ್ಲಾ ಜೆರಾಕ್ಸ್ ಕಾಪಿಯನ್ನು ಕಳುಹಿಸಿದ್ದೇನೆ. ಯಾರೊಬ್ಬರೂ ಕೂಡಾ ಚಕಾರವೆತ್ತಲಿಲ್ಲ. ಸಂಕ್ಷಿಪ್ತವಾಗಿ ಪತ್ರದ ವಿಚಾರವೇನು ಎಂಬುದನು ಇಲ್ಲಿ ನಮೂದಿಸುತ್ತಿದ್ದೇನೆ.

ಈಗ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಅಕ್ಕನ ವಚನಗಳಲ್ಲಿ ಅಕ್ಕಮಹಾದೇವಿಯ ವಚನಾಂಕಿತ ಬದಲಿಸಿಲ್ಲ. ಅಂದಮೇಲೆ ತಿರುಚುವುದೆಲ್ಲಿಂದ ಬಂತು ? ಇಲ್ಲಿ ಕೃತಿ ಚೌರ್ಯವೂ ನಡೆದಿಲ್ಲ, ವಚನವನ್ನು ತಿರುಚಿಯೂ ಇಲ್ಲ. ಬದಲಾಗಿ -ಚನ್ನಮಲ್ಲಿಕಾರ್ಜುನ -ಹಾಗೆಯೇ ಇದೆ.ಕೆಲವು ವಚನಗಳಲ್ಲಿ ಅವರ ವಚನಗಳು ನಿರ್ದೇಶಿಸಿರುವುದು ನಿರಾಕಾರ ನಿರ್ಗುಣ ನಿರಂಜನನಾದ ಪರಮಾತ್ಮನ ಕುರುಹಾದ ಲಿಂಗದೇವನನ್ನು ಎಂದು ತಿಳಿಯಪಡಿಸಲೋಸುಗ ಚನ್ನಮಲ್ಲಿಕಾರ್ಜುನ ಎಂಬ ಮೂಲ ವಚನ ಮುದ್ರಿಕೆಗೆ-ಮಹಾದೇವಿಯಕ್ಕ ಪ್ರಿಯ ಲಿಂಗದೇವ-ಎಂದು ಸೇರಿಸಲಾಗಿದೆ. ಚನ್ನಮಲ್ಲಿಕಾರ್ಜುನ ಮುದ್ರಿಕೆ ಶ್ರೀಶೈಲದ ನಾಲ್ಕು ಗೋಡೆಯ ಮಧ್ಯೆ ಇರುವ ಸ್ಥಾವರ ಲಿಂಗದ ಪ್ರತೀಕವಲ್ಲ ಎಂದೂ, ಬದಲು ನಿರಾಕಾರ ನಿರ್ಗುಣ ನಿರಂಜನ ಸ್ವರೂಪನಾದ ಪರಮಾತ್ಮನನ್ನು ಸಂಕೇತಿಸುವುದು. ಅಂದರೆ ಲಿಂಗದೇವನ ಕುರುಹು ಎಂದು ದೃಢಪಡಿಸಲು ಮಾತೆಯವರು ಹಾಗೆ ಮಾಡಿದ್ದಾರೆ. ಇದು ಎಂತಹ ಸಾಮಾನ್ಯರಿಗೂ ಅರ್ಥವಾಗುತ್ತದೆ.ಆದರೆ ಈ ಪಂಡಿತೋತ್ತಮರಿಗೆ ಅರ್ಥವಾಗಿಲ್ಲವೇ ? ಮಾತೆಯವರ ನಿಲುವನ್ನು ಸೈದ್ಧಾಂತಿಕವಾಗಿ ಅರ್ಥೈಸುವುದನ್ನು ಬಿಟ್ಟು ವಿಕೃತ ಸಾಹಿತಿಗಳಾಗಿ ಮನಬಂದಂತೆ ಅರ್ಥೈಸಿದ್ದಾರೆ.

ಡಾ|| ಬಸವರಾಜ ಸಬರದರವರೇ: ಪೂಜ್ಯ ಶ್ರೀ ಮಾತೆಯವರನ್ನು ದ್ರೋಹದ ಕೆಲಸ ಮಾಡಿದ್ದಾರೆ ಎಂದು ಮೂದಲಿಸಿದ್ದೀರಿ. ಬಸವರಾಜ ಸಬರದರೇ ನೀವು ಜೀವಿತದಲ್ಲಿ ಏನೇನು ಧಾರ್ಮಿಕ ಕಾರ್ಯಗಳನ್ನು ಮಾಡಿದ್ದೀರಿ ಎಂದು ನನಗೆ ಪಟ್ಟಿ ಮಾಡಿ ಕೊಡಿರಿ. ಪೂಜ್ಯ ಮಾತೆಯವರು ಇಲ್ಲಿಯವರೆಗೂ ಮಾಡಿರುವ ಧಾರ್ಮಿಕ ಕಾರ್ಯಗಳನ್ನು ನೋಡಿ ಸಹಿಸದೆ ಅಸೂಯೆಯ ಮಾತುಗಳನ್ನಾಡಿದ್ದೀರಿ ಅಷ್ಟೇ ಎಂದು ನಿಮ್ಮ ಮಾತುಗಳಿಂದ ಅರ್ಥವಾಗುತ್ತದೆ.ಶ್ರೀ ಗುರು ಬಸವಣ್ಣನವರು ಬೋಧಿಸಿದ ಯಾವುದಾದರೊಂದು ತತ್ವ/ಸಿದ್ಧಾಂತವನ್ನು ನೀವು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೀರಾ ? ತಿಳಿಯ ಬಯಸುತ್ತೇನೆ. ಅನಂತರ ನಿಮ್ಮ ಪ್ರತಿಕ್ರಿಯೆಗೆ ನಾನು ಉತ್ತರಿಸುತ್ತೇನೆ.

ಡಾ|| ವೀರಣ್ಣ ದಂಡೆಯವರೇ : ನಿಮ್ಮ ಭಾಷೆಗೆ ಕಡಿವಾಣವೇ ಇಲ್ಲವೇ ? ನಿಮಗೂ ಕೂಡ ಇದೇ ಪ್ರಶ್ನೆ? ನೀವು ಕೂಡ ನಿಮ್ಮ ಜೀವನದಲ್ಲಿ ಏನು ಸಾಧಿಸಿದ್ದೀರಿ? ಏನೇನು ಧಾರ್ಮಿಕ ವಿಚಾರಗಳನ್ನು ಮೈಗೂಡಿಸಿಕೊಂಡು ಬೇರೆಯವರಿಗೆ ಕಲಿಸಿದ್ದೀರಿ. ತಿಳಿಯಬಹುದೇ ? ನೀವೂ ಕೂಡ ತತ್ವ ಸಿದ್ಧಾಂತಗಳ ಗೊಡವೆಗೆ ಹೋಗದೇ ನಿಮ್ಮ ಸಣ್ಣಬುದ್ಧಿಯಿಂದ ಮಾತೆಯವರ ಮೇಲಿನ ದ್ವೇಷವನ್ನು ತೀರಿಸಿಕೊಂಡಿದ್ದೀರಿ ಅಷ್ಟೆ.

ಡಾ|| ಎಂ.ಎಂ.ಕಲಬುರ್ಗಿಯವರೇ: ಪೂಜ್ಯ ಶ್ರೀ ಮಾತೆಯವರಿಗೆ "ದುಷ್ಟ ಪದ್ಧತಿ ನಿಲ್ಲಲಿ "ಎಂದು ಆಗ್ರಹಿಸಿದ್ದೀರಿ. ನಾನು ಒಬ್ಬ ನಿಮ್ಮ ಅಭಿಮಾನಿಯಾಗಿದ್ದೆನು. ಒಬ್ಬ ಮೇಧಾವಿ ಸಾಹಿತಿಗೆ ಇತಿಮಿತಿ ಇಲ್ಲದ ಭಾಷೆ ಅವರ ವ್ಯಕ್ತಿತ್ವಕ್ಕೆ ಕುಂದುತರುತ್ತದೆ. ಶ್ರೀ ಗುರು ಬಸವಣ್ಣನವರು ಸೃಷ್ಟಿಕರ್ತ ಪರಮಾತ್ಮನನ್ನು "ಲಿಂಗದೇವ" ಎಂದು ಕರೆದರು. ಲಿಂಗಾಯತ/ ಬಸವ ಧರ್ಮ ನಿಂತಿರುವುದು ಇಷ್ಟಲಿಂಗ ತತ್ವದ ಮೇಲೆ . "ಲಿಂಗದೇವ" ಶ್ರೀ ಗುರುವು ಸೃಷ್ಟಿಸಿದ ಏಕದೇವೋಪಾಸನೆಯ ಪರಿಕಲ್ಪನೆ. ಏಕದೇವೋಪಾಸನೆಯ ಸಿದ್ಧಾಂತವನ್ನು ಸ್ಥಿರೀಕರಿಸಲು ಮಾತೆಯವರು "ಲಿಂಗದೇವ" ಪದ ಬಳಸಿದ್ದಾರೆ. ಈ ಪದವನ್ನು ಶ್ರೀ ಗುರು ಬಸವಣ್ಣನವರೇ ಪ್ರಯೋಗಿಸಿದ್ದಾರೆ ಮತ್ತು ಅನುಸರಿಸಿ ಬೋಧಿಸಿದ್ದಾರೆ. (*It is only a Re-discovery*) ಮಾತೆಯವರು ಈ ಹುದುಗಿದ್ದ ಸತ್ಯವನ್ನು (ಸಿದ್ಧಾಂತವನ್ನು) ಹೊರತೆಗೆದು ನಮ್ಮೆಲ್ಲರಿಗೂ ತಿಳಿಯಪಡಿಸಿದ್ದಾರೆ. ಇದೊಂದು ಸತ್ಯ ಸಂಶೋಧನೆಯಲ್ಲದೇ ನೀವು ಬಡಬಡಿಸಿದಂತೆ ಅವರ ಸ್ವಾರ್ಥ ಸಾಧನೆಗಲ್ಲ ತಿಳಿಯಿರಿ. ಇದೇ ರೀತಿ ಮಾತೆಯವರು (1) ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಗುರು ಮಂತ್ರವನ್ನು ಪ್ರಚಾರ ಮಾಡಿ ಜನರ ಮನ ಮಂದಿರಗಳಿಗೆ ತಲುಪಿಸಿದ್ದಾರೆ. ಶ್ರೀ ಗುರು ಮಂತ್ರ-ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಯಾವ ಮಠಾಧಿಕಾರಿಗಳಿಗೆ ತಿಳಿದಿರಲಿಲ್ಲ? (2) ಲಿಂಗಾಯತ ಧರ್ಮ ಸಂಸ್ಥಾಪಕರು ಮತ್ತು ಇಷ್ಟಲಿಂಗ ಜನಕರು ಶ್ರೀ ಗುರು ಬಸವಣ್ಣನವರು ಎಂದು ಸಾರಿ ಸಾರಿ ಹೇಳಿ ಅನೇಕ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿ ಲಕ್ಷಾಂತರ ಅಂಧ ಭಕ್ತರನ್ನು ನಿಜ ಭಕ್ತರನ್ನಾಗಿ ಮಾಡಿದ್ದಾರೆ. ಇದೇನು ಸಾಮಾನ್ಯ ಸಾಧನೆಯೇ ಕಲಬುರ್ಗಿಯವರೇ? 3.ವೀರಶೈವ - ಲಿಂಗಾಯತ ಬೇರೆ ಬೇರೆ ಎಂದು ಪ್ರವಚನಗಳ ಮೂಲಕ ಸಾರಿ ಸಾರಿ ಹೇಳಿ ಹೇಳಿ (ಮತ್ತು ಅನೇಕ ಪುಸ್ತಕಗಳ ಮುಖಾಂತರ) ನಮ್ಮೆಲ್ಲರನ್ನು ವಿಚಾರವಂತರನ್ನಾಗಿ ಮಾಡಿದ್ದಾರೆ ಶ್ರೀ ಕಲಬುರ್ಗಿಯವರೇ ? ನಿಮಗೂ ಕೂಡ ವೀರಶೈವಕ್ಕೂ ಲಿಂಗಾಯತಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವ ಪರಮಸತ್ಯದ ಅರಿವು

Digitalized by e-Sahithya Documentation Forum
Sponsored by Sarayu Foundation Trust

ಆದದ್ದು ನಿಮ್ಮ ಆಯುಷ್ಯದ ಕೊನೇ ಭಾಗದಲ್ಲಿ ಅಲ್ಲವೆ! ಈ ವಿಚಾರವನ್ನು ಮಾತೆಯವರು 20 -25 ವರ್ಷಗಳಿಂದಲೂ ಹೇಳುತ್ತಾ ಬಂದು ಪುಸ್ತಕಗಳಲ್ಲಿಯೂ ಅಧಿಕೃತವಾಗಿ ಪ್ರಕಟಿಸಿ ನಮ್ಮೆಲ್ಲರನ್ನೂ ವಿಚಾರವಂತರನ್ನಾಗಿ ಮಾಡಿ ಲಿಂಗಾಯತ ಒಂದು ಧರ್ಮ; ವೀರಶೈವ ಒಂದು ಜಾತಿ/ ಪಂಥ/ ಪಂಗಡ ಎಂದು ಆಧಾರ ಸಹಿತ ಪುಷ್ಟೀಕರಿಸಿ ಒಂದು ಪರಮ ಸತ್ಯವನ್ನು ಕಂಡುಹಿಡಿದು ಕೊಟ್ಟಿದ್ದಾರೆ. ಈ ಒಂದು ಪರಮ ಸತ್ಯ ಕುರಿತು ಇನ್ನೂ ಕೆಲವು ಸಾಹಿತಿಗಳಿಗೆ ಮತ್ತು ಜಾತಿವಾದಿ ಮಠಾಧಿಕಾರಿಗಳಿಗೆ (ಸತ್ಯಾಂಶ ಗೊತ್ತಾದರೂ) ಒಪ್ಪಿಕೊಳ್ಳುವ ಸೌಜನ್ಯತೆ ಬಂದಿಲ್ಲ. ನಿಮ್ಮೆಲ್ಲರಿಗೂ ಇದೇ ರೀತಿ ಲಿಂಗದೇವ (Concept of Linga Deva) ಪರಮ ಸತ್ಯದ ಅರಿವು ಇಂದಲ್ಲ ನಾಳೆ ಆಗುತ್ತದೆ. ನಿಮ್ಮಗಳಿಗೆ ಅರ್ಥವಾಗದಿದ್ದರೂ (ಅರ್ಥವಾದರೂ ಒಪ್ಪಿಕೊಳ್ಳುವ ಸೌಜನ್ಯತೆ ಇಲ್ಲದ್ದರಿಂದ) ನಮ್ಮಂತಹ ಲಕ್ಷಾಂತರ ಬಸವಾಭಿಮಾನಿಗಳು, ಬಸವ ಭಕ್ತರು ಅವರ ನಡೆನುಡಿಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಮುಂದಿನ ಪೀಳಿಗೆ ಈ ಸತ್ಯವನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ; ಕಾಲವೇ ನಿರ್ಣಯಿಸುತ್ತದೆ.

ಇನ್ನೊಂದು ಆಪಾದನೆ ಮಾಡಿದ್ದೀರಿ. ಅದೇನೆಂದರೆ, ಇದಕ್ಕೆ ಅವಕಾಶ ಕೊಟ್ಟರೆ ನಾಳೆ, ಪಂಪ, ರನ್ನ, ಬೇಂದ್ರೆ, ಕುವೆಂಪು ಅವರ ಸಾಹಿತ್ಯ ವಿರೂಪ ಗೊಳಿಸಬಹುದು ಎಂದು ವ್ಯಂಗವಾಡಿದ್ದೀರಿ. ಇದು ನಿಮ್ಮ ಉದ್ಧಟತನವೆಂದೇ ಹೇಳ ಬಯಸುತ್ತೇನೆ. ಮಾತೆಯವರ ಉದ್ದೇಶವನ್ನು ತಾತ್ವಿಕವಾಗಿ, ಸೈದ್ಧಾಂತಿಕವಾಗಿ, ದಾರ್ಶನಿಕವಾಗಿ ಅರಿಯದೇ ಬಾಯಿಗೆ ಬಂದಂತೆ ಪ್ರತಿಕ್ರಿಯಿಸಿ ನಿಮ್ಮ ಚಪಲವನ್ನು ಪ್ರದರ್ಶಿಸಿದ್ದೀರಿ ಅಷ್ಟೆ.

ಪಂಪ, ರನ್ನ, ಕುವೆಂಪು, ಬೇಂದ್ರೆಯವರು ತಮ್ಮ ಕಾವ್ಯಗಳಿಗೆ ಅಂಕಿತನಾಮವನ್ನು ಇಟ್ಟುಕೊಂಡಿಲ್ಲ. ಬದಲು ಕಾವ್ಯನಾಮವನ್ನು ತಮ್ಮ ಹೆಸರಿನ ಬದಲು ಇಟ್ಟುಕೊಂಡು ಕಾವ್ಯಗಳನ್ನು ರಚಿಸಿದ್ದಾರೆ. ಕಾವ್ಯಗಳು ಪೂರ್ಣಗೊಂಡ ನಂತರ ಕಾವ್ಯನಾಮವನ್ನು ಮುದ್ರಿಸಿಕೊಂಡಿದ್ದಾರೆ. ಅಂದರೆ ಇದು ಇಂತಹವರು ಬರೆದ ಕಾವ್ಯವೆಂದು ಓದುಗರ ಗಮನಕ್ಕೆ ತರಲು ಅಷ್ಟೆ. ಆದರೆ ಅಂಕಿತನಾಮವನ್ನು ಶ್ರೀ ಗುರು ಬಸವಣ್ಣನವರು ತಮ್ಮ ವಚನದ ಕೊನೆಯಲ್ಲಿ ತಂದಿದ್ದಾರೆ. ತಮ್ಮ ವಚನಗಳ ಕೊನೆಯಲ್ಲಿ ವಚನಾಂಕಿತದಲ್ಲಿ ದೇವರನ್ನು ಉದ್ದೇಶಿಸಿದ್ದಾರೆ. ತಮ್ಮ ವಚನಗಳಲ್ಲಿ ದೇವರನ್ನು ನಿರ್ದೇಶಿಸುವ ಸಲುವಾಗಿ ವಚನಾಂಕಿತ ಬಳಸಿದ್ದಾರೆ. ಮೊದ ಮೊದಲು ಅವರು ಕೂಡಲ ಸಂಗಮದೇವ ಅಂಕಿತ ಉಪಯೋಗಿಸಿದ್ದಾರೆ. ಕಾರಣ ಅವರು ಶೈವ ಬ್ರಾಹ್ಮಣ ಮನೆತನದಲ್ಲಿ ಹುಟ್ಟಿದ್ದು ತಿಳಿದ ವಿಚಾರ; ನಂತರ ಕೂಡಲ ಸಂಗಮದ ಸಂಗಮೇಶ್ವರ ದೇವಸ್ಥಾನದಲ್ಲಿ ಅರ್ಚಕರಾದರು. ಅವರು ಶಿವೋಪಾಸಕ -ರಾಗಿದ್ದ ಕಾರಣ ಶಿವನನ್ನೇ ದೇವರೆಂದು ತಿಳಿದು ಕೂಡಲ ಸಂಗಮದ ಸಂಗಮನಾಥನನ್ನೇ (ಸ್ಥಾವರ ಲಿಂಗ) ದೇವರೆಂದು ನಂಬಿ ಆರಾಧಿಸಿ "ಕೂಡಲ ಸಂಗಮ ದೇವ" ಅಂಕಿತನಾಮ ಬಳಸಿದರು. ನಂತರ ಅವರು ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಮೀರಿದ ಸೃಷ್ಟಿಕರ್ತನೇ ಶ್ರೇಷ್ಠನೆಂದು ಘೋಷಿಸಿ ಆ ದೇವನನ್ನು "ಲಿಂಗದೇವ" ಎಂದು ಕರೆದರು. ಒಂದೇ ಒಂದು ಉದಾಹರಣೆಗೆ,

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ !
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಲಿಂಗದೇವಯ್ಯಾ, ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ !

ನಮ್ಮ ಕರಸ್ಥಳಕ್ಕೆ ಲಿಂಗದೇವ ಬಂದಿದ್ದಾನೆಯೇ ಹೊರತು ನಾಲ್ಕು ಗೋಡೆಗಳ ಮಧ್ಯೆ ಇರುವ ಸ್ಥಾವರ ಸೂಚಕ ಸಂಗಮನಾಥನಲ್ಲ ಎಂದು ಎಂತಹವರಿಗೂ ಅರ್ಥವಾಗುತ್ತದೆ. ಅಂದರೆ ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ ಎಂದು ಅರಿತು ದೇವನ ಸಾಕಾರಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ಲಿಂಗದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ಇಷ್ಟಲಿಂಗದ ಕಲ್ಪನೆಯಾದ ಬಳಿಕ ದೇವರನ್ನು "ಲಿಂಗದೇವ" ಎಂದು ಕರೆದರು. ಅಂದಮೇಲೆ ಶ್ರೀ ಗುರು ಬಸವಣ್ಣನವರೇ ಇಷ್ಟಲಿಂಗದ ಕಲ್ಪನೆಯ ನಂತರದ ವಚನಗಳಿಗೆ ಲಿಂಗದೇವ ಎಂದು ವಚನಾಂಕಿತ ಬದಲಿಸಿರಲೇ ಬೇಕು. ಕೈ ತಪ್ಪಿನಿಂದಲೋ, ದುರಾಲೋಚನೆ ಇಂದಲೋ ತಾಳೇಗರಿಯಿಂದ ತರ್ಜುಮೆ ಮಾಡುವಾಗ ಈ ಒಂದು ತಪ್ಪು ನಡೆದಿರಬೇಕು ಎಂಬುವುದು ನಮ್ಮೆಲ್ಲರ ಅಭಿಪ್ರಾಯ. ಇದನ್ನು ಒಪ್ಪಿಕೊಳ್ಳುವ ಸೌಜನ್ಯತೆ ಬೇಕು ಅಷ್ಟೆ. (It is only a Re-discovery of Mataji)

ಚನ್ನವೀರ ಕಣವಿಯವರೇ: ಪೂಜ್ಯ ಶ್ರೀ ಜಗದ್ಗುರು ಮಾತೆಯವರನ್ನು ಏಕವಚನದಲ್ಲಿ

ಮಾತೆಮಹಾದೇವಿಗೆ ಬುದ್ಧಿ ಬಂದಿಲ್ಲ ಎಂದು ಪ್ರತಿಕ್ರಿಯಿಸಿದ್ದೀರಿ. ಒಬ್ಬ ಶ್ರೇಷ್ಠ ದಾರ್ಶನಿಕ ಕವಯಿತ್ರಿ, ತತ್ವಜ್ಞಾನಿ, ಧಾರ್ಮಿಕ ರೂವಾರಿ, ಬಸವ ಧರ್ಮದ ಅದ್ವಿತೀಯ ನಾಯಕಿ, ಬಸವ ಧರ್ಮ ಪೀಠದ ಪೀಠಾಧ್ಯಕ್ಷೆಗೆ 20-21ನೇ ಶತಮಾನದಲ್ಲಿ ನಮ್ಮೆಲ್ಲರ ಉದ್ಧಾರಕ್ಕೆಂದು ಅವತರಿಸಿ ಬಂದ, ಬಸವಣ್ಣನವರ ತತ್ವಗಳನ್ನು ಅರಿತು, ಆಚರಣೆ ಮಾಡಿ ತೋರಿಸಿ ಲಕ್ಷಾಂತರ ಬಸವ ಭಕ್ತರ ಹೃದಯ ಕಮಲದಲ್ಲಿ ನೆಲೆಗೊಂಡು ಧರ್ಮಕ್ರಾಂತಿಯನ್ನೇ ಮಾಡುತ್ತಿರುವ ಒಬ್ಬ ಸ್ತ್ರೀ ಜಗದ್ಗುರುವಿಗೆ ಏಕವಚನದಲ್ಲಿ ಸಂಬೋಧನೆ! ನಿಮಗೆ ವಯಸ್ಸಾಗಿದೆ ಅಷ್ಟೆ. ಬುದ್ಧಿಯಂತೂ ಇಲ್ಲವೆಂದು ನನ್ನ ಮತ್ತು ನನ್ನ ಅನೇಕ ಮಿತ್ರರ ಅಭಿಪ್ರಾಯ. ಬರೀ ವಯಸ್ಸಾದರೇ ಸಾಲದು ಜ್ಞಾನಾರ್ಜನೆ ಬೇಕು. ನಿಮ್ಮ ವಯಸ್ಸಿಗೆ ತಕ್ಕಂತೆ ನೀವು ಪ್ರತಿಕ್ರಿಯಿಸಿಲ್ಲ. ಎಷ್ಟೋ ವರ್ಷಗಳಿಂದ ಹುದುಗಿದ್ದ ನಿಮ್ಮ ಮಾತ್ಸರ್ಯದ ತೀಟೆಯನ್ನು ತೀರಿಸಿಕೊಳ್ಳಲು ಕಾದಿದ್ದೀರೆಂದು ಎಂತಹವರಿಗೂ ಭಾಸವಾಗುತ್ತದೆ. ಕೆಟ್ಟ ಮೇಲೂ ಮಾತೆಯವರಿಗೆ ಬುದ್ಧಿ ಬಂದಿಲ್ಲ ಎಂದು ಪ್ರತಿಕ್ರಿಯಿಸಿದ್ದೀರಿ. ಅವರು ಕೆಟ್ಟಿಲ್ಲ ಬದಲು ನಿಮಗೇ ಬುದ್ಧಿ ಭ್ರಮಣೆಯಾಗಿರ ಬಹುದು ಎಂದು ನಮ್ಮೆಲ್ಲರ ಅಭಿಪ್ರಾಯ. ಈಗ 40 -50 ವರ್ಷಗಳಿಂದ ಪೂಜ್ಯ ಶ್ರೀ ಮಾತೆಯವರು ನಡೆದು ಬಂದ ದಾರಿ ಅವರು ಪ್ರತಿವರ್ಷ ನಡೆಸಿಕೊಂಡು ಹೋಗುತ್ತಿರುವ ಶರಣ ಮೇಳ ಮತ್ತು ಬಸವ ಕಲ್ಯಾಣದಲ್ಲಿ ಪ್ರತಿವರ್ಷ ನಡೆಸುತ್ತಿರುವ ಕಲ್ಯಾಣಪರ್ವವನ್ನು ಒಮ್ಮೆಯಾದರೂ ನಿಮ್ಮ ಜೀವಿತದಲ್ಲಿ ವೀಕ್ಷಿಸಿರಿ ಕಣವಿಯವರೇ ? ಲಕ್ಷಾಂತರ ಲಿಂಗಾಯತ ಧರ್ಮೀಯರು/ ಬಸವಾನುಯಾಯಿಗಳ ಧರ್ಮ ಸಮ್ಮೇಳನ 20 -21ನೇ ಶತಮಾನದಲ್ಲಿ ನಡೆಯುತ್ತಿರುವ ಅದ್ಭುತ ಧಾರ್ಮಿಕ ಕಾರ್ಯಕ್ರಮಗಳು. ನೀವೆಲ್ಲರೂ ಪೇಪರ್ ಹುಲಿಗಳು ಅಷ್ಟೆ. ನೀವು ನಿಮ್ಮ ಹೇಳಿಕೆಯಲ್ಲಿ ಬಡಬಡಿಸಿದಂತೆ ಶ್ರೀ ಗುರು ಬಸವಣ್ಣನವರ ತತ್ವ - ಸಿದ್ಧಾಂತಗಳನ್ನು ನಿಮ್ಮ ಜೀವನದಲ್ಲಿ ಅಪ್ಪಿತಪ್ಪಿಯಾದರೂ ನಡೆದು ಕೊಂಡಿದ್ದೀರಾ, ಕಣವಿಯವರೇ? ಒಬ್ಬ ಮುತ್ಸದ್ಧಿಯನ್ನು ಮೂದಲಿಸುವ ಮೊದಲು ನೀವು ಧಾರ್ಮಿಕ ಚಿಂತನೆ ಮತ್ತು ನಡವಳಿಕೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡರೆ ಒಬ್ಬ ಕೊಂಡಿ ಮಂಚಣ್ಣ ಕಡಿಮೆಯಾಗುತ್ತಾನೆಂದು ಹೇಳಲು ಬಯಸುತ್ತೇನೆ.

ಜಿ.ಎಸ್.ಎಸ್.ರವರೇ : ನಿಮ್ಮ ಹೇಳಿಕೆಯಲ್ಲಿ ಅಂಕಿತವನ್ನು ಬದಲಿಸಿದ ವಚನಗಳನ್ನು ಯಾರೂ ಸ್ವೀಕರಿಸಿಲ್ಲ ಎಂದಿದ್ದೀರಿ. ಇದು ನಿಮ್ಮ ಮೂಗಿನ ನೇರಕ್ಕೆ ಆಡಿದ ಮಾತು. ನಾನು ನನ್ನ ಜೀವನದಲ್ಲಿ ಲಿಂಗದೇವ ಪದವನ್ನು ಅಳವಡಿಸಿಕೊಂಡು ಪೂಜಿಸುವಾಗ, ಪ್ರಾರ್ಥಿಸುವಾಗ, ಬರೆಯುವಾಗ ಅನುಸರಿಸುತ್ತಿದ್ದೇನೆ. ಕೂಡಲ ಸಂಗಮದೇವ ಪದ ನನಗೆ ಬಹುಮಟ್ಟಿಗೆ ಮರೆತೇ ಹೋಗಿದೆ. ನನ್ನಂತಹ ಲಕ್ಷಾಂತರ ಬಸವ ಭಕ್ತರು/ ಲಿಂಗಾಯತರು ಅಳವಡಿಸಿಕೊಂಡಿದ್ದಾರೆ. ಬೇರೆಯವರ ಅಭಿಪ್ರಾಯ ಮಂಡಿಸಲು ನಿಮಗಾರು ಅಧಿಕಾರ ಕೊಟ್ಟಿದ್ದಾರೆ? ಯಾರೂ ಸ್ವೀಕರಿಸಿಲ್ಲ ಎಂದು ಹೇಳಲು ನೀವ್ಯಾರು? ಉದಾ: ಲಕ್ಷಾಂತರ ಬಸವ ಭಕ್ತರು ಪ್ರತಿವರ್ಷ ಶ್ರೀ ಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳದಲ್ಲಿ, ಹಾಗೂ ಬಸವ ಕಲ್ಯಾಣದಲ್ಲಿ ನಡೆಯುವ ಕಲ್ಯಾಣ ಪರ್ವದಲ್ಲಿ ಮತ್ತು ಪ್ರತಿ ಭಾನುವಾರ ನಡೆಸಿಕೊಂಡು ಬರುತ್ತಿರುವ ಹಳ್ಳಿಯಿಂದ ದಿಲ್ಲೀವರೆಗೆ ಬಸವ ಮಂಟಪಗಳಲ್ಲಿ ನಡೆಯುವ ಭಾನುವಾರದ ಪ್ರಾರ್ಥನಾ ಸಭೆಗಳಲ್ಲಿ ಅಂಕಿತವನ್ನು ಲಿಂಗದೇವ ಎಂದು ಬಳಸಲಾಗುತ್ತಿದೆ. ನೀವು ಹೇಗೆ ತಾನೇ ಯಾರೂ ಅನುಸರಿಸಿಲ್ಲ ಎನ್ನುತ್ತೀರಿ? ಇದು ನಿಮ್ಮ ಉದ್ಧಟತನವಲ್ಲದೇ ಮತ್ತೇನು ? ನಿಮಗೆ ರಾಷ್ಟ್ರಕವಿ ಬಿರುದು ಬಂದಿರಬಹುದು. ಅದು ನಿಮ್ಮ ಸಾಹಿತ್ಯಕ್ಕೆ ಸಂದ ಗೌರವ. ನಿಮ್ಮ ವಿಚಾರ ಧಾರೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಮೀಸಲು ಎನಿಸುತ್ತದೆ. ಸಾಹಿತ್ಯಕ್ಕೂ ಧರ್ಮಕ್ಕೂ ಅಜಗಜಾಂತರ ವ್ಯತ್ಯಾಸ. ದರ್ಶನ ಶಾಸ್ತ್ರದಿಂದ ಕೂಡಿದ ಸಾಹಿತ್ಯ ಧರ್ಮಕ್ಕೆ ಸಂಬಂಧ ಪಡುತ್ತದೆ. ನಿಮ್ಮ ಹೇಳಿಕೆಯಿಂದ ನಿಮಗೆ ವಚನ ಶಾಸ್ತ್ರದ ಪೂರ್ಣ ಅರಿವಿಲ್ಲ. ಅರಿವಿದ್ದರೂ ತತ್ವಜ್ಞಾನ ಮತ್ತು ದರ್ಶನ ಶಾಸ್ತ್ರದ ಹಿನ್ನೆಲೆಯಿಲ್ಲ. ವಚನ ಶಾಸ್ತ್ರ ಬರೀ ಹೇಳುವುದಕ್ಕೆ ಮಾತ್ರವೆಂದು ನೀವು ತಿಳಿದಂತೆ ಕಾಣುತ್ತದೆ. ಅಳವಡಿಸಿಕೊಂಡವರ ಚಿಂತನೆಯೇ ಬೇರೆ. ಶರಣರ ಸಾಹಿತ್ಯ ದರ್ಶನ ಶಾಸ್ತ್ರವನ್ನೊಳಗೊಂಡ ಅನುಭಾವ ಸಾಹಿತ್ಯ. ನಿಮ್ಮ ಸಾಹಿತ್ಯ ಬರೀ ಬರಹ. ಅಲ್ಲಿ ಅನುಭಾವ ಗೌಣ. ಅಂದಮೇಲೆ ನಿಮ್ಮ ಟೀಕಾಸ್ತ್ರ ಒಬ್ಬ ಅನುಭಾವಿಗಳೂ, ದಾರ್ಶನಿಕರೂ ಆದ ಮಾತೆಯವರಿಗೆ ಆಡಿದ್ದು ಅಸಮಂಜಸ.

ರವೀಂದ್ರನಾಥ ಠಾಕೂರರು ಒಂದು ಮಾತು ಹೇಳಿದ್ದಾರೆ. "ಜ್ಞಾನಿಗಳು ಸತ್ಯವನ್ನು ನಿರ್ಮಿಸುತ್ತಾರೆ. ಅವರು ನಿರ್ಮಿಸಿದ ಸತ್ಯಕ್ಕೆ ಹೋರಾಡಲು ತಮ್ಮ ಜೀವಿತವನ್ನೇ ಮುಡುಪಾಗಿಡುತ್ತಾರೆ. ಎಂತಹ ಸಂದರ್ಭದಲ್ಲಿಯೂ ಒತ್ತಡಕ್ಕೆ ಮಣಿಯದೆ ಸತ್ಯವನ್ನು ಪ್ರತಿಷ್ಠಾಪಿಸಲು ಹೋರಾಡುತ್ತಾರೆ. ಆದರೆ ನೀವು ಬುದ್ಧಿವಂತರು/ ಜಾಣರು ಎಂದು ತಿಳಿದವರು ಈ ಸತ್ಯದ ಬಗ್ಗೆ ಮತ್ತು ಸತ್ಯವನ್ನು ನಿರ್ಮಾಣ

Digitalized by e-Sahithya Documentation Forum
Sponsored by Sarayu Foundation Trust

ಮಾಡಿದವರ ಬಗ್ಗೆ ಚರ್ಚಿಸುತ್ತಾ ತಮ್ಮ ಜೀವಮಾನವನ್ನೇ ಹಾಳು ಮಾಡಿಕೊಳ್ಳುತ್ತಾರೆ. ಹೀಗೇ ನಡೆದಿದೆ ಇಂದಿನ ಸಾಹಿತಿಗಳ ನಡವಳಿಕೆ.

ಡಾ|| ಎಂ.ಚಿದಾನಂದ ಮೂರ್ತಿಗಳೇ : ನೀವು ಮಾತಾಜಿಯವರದು ಹುಚ್ಚು ಪ್ರವೃತ್ತಿ ಎಂದು ಮೂದಲಿಸಿದ್ದೀರಿ. ಕೊನೆ ಪಕ್ಷ ನಾನು ಏನನ್ನು ಪ್ರತಿಕ್ರಿಯಿಸಿದ್ದೇನೆ ಎಂದು ತಿಳಿದು ಪ್ರತಿಕ್ರಿಯಿಸಬೇಕು, ಮಹಾದೇವಿ ಅಕ್ಕ ಪ್ರಿಯ ಲಿಂಗದೇವ ಎಂದು ಬದಲಿಸಿದ್ದಾರೆ ಎಂದು ವ್ಯಕ್ತಪಡಿಸಿದ್ದೀರಿ. ಚನ್ನಮಲ್ಲಿಕಾರ್ಜುನ ಮುದ್ರಿಕೆ ಹಾಗೆಯೇ ಉಳಿಸಿಕೊಂಡು "ಮಹಾದೇವಿ ಅಕ್ಕ ಪ್ರಿಯ ಲಿಂಗದೇವಾ" ಎಂದು ಸೇರಿಸಿದ್ದಾರೆ. ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂದು ಸೇರಿಸಿರುವುದನ್ನು ಸೂಕ್ಷ್ಮವಾಗಿ ವಿಚಾರಮಾಡಿರಿ. ಇದರ ಸೂಕ್ಷ್ಮವನ್ನು ಮತ್ತು ಇದರ ಹಿಂದೆ ಇರುವ ಉದ್ದೇಶವೇನು? ಎಂಬುವುದು ನಿಮಗೆ ಮುಖ್ಯವಾದಂತಿಲ್ಲ. ನಿಮ್ಮ ಉದ್ದೇಶ ನಿಂದನೆ ಮಾಡುವುದಷ್ಟೇ! ಡಾ|| ಚಿ.ಮೂ. ಎಂದಾಕ್ಷಣ ಎಷ್ಟೋ ಬಾರಿ ನನ್ನ ಎದುರಿನಲ್ಲಿಯೇ, ನನ್ನ ಅನೇಕ ಮಿತ್ರರೂ, ಬಸವಾಭಿಮಾನಿಗಳೂ ಚಿ|| ಮೂ|| ಒಬ್ಬ ಹುಚ್ಚ ಎಂದು ಮೂದಲಿಸಿದ್ದಾರೆ. ನಿಮ್ಮ ವಿಚಾರಗಳಿಗೆ ಜನತೆ ಈಗ ಅಷ್ಟಾಗಿ ಬೆಲೆ ಕೊಡುತ್ತಿಲ್ಲ. ವೀರಶೈವ ಮತ್ತು ಲಿಂಗಾಯತ ಪದಗಳ ಅರ್ಥವನ್ನೇ ನೀವಿನ್ನೂ ತಿಳಿದುಕೊಂಡಿಲ್ಲ. ವೀರಶೈವ ಜಾತಿ ಸೂಚಕ ಪದ ಆದರೆ ಲಿಂಗಾಯತ ಧರ್ಮ ಸೂಚಕ ಪದ. ನೀವು ಒಬ್ಬ ಜಾತಿವಾದಿ ಸಾಹಿತಿಗಳೆಂದು ಬಸವ ಭಕ್ತರಿಗೆಲ್ಲಾ ಅರಿವಾಗಿ ನಿಮ್ಮ ವಿತಂಡ ವಾದಕ್ಕೆ ಯಾರೂ ಬೆಲೆ ಕೊಡುತ್ತಿಲ್ಲ. ನಿಮ್ಮ ಪ್ರತಿಕ್ರಿಯೆಗೆ ಬೆಲೆ ಕೊಡುವ ಅಗತ್ಯವಿಲ್ಲ. ಇನ್ನೊಂದು ವಿಷಾದದ ಸಂಗತಿ ಎಂದರೆ ನೀವು ಇಷ್ಟಲಿಂಗವನ್ನೇ ಕೊರಳಲ್ಲಿ ಕಟ್ಟಿಲ್ಲ ಎಂದು ಎಲ್ಲರೂ ಹೇಳುತ್ತಾರೆ. ನೀವು ಯಾವ ಸೀಮೆ ಲಿಂಗಾಯತರು? ಶ್ರೀ ಗುರು ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮಕ್ಕೆ ಇಷ್ಟಲಿಂಗದ ಕಲ್ಪನೆಯ ಸಿದ್ಧಾಂತವೇ ಮೂಲ ಸಿದ್ಧಾಂತ. ನೀವು ಲಿಂಗಾಯತರೇ ಅಲ್ಲ. ಅಂದಮೇಲೆ ಶ್ರೀ ಗುರು ಬಸವಣ್ಣನವರ ಬಗ್ಗೆಯಾಗಲೀ, ಅವರು ಪ್ರತಿಪಾದಿಸಿದ ಸಿದ್ಧಾಂತಗಳ ಬಗ್ಗೆಯಾಗಲೀ ಮಾತನಾಡುವ ನೈತಿಕ ಹಕ್ಕನ್ನೇ ಕಳೆದು ಕೊಂಡಿದ್ದೀರಿ. ಅಂದರೆ ಒಬ್ಬ ದಾರ್ಶನಿಕ ಮಹಿಳಾ ಜಗದ್ಗುರುಗಳ ಬಗ್ಗೆ ಮಾತಾಡಲು ನಿಮಗಾರು ಅಧಿಕಾರ ಕೊಟ್ಟರು? ಇದಕ್ಕೆ ಮೊದಲು ಉತ್ತರಿಸಿರಿ. ಆ ಮೇಲೆ ಬೇರೆಯವರ ಬಗ್ಗೆ ಮಾತನಾಡಿರಿ ಎಂದು ಆಗ್ರಹಿಸುತ್ತೇನೆ.

ಶ್ರೀಯುತ ಗೊ.ರು.ಚನ್ನಬಸಪ್ಪನವರೇ : ಒಂದು ಸತ್ಯವನ್ನು ನಿಮಗೆ ಹೇಳಬಯಸುತ್ತೇನೆ. ಗೊ.ರು.ಚ. ಎಂದರೆ ಬುಡುಬುಡಕೆ ಸಾಹಿತಿ ಎಂದು ಜನರ ಅಭಿಪ್ರಾಯ. ಹೌದಪ್ಪನ ಚಾವಡಿಯಲ್ಲಿ ಹೌದಪ್ಪ ಅಲ್ಲಪ್ಪನ ಚಾವಡಿಯಲ್ಲಿ ಅಲ್ಲಪ್ಪ ಎಂದು ಜನತೆ ನಿಮ್ಮ ಬಗ್ಗೆ ಪ್ರತಿಕ್ರಿಯಿಸುತ್ತಿದ್ದಾರೆ. ಶರಣ ಸಾಹಿತ್ಯ ಪರಿಷತ್ ಎಂಬುವ ಸಂಸ್ಥೆಯನ್ನು ಪೂಜ್ಯ ಶ್ರೀ ಸುತ್ತೂರು ಮಠಾಧ್ಯಕ್ಷರು ಹುಟ್ಟು ಹಾಕಿದ್ದು ಎಲ್ಲರೂ ತಿಳಿದ ವಿಚಾರ. ನೀವು ಅದರ ಅಧ್ಯಕ್ಷರು. ಶರಣ ಸಾಹಿತ್ಯದ ಬಗ್ಗೆ ಗಂಧವಿಲ್ಲದವರ ಜೊತೆ ನಿಮ್ಮ ಬೇಹುಗಾರಿಕೆ. ಅಲ್ಲಿ ನೀವು ಬಹುದೊಡ್ಡವರು. ವರ್ಷಕ್ಕೊಮ್ಮೆ ಶರಣ ಸಾಹಿತ್ಯ ಪರಿಷತ್ತಿನ ಗೋಷ್ಠಿ ಮಾಡಿ ಅದ್ದೂರಿಯಾಗಿ ಹಣ ಖರ್ಚು ಮಾಡಿ ತತ್ವ ಸಿದ್ಧಾಂತಗಳನ್ನು ಚರ್ಚಿಸದೆ ಮತ್ತು ಅನುಕರಣೆ ಮಾಡದೇ ಹೋದರೆ ಏನು ಪ್ರಯೋಜನ. ನಿಮಗೆ ಪೂಜ್ಯ ಮಾತಾಜಿಯವರ ಬಗ್ಗೆ ಮಾತನಾಡಲು ಯಾವ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿದ್ದೀರಿ? ಶ್ರೀಮಂತ ಮಠದ ಸ್ವಾಮಿಗಳಿಗೆ ಜೀ ಹುಜೂರ್ ಎನ್ನುತ್ತಿರುವ ನೀವು ನಿಮ್ಮ ಜೀವನದಲ್ಲಿ ಏನೇನು ಸಾಧನೆ ಮಾಡದ್ದೀರಿ ಎಂದು ತಿಳಿಯಬಹುದೇ?

ಇನ್ನೊಬ್ಬ ಅವಿವೇಕಿ ಫಾಲನೇತ್ರ ಎಂಬುವವರು ತಾ. 4-08-08ರ ಪ್ರಜಾವಾಣಿ ಪತ್ರಿಕೆಯಲ್ಲಿ ಕರ್ನಾಟಕ ವಿಚಾರ ವೇದಿಕೆ ಎಂಬ ಸಂಸ್ಥೆಯ ಪರವಾಗಿ ಪೂಜ್ಯ ಮಾತೆಯವರನ್ನು ಏಕವಚನದಲ್ಲಿ ನಿರ್ದೇಶಿಸಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ. ಈತನ ಪ್ರತಿಕ್ರಿಯೆಯನ್ನು ನೋಡಿದರೆ ಈತ ಎಂತಹ ಅನಾಗರಿಕ ಎಂದು ಎಂತಹವರಿಗೂ ಅರ್ಥವಾಗದೇ ಇರದು. ಈ ದೇಶದಲ್ಲಿ ಎಂತಹ ಕ್ರಿಮಿನಲ್‌ಗಳು, ಭ್ರಷ್ಟಾಚಾರಿಗಳು, ದೇಶದ್ರೋಹಿಗಳು, ಭ್ರಷ್ಟ ರಾಜಕಾರಣಿಗಳು ಅಟ್ಟಹಾಸದಿಂದ ರಾಜಾರೋಷವಾಗಿ ಮೆರೆಯುತ್ತಿದ್ದಾರೆ ಎಂದು ತಿಳಿದೂ ಅಂತಹವರ ಬಗ್ಗೆ ಚಕಾರವೆತ್ತದೆ, ಒಬ್ಬ ಮಹಾನ್ ತತ್ವಜ್ಞಾನಿಗಳೂ, ದಾರ್ಶನಿಕರೂ ಆದ ಪೂಜ್ಯ ಶ್ರೀ ಮಾತಾಜಿಯವರ ಬಗ್ಗೆ ಇಷ್ಟು ಕ್ಷುಲ್ಲಕ ಆಪಾದನೆ ಮಾಡಿ ಮಹತ್ಕಾರ್ಯ ಮಾಡಿದ್ದೇನೆಂದು ಬೀಗುತ್ತಿರಬೇಕು. ಇಂತಹ ಕ್ಷುಲ್ಲಕ ಜನರಿಂದಲೇ ನಮ್ಮ ದೇಶ ದಿನೇ ದಿನೇ ಧಾರ್ಮಿಕವಾಗಿ, ನೈತಿಕವಾಗಿ, ಸಾಂಸ್ಕೃತಿಕವಾಗಿ ಹಿಂದುಳಿದು ಎಲ್ಲಾ ನೈತಿಕ ಆಚರಣೆಗಳಿಗೆ ಜನರು ಇತಿಶ್ರೀ ಹಾಡುತ್ತಿದ್ದಾರೆ.

ದಿ. 6-08-08ರಂದು ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಶ್ರೀ ಗುರು ಬಸವಣ್ಣನವರ 813ನೆಯ

ಲಿಂಗೈಕ್ಯ ಸಂಸ್ಮರಣೆ ಕಾರ್ಯಕ್ರಮವನ್ನು ಬಸವ ಧರ್ಮ ಪೀಠ, ಲಿಂಗಾಯತ ಧರ್ಮ ಮಹಾಸಭಾ ಮತ್ತು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಆ ಸಮಾರಂಭ ಬೆಳಿಗ್ಗೆ ಹತ್ತು ಗಂಟೆಗೆ ಶುರುವಾಗಿ ಬಸವೇಶ್ವರ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರೊಂದಿಗೆ, ಸಾಯಂಕಾಲ 7 ಘಂಟೆಗೆ ಪ್ರಾರ್ಥನೆಯೊಡನೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಈ ಒಂದು ಸಂಸ್ಮರಣೆಯ ದಿನವನ್ನು ಸಡಗರ ಸಂಭ್ರಮಗಳಿಂದ ಭಕ್ತಿ ಪೂರ್ವಕವಾಗಿ ಆಚರಿಸಲಾಯಿತು. ಒಂದು ಸುಂದರ ಹಬ್ಬದ ವಾತಾವರಣ ಕಂಗೊಳಿಸಿತ್ತು. ಈ ಸಮಾರಂಭದಲ್ಲಿ ಭಾಗವಹಿಸುವುದು ಒಂದು ಪುಣ್ಯ ವಿಶೇಷವೆಂದೇ ಅಲ್ಲಿ ನೆರದಿದ್ದ ಎಲ್ಲರ ಅಭಿಮತ.

ಆದರೆ ಕಾರ್ಯಕ್ರಮ ಪ್ರಾರಂಭವಾಗುವ ಮುನ್ನ 15-20 ಜನರ ಗುಂಪು ಪುರಭವನದ ಮುಂದೆ ಹುಚ್ಚಾಬಟ್ಟೆ ಕೂಗಾಡುತ್ತಿದ್ದುದು ತಿಳಿಯಿತು. ಈ ಗುಂಪು ಪೂಜ್ಯ ಶ್ರೀ ಮಾತಾಜಿಯವರು ಹಮ್ಮಿಕೊಂಡಿದ್ದ ಸಮಾರಂಭವನ್ನು ಕೆಡಿಸಲೋಸುಗ ಎಂದು ಪೋಲಿಸಿನವರಿಂದ ತಿಳಿದು ಬಂತು. ಕೆಲವು ಕರ ಪತ್ರಗಳನ್ನು ಹಂಚಲಾಯಿತು. ಕರ ಪತ್ರವನ್ನು ನಾನೂ ನೋಡಿದೆನು ಮತ್ತು ಓದಿದೆನು. ಯಾರ ಹೆಸರೂ ಇರದಿದ್ದ ನೀರಸ ಕರಪತ್ರದ ಭಾಷೆ ಎಂತಹ ಕನ್ನಡ ತಿಳಿದ ಧರ್ಮಾಭಿಮಾನಿಗಳಿಗೂ ಬೇಸರ ಹುಟ್ಟಿಸುವಂತಿತ್ತು. ಧರ್ಮವಂತರು ಬಳಸುವ ಭಾಷೆಯಲ್ಲ. ಕರಪತ್ರದಲ್ಲಿ ವಿಚಾರಗಳನ್ನು ನೋಡಿದರೆ ಗೂಂಡಾ ಸಾಹಿತ್ಯವೆಂದು ಅನ್ನಿಸದೇ ಇರದು. ಖಂಡಿತಾ ಇಂತಹ ಭಾಷೆಯನ್ನು ವಚನ ಸಾಹಿತ್ಯಾಭಿಮಾನಿಗಳು ಬಳಸಲಾರರು. ಇದರಲ್ಲಿ ಶ್ರೀಯುತ ಗೊ.ರು.ಚನ್ನಬಸಪ್ಪ, ಡಾ|| ಚಿ.ಮೂರ್ತಿ, ಶ್ರೀ ಲೀಲಾದೇವಿ ಆರ್.ಪ್ರಸಾದ್ ಮುಂತಾದವರು ಇದ್ದರು. ಕೆಲವೊಂದು ಹೆಣ್ಣು ಮಕ್ಕಳೂ ಇದ್ದರಂತೆ. ಅವರೆಲ್ಲರೂ ಯಾವುದೋ (*Beauty Contest*) ಒಂದು ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದಿದ್ದಂತೆ ಕಾಣುತ್ತಿದ್ದರು ಎಂದು ಅಲ್ಲಿದ್ದ ಒಬ್ಬ ಪೋಲೀಸ್ ಪೇದೆಯ ಪ್ರತಿಕ್ರಿಯೆ.

ಎಂತಹ ಜನರಿವರು? ವಿಶ್ವಗುರು ಬಸವಣ್ಣನವರ ಲಿಂಗೈಕ್ಯ ದಿನಾಚರಣೆಯ ಪುಣ್ಯ ದಿನ ಇಂತಹ ನೀಚ ವೃತ್ತಿಗೆ ಇಳಿದಿದ್ದಾರೆ ಎಂದು ಅಲ್ಲಿ ನೆರೆದಿದ್ದ ಬಸವ ಭಕ್ತರ ವಿಶ್ಲೇಷಣೆ. ಪೂಜ್ಯ ಮಾತಾಜಿಯವರನ್ನು ವಿರೋಧಿಸಲು ಬೇರೆ ದಿನಗಳಿರಲಿಲ್ಲವೇ ? ಲಿಂಗೈಕ್ಯ ದಿನವನ್ನೇ ಭಕ್ತಿಯಿಂದ ಆಚರಿಸುವುದನ್ನು ಬಿಟ್ಟು ಈ ರೀತಿ ಗೂಂಡಾಗಿರಿ ಮಾಡುವುದು ಯಾವ ಧರ್ಮ ಸಂಸ್ಕಾರ? ಎಂದೆಲ್ಲ ಬಸವ ಭಕ್ತರ ಆಕ್ರೋಶ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯದಿದ್ದಡೆ
ಲಿಂಗದೇವನೆಂತೊಲಿವನಯ್ಯಾ

ಸಾಹಿತಿಗಳೇ, ಶ್ರೀ ಗುರು ಬಸವಣ್ಣನವರ ಈ ಮಾತುಗಳನ್ನು ನೀವು ಪತ್ರಿಕೆಯಲ್ಲಿ ಪ್ರತಿಕ್ರಿಯಿಸಿರುವ ಭಾಷೆಗೆ ಹೋಲಿಸಿ ನೋಡಿರಿ. ನೀವೆಂತಹ ಸಾಹಿತಿಗಳು ಎಂದು ನಿಮಗೇ ಅರ್ಥವಾಗುತ್ತದೆ.

ಕೊನೆಯಲ್ಲಿ ಮತ್ತೊಮ್ಮೆ ಒಂದೆರಡು ಮಾತುಗಳು. ಪೂಜ್ಯ ಶ್ರೀ ಮಾತೆಯವರು ಅಕ್ಕ ಮಹಾದೇವಿಯವರ ವಚನಗಳಿಗೆ ತಾತ್ವಿಕ ವಿಶ್ಲೇಷಣೆ ನೀಡಿದ್ದಾರೆಯೇ ಹೊರತು ತಿರುಚಿಲ್ಲ. ಸೈದ್ಧಾಂತಿಕ ದೃಷ್ಟಿಕೋನದಿಂದ ಚನ್ನಮಲ್ಲಿಕಾರ್ಜುನ ಅಂಕಿತದ ನಂತರ ಮಹಾದೇವಿಯಕ್ಕ ಪ್ರಿಯ ಲಿಂಗದೇವ ಎಂಬುದಾಗಿ ಸೇರಿಸಿದ್ದಾರೆ. ನಿರಾಕಾರದೇವರ ಕಲ್ಪನೆ ಸ್ಪಷ್ಟವಾಗಲು ಈ ರೀತಿ ಮಾಡಿದ್ದಾರೆ. ಆದರೆ ನಿಮ್ಮಂತಹ ಕೆಳಮಟ್ಟದ ಸಾಹಿತಿಗಳು ವೈಜ್ಞಾನಿಕ ಸಂಶೋಧನೆ ನಡೆಸಿ ಸೇರಿಸಿರುವ ಈ ಅಂಶವನ್ನು ಅರ್ಥಮಾಡಿಕೊಳ್ಳದೆ ಬೊಬ್ಬೆ ಹಾಕುತ್ತಿದ್ದೀರಿ. ಇದರ ಜೊತೆ ಪರದೆಯ ಹಿಂದೆ ಕೆಲವು ಶ್ರೀಮಂತ ಮಠಾಧಿಪತಿಗಳ ಕುಮ್ಮಕ್ಕೂ ಇದೆ ಎಂದು ತಿಳಿದು ಬಂದಿದೆ. ಒಟ್ಟಿನಲ್ಲಿ ನಿಮ್ಮಂತಹ ಸಾಹಿತಿಗಳು ಮತ್ತು ಜಾತಿವಾದಿ ಮಠಾಧಿಕಾರಿಗಳೂ ಸೇರಿ ದುರುದ್ದೇಶದಿಂದ ಪೂಜ್ಯ ಶ್ರೀ ಮಾತೆಯವರ ಬಗ್ಗೆ ಅಪಪ್ರಚಾರ ಕೈಗೊಂಡು ಅಸೂಯೆ ಮತ್ತು ದ್ವೇಷದಿಂದ ವರ್ತಿಸುತ್ತಿರುವುದು ಬಸವ ಭಕ್ತರಿಗೆ ತಿಳಿಯದೇ ಇಲ್ಲ.

15ನೇ ಶತಮಾನದಿಂದ ಈಚೆಗೆ ಪುರೋಹಿತ ಶಾಹಿ ಶಕ್ತಿಗಳ ಕೈಯಲ್ಲಿ ಶರಣರ ವಚನಗಳು ಕಲುಷಿತಗೊಂಡಿರುವುದು ಎಲ್ಲರಿಗೂ ತಿಳಿದ ವಿಚಾರ. ಶುದ್ಧೀಕರಣ ಮಾಡಲು ಪೂಜ್ಯ ಶ್ರೀ ಮಾತೆಯವರು

Digitalized by e-Sahithya Documentation Forum
Sponsored by Sarayu Foundation Trust

ಕಂಕಣ ಬದ್ಧರಾಗಿ ಈ ದಿಶೆಯಲ್ಲಿ ಸಂಶೋಧನೆ ನಡೆಸಿ ಲಿಂಗಾಯತ / ಬಸವ ಧರ್ಮಕ್ಕೆ ಒಂದು ಚೌಕಟ್ಟನ್ನು ತಂದುಕೊಡಲು ಶ್ರಮಿಸಿದ್ದಾರೆ. ಇವರ ಧ್ಯೇಯ ಧೋರಣೆಗಳನ್ನೂ, ಅವರ ಜ್ಞಾನ ಭಂಡಾರ ಮತ್ತು ಕಳಕಳಿಯನ್ನು ಅರ್ಥ ಮಾಡಿಕೊಳ್ಳುವ ಸೌಜನ್ಯತೆಯನ್ನು ನಾವೆಲ್ಲರೂ ಬೆಳೆಸಿಕೊಳ್ಳಬೇಕು.

ಕೊನೇ ಮಾತು. 12ನೇ ಶತಮಾನದಲ್ಲಿ ಶ್ರೀ ಗುರು ಬಸವಣ್ಣನವರು ಏನು ತಪ್ಪು ಮಾಡಿದ್ದರೆಂದು ಗಡಿಪಾರು ಶಿಕ್ಷೆಗೆ ಗುರಿಯಾದರು ? ಇದಕ್ಕೆ ಪ್ರೇರಣೆ ಮಾಡಿದವರು ಯಾರು? ಸಂಪ್ರದಾಯವಾದಿಗಳಲ್ಲವೇ ? 12ನೇ ಶತಮಾನದಲ್ಲಿ ಆದದ್ದೇ ಈಗಲೂ ನಡೆದಿದೆ ಎನ್ನಬಹುದು. ಜಾತಿವಾದಿಗಳಿಗೆ, ಸಂಪ್ರದಾಯವಾದಿಗಳಿಗೆ, ಪೂಜ್ಯ ಶ್ರೀ ಮಾತಾಜಿಯವರು ಮಾಡುತ್ತಿರುವ ಕ್ರಾಂತಿಕಾರಿ ವಿಚಾರ ಧಾರೆಗಳಿಗೆ ಸಹಮತವಿಲ್ಲ. ಆದರೆ ಲಕ್ಷಾಂತರ ಬಸವ ಭಕ್ತರು ಅವರ ಹಿಂದೆ ಇದ್ದಾರೆ ಎನ್ನುವುದನ್ನು ಮರೆಯದಿರಿ. ಸಾಮಾನ್ಯರೇ ವಿಚಾರ ವಾದಿಗಳು ಮತ್ತು ಧರ್ಮ ಚಿಂತಕರು; ಮೇಲ್ವರ್ಗದ ಜನರು ವಿದ್ಯಾವಂತರಿರಬಹುದು. ಆದರೆ ಅವರು ಧರ್ಮಚಿಂತಕರೂ ಅಲ್ಲ ಧರ್ಮವಂತರೂ ಅಲ್ಲ.

ಇಷ್ಟಾದರೂ, ಸೃಷ್ಟಿಕರ್ತ ಲಿಂಗದೇವ, ಧರ್ಮಪಿತ ಬಸವಣ್ಣನವರು ಇನ್ನಾದರೂ ನಿಮ್ಮೆಲ್ಲರ ಕಣ್ಣು ತೆರೆಸಲೆಂದು ಹಾರೈಸುತ್ತೇನೆ.

-ಹೆಚ್.ಎ.ಶರಣಪ್ಪ, ಅಕ್ಕಮಹಾದೇವಿ ನಿಲಯ
ನಿವೃತ್ತ ಚೀಫ್ ಅಕೌಂಟ್ಸ್ ಆಫೀಸರ್, ಕೆ.ಇ.ಬಿ
ನಂ. 157, 4ನೇ ಮುಖ್ಯರಸ್ತೆ 3ನೇ ಸ್ಟೇಜ್ 3ನೇ ಬ್ಲಾಕ್,
ಬಸವೇಶ್ವರ ನಗರ, ಬೆಂಗಳೂರು -79

7ನೆಯ ಕಲ್ಯಾಣ ಪರ್ವ - ಕಾರ್ಯಕ್ರಮ ವಿವರ

ಶರಣ ಭೂಮಿ ಬಸವ ಕಲ್ಯಾಣದಲ್ಲಿ 2008ರ ಅಕ್ಟೋಬರ್ 12, 13, 14ರಂದು 7ನೆಯ ಕಲ್ಯಾಣ ಪರ್ವವು ಜರುಗಲಿದೆ.

ಕಾರ್ಯಕ್ರಮ ವಿವರ ಹೀಗಿದೆ :

ದಿ. 12-10-2008, ದೇವ (ಭಾನು)ವಾರ

ಉದ್ಘಾಟನೆ - ಬೆಳಿಗ್ಗೆ 10-30,
ಸಾಮೂಹಿಕ ಪ್ರಾರ್ಥನೆ - ಶರಣ ಸಂಗಮ
ಭಾಷಣ ಸ್ಪರ್ಧೆ - ಮಧ್ಯಾಹ್ನ 3- 30ರಿಂದ 6-00
ಚಿಂತನ ಗೋಷ್ಠಿ - ಸಂಜೆ 6-30ರಿಂದ
ಸಾಂಸ್ಕೃತಿಕ ಕಾರ್ಯಕ್ರಮ - ರಾತ್ರಿ 9 ಗಂಟೆ

ದಿ. 13-10-2008, ಶಿವ (ಸೋಮ)ವಾರ

ಸಾಮೂಹಿಕ ಇಷ್ಟಲಿಂಗ ಪೂಜೆ ಬೆಳಿಗ್ಗೆ 7-30
ಶರಣ ವಂದನೆ ಬೆಳಿಗ್ಗೆ 10- 30
ಧಾರ್ಮಿಕ ರಸಪ್ರಶ್ನೆ ಸ್ಪರ್ಧೆ ಮಧ್ಯಾಹ್ನ 3-30
ಶೂನ್ಯ ಪೀಠದ ವಾರ್ಷಿಕೋತ್ಸವ ಸಂಜೆ 6-00
ಸಾಂಸ್ಕೃತಿಕ ಕಾರ್ಯಕ್ರಮ ರಾತ್ರಿ 9 ಗಂಟೆ.

ದಿ. 14-10-2008, ಬಸವ (ಮಂಗಳ)ವಾರ

ಸಾಮೂಹಿಕ ಇಷ್ಟಲಿಂಗ ಪೂಜೆ ಬೆಳಿಗ್ಗೆ 7-30
ಬಸವ ಭಾವಚಿತ್ರ ಮೆರವಣಿಗೆ ಬೆಳಿಗ್ಗೆ 9-00
ಸಮಾರೋಪ ಸಮಾರಂಭ ಬೆಳಿಗ್ಗೆ 11-30

ವಿಶೇಷ ಸೂಚನೆ : ಸ್ಥಳಾಭಾವದಿಂದ ಧರ್ಮಪಿತರ ವಚನಗಳಿಗೆ ವ್ಯಾಖ್ಯಾನದ ವಿಷಯ ಈ ಸಂಚಿಕೆಯಲ್ಲಿ ಹಾಕಲು ಸಾಧ್ಯವಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಬರಲಿದೆ.

- ವ್ಯವಸ್ಥಾಪಕರು




ಶರಣ ಭೂಮಿ ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ 108ಅಡಿ ಗುರು ಬಸವ ಪುತ್ಥಳಿಯ ಬೆನ್ನುಹುರಿ ಮತ್ತು ಮುಖದ ಮಾದರಿ



ಶ್ರಾವಣ ಮಾಸದ ನಿಮಿತ್ತ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ನಡೆದ ಶರಣ ಸಂಗಮ ಕಾರ್ಯಕ್ರಮದಲ್ಲಿ ಧ್ವಜಾರೋಹಣ ಮಾಡುತ್ತಿರುವ ಶರಣ. ಮೋಹನ ನಾಗಮ್ಮನವರ್ ಹಾಗೂ ಶರಣರು

Digitalized by e-Sahithya Documentation Forum
Sponsored by Sarayu Foundation Trust



Digitalized by e-Sahithya Documentation Forum
Sponsored by Sarayu Foundation Trust